"JANAPADA" Monthly - Aug 2017
"ಜನಪದ" ಮಾಸಿಕ – ಆಗಸ್ಟ್ 2017

Page No. -52
RNI No. KAR/KAN/2010/20676

Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26



ವಾರ್ಷಿಕ ಚಂದಾ ರೂ.25/–

# ಜನಪದ

ಆಗಸ್ಟ್ 2017




## ಡಾ. ಬಿ. ಆರ್. ಅಂಬೇಡ್ಕರ್
## ಅಂತರರಾಷ್ಟ್ರೀಯ ಸಮ್ಮೇಳನ - 2017



ನಿವೃತ್ತ ಐ.ಎ.ಎಸ್ ಅಧಿಕಾರಿ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಅವರು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪುನರ್ ರಚನೆ ಸಮಿತಿಯ ವರದಿಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ಎಂ.ಲಕ್ಷ್ಮೀನಾರಾಯಣ, ನಿರ್ದೇಶಕರಾದ ಶ್ರೀ ಎನ್.ಆರ್.ವಿಶುಕುಮಾರ್, ಸಮಿತಿಯ ಸದಸ್ಯರುಗಳಾದ ನಿವೃತ್ತ ಐ.ಎ.ಎಸ್ ಅಧಿಕಾರಿ ಡಾ.ಕೃಷ್ಣಮೂರ್ತಿ, ಹಿರಿಯ ಪತ್ರಕರ್ತರಾದ ಶ್ರೀ ರಾಜ ಶೈಲೇಶ್ ಚಂದ್ರ ಗುಪ್ತಾ, ಪ್ರಜಾವಾಣಿ ಉಪ ಸಂಪಾದಕರಾದ ಇಸ್ಮಾಯಿಲ್, ದ ವೀಕ್ ನ ಸ್ಥಾನಿಕ ಸಂಪಾದಕರಾದ ಶ್ರೀ ಕೆ.ಎಸ್. ಸಚ್ಚಿದಾನಂದ ಮೂರ್ತಿ ಇಲಾಖೆಯ ಉಪನಿರ್ದೇಶಕರಾದ ಶ್ರೀ ಹೆಚ್.ಬಿ.ದಿನೇಶ್ ಅವರು ಉಪಸ್ಥಿತರಿದ್ದರು.

ಜುಲೈ 19 ರಂದು ಗಾಂಧಿಭವನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗ 2016 ರಲ್ಲಿ ನಡೆಸಿದ ನಾಗರಿಕ ಸೇವಾ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದ ಕೆ.ಆರ್.ನಂದಿನಿ ಅವರನ್ನು ಸೇರಿದಂತೆ ಉನ್ನತ ಶ್ರೇಣಿ ಪಡೆದ ರಾಜ್ಯದ 59 ಜನ ಅಭ್ಯರ್ಥಿಗಳನ್ನು ಸನ್ಮಾನಿಸದ ಸಂದರ್ಭ





# ಜನಪದ

ಸಂಪುಟ–60
ಸಂಚಿಕೆ–5
ಆಗಸ್ಟ್ 2017

05 ಡಾ. ಬಿ. ಆರ್. ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನ 2017
• ಜಡಿಯಪ್ಪ ಗೆದ್ಲಗಟ್ಟೆ

16 ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ದೀವಟಿಗೆ
• ಎನ್. ಜಗನ್ನಾಥ ಪ್ರಕಾಶ್

19 ಮಾವಿನಗುಂಡಿಯ ಮಹಿಳಾ ಸತ್ಯಾಗ್ರಹಿಗಳು
• ವೀರಣ್ಣ ಚೌಲೂರ್

21 ಕಿತ್ತೂರ ಕಿಡಿ : ಸಂಗೊಳ್ಳಿ ರಾಯಣ್ಣ
• ಸುರೇಶ್ ಗೋವಿಂದರಾವ್ ದೇಸಾಯಿ

24 ದೇಶಭಕ್ತ ಮಹಾದೇವ ಹರಿಭಾಯಿ ದೇಸಾಯಿ
• ಗೋವಿಂದರಾವ್

26 ರಾಷ್ಟ್ರವೇ ಮೆಚ್ಚಿದ ಹಳ್ಳಿ ರೈತರ ಹೆಮ್ಮೆಯ ಸಾಧನೆ
• ಕಿಶನ್ ರಾವ್ ಕುಲಕರ್ಣಿ

31 ನೀರಿಗಾಗಿ ಅರಣ್ಯ
• ಉಮೇಶ್ ಕೋಲಿಗೆರೆ

35 ಅರಣ್ಯ ಹಕ್ಕು ಇನ್ನೂ ಸಾಫ್ಟ್
• ಹಿಮಂತರಾಜು ಜಿ.

37 ಬರದಲ್ಲೂ ಬೃಹತ್ ಗೊನೆಯ ಭರ್ಜರಿ ಬಾಳೆ
• ತುಕಾರಾಂರಾವ್ ಬಿ. ವಿ.

40 ವೀಳೆದೆಲೆ ಬೆಳದ ರೈತ ತಾನೂ ಬೆಳೆದ
• ಅಶೋಕ್ ಕುಮಾರ್ ಡಿ.

42 ವಿದ್ಯಾರ್ಥಿಗಳ ಶಿಸ್ತಿನ,ಕಲಿಕೆಯ ತಾಣ – ಬಿಡನಾಳ ಶಾಲೆ
• ಮಂಜುನಾಥ ಬಿ. ಡೊಳ್ಳಿನ

44 ಮುಂಡಿಗೆ ವನದಲ್ಲಿ ಬೆಳ್ಳಕ್ಕಿಗಳ ಬಾಣಂತಣ
• ಗಣಪತಿ ಹಾಸ್ಪುರ

47 ನಮ್ಮ ಶಾಲೆ... ಸಮ್ಮ ಸರ್ಕಾರ
• ಪರಮೇಶ್ವರಯ್ಯ ಸೊಪ್ಪಿಮಠ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ


ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ




ಗಣಿಧೂಳಿನಿಂದ ತತ್ತರಿಸುತ್ತಿರುವ ಬಳ್ಳಾರಿ ಜಿಲ್ಲೆಯನ್ನು ಹಸರೀಕರಣ ಮಾಡುವ ಸಲುವಾಗಿ ವೃಕ್ಷಮಿತ್ರ ಸಂಸ್ಥೆ ಅವರು ಹಮ್ಮಿಕೊಂಡಿರುವ " ಗಿವ್ ಆಪ್ ಕಾಫಿ ಅಭಿಯಾನ ನಿಜಕ್ಕೂ ಪ್ರಶಂಸನೀಯವಾದುದು. ಈ ಅಭಿಯಾನಕ್ಕೆ ಬಳ್ಳಾರಿಯ ಪ್ರತಿಯೊಬ್ಬ ನಾಗರೀಕರೂ ಒಂದು ಹೊತ್ತಿನ ಕಾಫಿಯನ್ನು ತ್ಯಜಿಸಿ ಅದರ ಮೊತ್ತವನ್ನು ಗಿಡದ ನೀರಿನ ಅವಶ್ಯಕತೆಗೆ ನೀಡುವಂತಾದರೆ ಒಂದೆರಡು ವರ್ಷದಲ್ಲಿ ಜಿಲ್ಲೆಯ ಚಿತ್ರಣವೇ ಬದಲಾಗುತ್ತದೆ. ಜನರನ್ನು ಈ ದೆಸೆಯಲ್ಲಿ ಜಾಗೃತಗೊಳಿಸುವಂತಹ ಲೇಖನ ನಿಜವಾಗಿಯೂ ಚನ್ನಾಗಿ ಮೂಡಿ ಬಂದಿದೆ.

**–ಶಂಕರ್ ಕುಮಾರ್**
ಬಳ್ಳಾರಿ

ಜುಲೈ 2017 ರ ಸಂಚಿಕೆಯಲ್ಲಿ 'ಸರಕಾರಿ ಶಾಲೆಗಳ ಸಾಧನೆ ಕಡಿಮೆಯಲ್ಲ' ಲೇಖನ ಅತ್ಯುತ್ತಮವಾಗಿ ಮೂಡಿ ಬಂದಿದೆ. ನಗರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಇಂಗ್ಲಿಷ್ ವ್ಯಾಮೋಹದಿಂದ ಒಂದು ಭ್ರಮೆ ಸೃಷ್ಟಿಯಾಗಿದೆಯೇ ಹೊರತು, ಸರಕಾರಿ ಶಾಲೆಗಳ ಸಾಧನೆ ತಿಳಿದಿಲ್ಲ. ಇಂದಿಗೂ ಸರಕಾರಿ ಶಾಲೆ ಮಕ್ಕಳೇ ಹೆಚ್ಚು ಪ್ರತಿಭಾವಂತರು ಎಂದು ಈ ಲೇಖನ ಓದಿದರೆ ತಿಳಿಯುತ್ತದೆ. ಗ್ರಾಮೀಣ ಭಾಗದ ಮಕ್ಕಳು ಸಮಸ್ಯೆಗಳ ನಡುವೆ ನಗರ ಪ್ರದೇಶದ ಖಾಸಗಿ ಶಾಲೆಗಳ ಮಕ್ಕಳೊಂದಿಗೆ ಪೈಪೋಟಿ ನಡೆಸಿ ಉನ್ನತ ಸ್ಥಾನ ಗಿಟ್ಟಿಸುವುದು ಸವಾಲಿನ ವಿಷಯವೇ ಸರಿ. ಇದು ನಮ್ಮ ನಗರ ಪ್ರದೇಶದ ಜನರಿಗೆ ತಿಳಿಯಬೇಕು.

**–ಲಾವಣ್ಯ**
ಬೆಂಗಳೂರು

ಸುಂದರ ಮುಖಪುಟದ ಜನಪದ ಜುಲೈ 2017ರ ಸಂಚಿಕೆಯನ್ನು ಓದಿದವನೇ ಮನಸ್ಸಿಗೆ ತೃಪ್ತಿಯಾಗದೆ ಮತ್ತೆ ಮತ್ತೆ ಮನದಣಿಯೆ ಓದಿ ಪುನೀತನಾದೆ, ಸಂಚಿಕೆ ಮಾಹಿತಿ ಪೂರ್ಣವಾಗಿತ್ತಲ್ಲದೆ ಅರ್ಥಪೂರ್ಣ ಹಾಗು ಮೌಲ್ಯಾಧಾರಿತವಾದ ಬರಹಗಳಿಂದ ಕಂಗೊಳಿಸುತ್ತಿದ್ದು, ಓದುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ.

ಎಲ್ಲಕಿಂತ ಹೆಚ್ಚಾಗಿ ನನ್ನ ಮಾತ್ರೋಶ್ರೀ ಕಾದಂಬರಿಕಾರ್ತಿ ದಿವಂಗತ ಎಂ.ಕೆ.ಇಂದಿರಾರವರ ಬದುಕು ಬರಹಗಳ ಬಗ್ಗೆ ನೈಜವಾದ ಚಿತ್ರಣವನ್ನು ಅನಾವರಣಗೊಳಿಸಿರುವ ವೈ.ಕೆ.ಸಂಧ್ಯಾಶರ್ಮರವರ ಲೇಖನ ಓದಿ ನನ್ನ ಹೃದಯ ಹೂವಿನಂತೆ ಅರಳಿತು. ಲೇಖನವನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

**– ಎಂ.ಕೆ.ಮಂಜುನಾಥ್**
ಬೆಂಗಳೂರು

'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ಷಿಕ ಚಂದಾ ರೂ.25/–

ವಿಕಲಚೇತನರಿಗೆ ಸರ್ಕಾರದಿಂದ ಸಾಕಷ್ಟು ಯೋಜನೆಗಳಿರುವುದು ನಿಜವಾಗಲೂ ಸಮಾಧಾನದ ವಿಚಾರ. ಈ ಬಗ್ಗೆ ಸೂಕ್ತ ಮಾಹಿತಿ ಇಲ್ಲದಿರುವುದರಿಂದ ಈಗಲೂ ಬಹಳಷ್ಟು ವಿಕಲಚೇತನರಿಗೆ ಮಾಹಿತಿಯ ಕೊರತೆಯಿಂದ ಸರ್ಕಾರದ ಯೋಜನೆಗಳು ದೊರಕದಂತಾಗಿದೆ. ಇಂತಹ ಲೇಖನಗಳನ್ನು ಪ್ರಕಟಿಸುವ ಮೂಲಕ ವಿಕಲಚೇತನರನ್ನು ಜಾಗೃತಗೊಳಿಸಿದರೆ, ವಿಕಲಚೇತನರಿಗೆ ಸಹಾಯವಾಗುವುದಲ್ಲದೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದು ಖಚಿತ.

**–ಸುಮಂತ್**
ಮೈಸೂರು

ಮೈಸೂರಿನಲ್ಲಿ ಮಾಹಿತಿ ಉತ್ಸವ ಲೇಖನ ತುಂಬಾ ಚನ್ನಾಗಿ ಮೂಡಿಬಂದಿದೆ. ಮಾನ್ಯ ಮುಖ್ಯಮಂತ್ರಿ ಅವರ ಜಿಲ್ಲೆಯಲ್ಲಿ ಜರುಗಿದ ಈ ಕಾರ್ಯಕ್ರಮವನ್ನು ಕಣ್ಣಾರೆ ಕಂಡು ಸಂಭ್ರಮಿಸಿದ ನನಗೆ ಈ ಲೇಖನವು ಮತ್ತೊಮ್ಮೆ ಕಾರ್ಯಕ್ರಮವನ್ನು ಮೆಲುಕು ಹಾಕುವಂತೆ ಮಾಡಿತು. ಮುಖ್ಯಮಂತ್ರಿ ಅವರು ನುಡಿದಂತೆ ನಡೆದುಕೊಳ್ಳುತ್ತಿರುವುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿತ್ತು. ಲೇಖನದಲ್ಲಿ ಮಾಹಿತಿ ಉತ್ಸವದ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಅಲ್ಲದೆ ಲೇಖನಕ್ಕೆ ಬಳಸಿಕೊಂಡಿರುವ ಛಾಯಚಿತ್ರಗಳು ಮುಖ್ಯಮಂತ್ರಿಯವರ ಕಾರ್ಯವೈಖರಿಯನ್ನು ಎತ್ತಿಹಿಡಿಯುವಂತಿವೆ. ಲೇಖನಕ್ಕೆ ನೀಡಿರುವ 'ಕೊಟ್ಟ ಮಾತು ದಿಟ್ಟ ಸಾಧನೆಯಾಗಿ ಅನಾವರಣ' ಶೀರ್ಷಿಕೆ ಕೂಡ ಸೊಗಸಾಗಿದೆ.

**_ಚಂದನ್**
ಮೈಸೂರು



Dr. B.R. AMBEDKAR
INTERNATIONAL CONFERENCE 2017
QUEST FOR EQUITY



## ಜ್ಞಾನದ ಹಣತೆಯ ಹಬ್ಬ
# ಡಾ.ಬಿ.ಆರ್.ಅಂಬೇಡ್ಕರ್
## ಅಂತರರಾಷ್ಟ್ರೀಯ ಸಮ್ಮೇಳನ – 2017

**ಜಡಿಯಪ್ಪ ಗೆದ್ಲಗಟ್ಟಿ**
ವಾರ್ತಾ ಸಹಾಯಕರು

**ಡಾ:** ಬಿ.ಆರ್. ಅಂಬೇಡ್ಕರ್ 126ನೇ ವರ್ಷಾಚರಣೆ ಅಂಗವಾಗಿ ರಾಜ್ಯ ಸರ್ಕಾರ ದೇಶದಲ್ಲೇ ಮೊದಲ ಬಾರಿಗೆ ಹಮ್ಮಿಕೊಂಡಿರುವ ಡಾ: ಬಿ.ಆರ್. ಅಂಬೇಡ್ಕರ್ ಅಂತರ ರಾಷ್ಟ್ರೀಯ ಸಮ್ಮೇಳನ ಜ್ಞಾನದ ಹಣತೆಯ ಹಬ್ಬವಾಗಿತ್ತು. ದೇಶ–ವಿದೇಶಗಳಿಂದ ಮತ್ತು ನಮ್ಮ ರಾಜ್ಯದ ಮೂಲೆ ಮೂಲೆಯಿಂದ ಆಗಮಿಸಿದ್ದ ಸಮಾನ ಮನಸ್ಕರರ ಸಮ್ಮಿಲನವಾಗಿತ್ತು.

'ಸಾಮಾಜಿಕ ನ್ಯಾಯದ ಮರು ಅನುಷ್ಠಾನ ಹಾಗೂ ಬಾಬಾಸಾಹೇಬರ ಪುನರ್ ಪ್ರವೇಶ' ವಿಷಯದಡಿ ಹಮ್ಮಿಕೊಂಡಿದ್ದ ಸಮ್ಮೇಳನ ಸರ್ಕಾರ ಸಹ ಸಮಾಜಿಕ ಕಳಕಳಿಯ ಕುರಿತು ಸಾವಿರಾರು ಜನರನ್ನು ಒಂದು ವೇದಿಕೆಯಡಿ ತಂದು ಹಲವಾರು ವಿಷಯಗಳನ್ನು ಕುರಿತು ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ತನ್ನ ಸಮಾಜಿಕ ಕಾಳಜಿಗೆ ಕೈಗನ್ನಡಿಯಾಗಿತ್ತು.



ಡಾ.ಬಿ.ಆರ್.ಅಂಬೇಡ್ಕರ್ ಎಂಬ ಬಡವರ ಮನೆಯ ಹಣತೆ ಪ್ರಕಾಶಿಸಲು ಪ್ರಾರಂಭಿಸಿದ್ದು ಒಂದು ಶತಮಾನದ ಕೆಳಗೆ. ತಾನು ಉರಿದು ಜಗತ್ತಿಗೆ ಬೆಳಕು ನೀಡುವ ದೀಪದ ಬದುಕು ಸಾಗಿಸಿದ ಡಾ.ಬಿ.ಆರ್.ಅಂಬೇಡ್ಕರ್ ಹುಟ್ಟಿದ್ದು ಏಪ್ರಿಲ್ 14, 1891 ರಲ್ಲಿ. ಶಿಕ್ಷಣವೊಂದೆ ನಮ್ಮ ಜೀವನದ ಬೆಳಕಾಗಬಲ್ಲದು ಎಂಬುದನ್ನು ಅರಿತಿದ್ದ ಅವರು ಓದಿನ ದಾರಿ ಹಿಡಿದು 1913ರಲ್ಲಿ ಬಾಂಬೆ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದು ನಂತರ ಬರೋಡ ಮಹಾರಾಜರಿಂದ ತಿಂಗಳಿಗೆ 11.5 ಡಾಲರ್ಸ್ ಸ್ಕಾಲರ್‌ಶಿಪ್ ಪಡೆದು ಅಂದಿನ ಕಾಲದಲ್ಲಿ ಉನ್ನತ ಮಟ್ಟದ ಶಿಕ್ಷಣ ಪಡೆಯಲು ಅಮೇರಿಕಾಕ್ಕೆ ತೆರಳಿದರು. ಸತತ ನಾಲ್ಕು ವರ್ಷಗಳ ಪರಿಶ್ರಮದಿಂದ ನ್ಯೂಯಾರ್ಕ್ ನಗರದ ಕೊಲಂಬಿಯ ವಿಶ್ವವಿದ್ಯಾನಿಲಯದಿಂದ 1917ರಲ್ಲಿ ಮೊದಲ ಪಿಎಚ್‌ಡಿ ಪದವಿ ಪಡೆದರು. ಸರಿಯಾಗಿ ನೂರು ವರ್ಷಗಳ ಹಿಂದೆ ವಿದೇಶದಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಡಾಕ್ಟರೇಟ್ ಪಡೆದ ಮೊದಲ ಭಾರತೀಯ ದಲಿತ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಸ್ವಾತಂತ್ರ್ಯ ನಂತರದ ಭಾರತದ ಬೆಳಕಾದ ಜ್ಞಾನದ ನಂದಾದೀಪ ಡಾ.ಬಿ.ಆರ್.ಅಂಬೇಡ್ಕರ್ ಉನ್ನತ ಶಿಕ್ಷಣ ಪಡೆದು ಭಾರತಕ್ಕೆ ಮರಳಿದ ಮೇಲೆ ಯಾವುದಾದರು ಉನ್ನತ ಹುದ್ದೆಗೇರಿ ಕೂರಬಹುದಿತ್ತು ಅಥವಾ ಬ್ರಿಟೀಷರ ಕೈಗೊಂಬೆಯಾಗಿ ಉನ್ನತ ಸ್ಥಾನಮಾನವನ್ನು ಅನುಭವಿಸಬಹುದಾಗಿತ್ತು. ತಾನು ನೆಡೆದು ಬಂದ ಹಾದಿಯನ್ನು ಮರೆಯದ ಅಂಬೇಡ್ಕರರು ಎರೆಡೆರೆಡು ಹೋರಾಟಗಳನ್ನು ಒಟ್ಟಿಗೆ ಆರಂಭಿಸಿದರು. ಮೊದಲನೆಯದು ದಲಿತರ ಪರವಾಗಿ ಭಾರತೀಯ ಉನ್ನತ ಸಮಾಜದೊಂದಿಗೆ ಮತ್ತು ಮತ್ತೊಂದು ಭಾರತದ ಏಕೀಕರಣಕ್ಕಾಗಿ ಬ್ರಿಟೀಷರ ವಿರುದ್ಧ. ಅವರಿಗೆ ಬ್ರೀಟೀಷರಿಂದ ಭಾರತದ ಬಿಡುಗಡೆಯ ಜೊತೆಯಲ್ಲಿ ದಲಿತರಿಗೆ ಸಮಾನತೆ ಮತ್ತು ಶಿಕ್ಷಣ ಕೊಡಿಸುವುದು ಅತಿ ಮುಖ್ಯವಾಗಿತ್ತು.

ಸರಿಯಾಗಿ ನೂರು ವರ್ಷಗಳ ಹಿಂದೆ ಉನ್ನತ ಶಿಕ್ಷಣ ಮುಗಿಸಿ ಭಾರತಕ್ಕೆ ಮರಳಿದ ಜ್ಞಾನವೆಂಬ ಆಲದ ಮರ ಅಂಬೇಡ್ಕರರ ಸವಿನೆನಪಿಗಾಗಿ ಕರ್ನಾಟಕ ರಾಜ್ಯ ಸರ್ಕಾರ ಅವರ 126ನೇ ವರ್ಷಾಚರಣೆ ನೆನಪಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಂಡಿತ್ತು.

ಶತಮಾನದ ಹಿಂದೆ ಅವರು ಭಾರತಕ್ಕೆ ಮರಳಿದ ಸವಿನೆನಪಿಗಾಗಿ ರಾಜ್ಯಸರ್ಕಾರ ಈ ವರ್ಷ ಜಗತ್ತಿನಲ್ಲಿ ಮೊದಲ ಬಾರಿಗೆ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನ ಪ್ರಸ್ತುತ ಭಾರತಕ್ಕೊಂದು ಮೈಲಿಗಲ್ಲಾಯಿತು.

ಸಮ್ಮೇಳನವನ್ನು ಉದ್ಘಾಟಿಸಿದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಹೋರಾಟಗಾರ ಹಾಗೂ ವಕೀಲ ಮೂರನೇ ಮಾರ್ಟಿನ್ ಲೂಥರ್ ಕಿಂಗ್ ಅಮೇರಿಕಾದಲ್ಲಿರುವ ಜನಾಂಗೀಯ ತಾರತಮ್ಯ ಮತ್ತು ಭಾರತದಲ್ಲಿರುವ ಜಾತಿ ಸಮಸ್ಯೆಯನ್ನು ಹೋಲಿಕೆ ಮಾಡಿ ಮಾತನಾಡಿದರು. ಅಮೇರಿಕಾದಲ್ಲಿ ಜನಾಂಗೀಯ ತಾರತಮ್ಯಕ್ಕಾಗಿ ಮೊದಲ ಮತ್ತು ಎರಡನೇ ಮಾರ್ಟಿನ್ ಲೂಥರ್ ಕಿಂಗ್ ಮತ್ತು ಭಾರತದಲ್ಲಿ ಮಹಾತ್ಮಾ ಗಾಂಧಿ ಹಾಗೂ ಬಿ.ಆರ್. ಅಂಬೇಡ್ಕರ್ ಜೀವನ ಹೋರಾಟ ಮತ್ತು ವ್ಯಕ್ತಿತ್ವಗಳಲ್ಲಿ ಹೊಂದಾಣಿಕೆ ಇರುವ ಅನೇಕ ಉದಾಹರಣೆಗಳ ಸಮೇತ ವಿವರಿಸಿದರು.

**ರಾಜ್ಯದ ಪ್ರತಿ ಹಳ್ಳಿ ಮಲ ಹೊರುವ ಪದ್ಧತಿಯಿಂದ ಮುಕ್ತವಾಗಿದೆ ಎಂದು ಸರ್ಕಾರ ಘೋಷಿಸುವಂತಾಗಬೇಕು.**

- **ವಿಲ್ಸನ್ ಬೆಜವಾಡ,** ಸಾಮಾಜಿಕ ಕಾರ್ಯಕರ್ತ, ಮ್ಯಾಗ್‌ಸೇಸೇ ಪ್ರಶಸ್ತಿ ಪುರಸ್ಕೃತ

**ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ಸರ್ಕಾರವು ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಸಾಕಾರಗೊಳಿಸುವ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.**

– **ಡಾ. ಸಿದ್ದಲಿಂಗಯ್ಯ,** ದಲಿತ ಕವಿ

ಜಗತ್ತಿನ ಅತ್ಯಂತ ಪ್ರಮುಖ ವ್ಯಕ್ತಿಗಳು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ 300 ಕ್ಕಿಂತ ಹೆಚ್ಚು ಜನ ಸ್ಪೀಕರ್‌ಗಳಾಗಿ ಭಾಗವಹಿಸಿದ್ದರು. 5 ಸಾವಿರಕ್ಕೂ ಹೆಚ್ಚು ಜನರು ಅವರ ಮಾತುಗಳನ್ನು ಕೇಳಲು ಮತ್ತು ಮಾತುಕತೆಯಲ್ಲಿ ಭಾಗವಹಿಸಲು ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದರು. ಉದ್ಘಾಟನೆಯಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು. ಮೂರು ದಿನಗಳ ಈ ಸಮ್ಮೇಳನದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ದೇಶ–ವಿದೇಶದಿಂದ ಆಗಮಿಸಿದ್ದ ಸಾಹಿತಿಗಳು, ಶಿಕ್ಷಣ ತಜ್ಞರು, ಕಾನೂನು ನಿರೂಪಕರು, ಸಾಮಾಜಿಕ ಹೋರಾಟಗಾರರು ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಪ್ರಸ್ತುತ ಭಾರತಕ್ಕೆ ಅಂಬೇಡ್ಕರ್ ಮರು ಓದು ಪರಿಹಾರವನ್ನು ಸೂಚಿಸಬಲ್ಲದು ಎಂಬ ವಾದಕ್ಕೆ ಉಹಾಹರಣೆಗಳ ಸಮೇತ ಚರ್ಚಿಸಲಾಯಿತು. ದೇಶ ಬೇರೆಯಾದರು, ಸಮಸ್ಯೆ ಬೇರೆಯಾದರು ತುಳಿತಕ್ಕೆ ಒಳಗಾದವರು ತಳಸಮುದಾಯದವರು ಎಂಬ ಒಕ್ಕೊರಲ ದನಿ ಸಮ್ಮೇಳನದ ತುಂಬಾ ಪ್ರತಿಧ್ವನಿಸಿತು.

ಮೂರನೇ ದಿನದ ಸಂಜೆ ನೆಡೆದ ಸಮಾರೋಪ ಸಮಾರಂಭದಲ್ಲಿ ಬೆಂಗಳೂರು ಸಮ್ಮೇಳನದ 40 ಅಂಶಗಳ ಘೋಷಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು.

**ಸಮ್ಮೇಳನ ಉದ್ಘಾಟನೆಯಲ್ಲಿ ಮುಖ್ಯಮಂತ್ರಿ ಅವರ ಭಾಷಣದ ಮುಖ್ಯಾಂಶಗಳು:**

ಸಾಮಾಜಿಕ ನ್ಯಾಯವನ್ನು ಪುನರ್‌ಗಳಿಸುವ, ಅಂಬೇಡ್ಕರ್‌ರ ಚಿಂತನೆಗಳಿಗೆ ಮರು ಪ್ರವೇಶಿಕೆಯನ್ನು ಒದಗಿಸುವ ಇಂದಿನ ಸಮಾರಂಭವು ಪ್ರಸಕ್ತ ಸನ್ನಿವೇಶದಲ್ಲಿ ಅತ್ಯಗತ್ಯವಾಗಿದೆ.

ಸ್ವಾತಂತ್ರ್ಯಾ ನಂತರದ ಭಾರತದ ಇತಿಹಾಸದಲ್ಲಿಯೇ



ಡಾ.ಬಿ.ಆರ್.ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನ–2017

# 40 ಅಂಶದ ಬೆಂಗಳೂರು ಘೋಷಣೆಯ ಪ್ರಮುಖ ಅಂಶಗಳು

ಮೂರು ದಿನಗಳ ಕಾಲ ನೆಡೆದ ಸಮ್ಮೇಳನದಲ್ಲಿ ಚರ್ಚಿತ ವಿಷಯಗಳ ಆಧಾರದ ಮೇಲೆ ಸಮಾರೋಪ ಸಮಾರಂಭದಲ್ಲಿ 40 ಅಂಶಗಳ 'ಬೆಂಗಳೂರು ಘೋಷಣೆ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಡುಗಡೆಗೊಳಿಸಿದರು. ನಿರ್ಣಯಗಳನ್ನು ಲೋಕೋಪಯೋಗಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ವಾಚಿಸಿದರು. ಅದರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಹಾಗೂ ಮಹಿಳೆಯರಿಗೆ ಇಂಗ್ಲಿಷ್ ಶಿಕ್ಷಣ ನೀಡುವುದು. ಸರ್ಕಾರ ಇತ್ತೀಚೆಗೆ ಜಾತಿ ಘಟಕ ಆಧರಿಸಿ ನೆಡೆಸಿದ ಶಿಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಯ ಸಾಮಾಜಿಕ ಗಣತಿ ಶೀಘ್ರ ಬಿಡುಗಡೆ ಮಾಡುವುದು. ದಲಿತ ಸಮುದಾಯದ ಎಲ್ಲ ಒಳ ಸಮುದಾಯಗಳಿಗೆ ಸಮಾನವಾಗಿ ಒಳ ಮೀಸಲಾತಿ ಕಲ್ಪಿಸುವುದು ಸೇರಿದಂತೆ ದಲಿತರಿಗೆ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಕಲ್ಪಿಸುವುದು ಸೇರಿ ಒಟ್ಟು 40 ಅಂಶಗಳನ್ನು **'ಬೆಂಗಳೂರು ಘೋಷಣೆ'** ಹೆಸರಿನಲ್ಲಿ ಡಾ. ಅಂಬೇಡ್ಕರ್ ಅಂತರರಾಷ್ಟ್ರೀಯ ಸಮಾವೇಶದಲ್ಲಿ ನಿರ್ಣಯಗಳನ್ನು ಅಂಗೀಕರಿಸಲಾಗಿದೆ.

### ಪ್ರಮುಖ ಅಂಶಗಳು

- **ಮಾಧ್ಯಮ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗ ಸಮುದಾಯಗಳ ಪ್ರಾತಿನಿಧ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.**
- **ಪರಿಶಿಷ್ಟ ಜಾತಿ/ಪಂಗಡದವರಿಗೆ ರಾಜ್ಯದಲ್ಲಿ 50 ಲಕ್ಷ ರೂ. ವರೆಗಿನ ಟೆಂಡರ್‌ನಲ್ಲಿ ನೀಡಿರುವ ಮೀಸಲಾತಿಯನ್ನು ದೇಶಾದ್ಯಂತ 1 ಕೋಟಿ ರೂ ವೆಚ್ಚದ ಕಾಮಗಾರಿಗಳಿಗೆ ಮೀಸಲಾತಿ ನೀಡಬೇಕು.**
- **ರಾಜ್ಯದಲ್ಲಿ ಜಾರಿಗೆ ತಂದಿರುವಂತೆ ಪರಿಶಿಷ್ಟ ಜಾತಿ/ಪಂಗಡ ಸಮುದಾಯಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು.**
- **ಪರಿಶಿಷ್ಟ ಜಾತಿ/ಪಂಗಡಗಳಿಗೆ ಭೂಮಿ ಸುರಕ್ಷತೆ ನೀಡಲು ಲ್ಯಾಂಡ್ ಬ್ಯಾಂಕ್ ಮಾಡಬೇಕು.**
- **ಕೋಮುವಾದ ಹೆಸರಿನಲ್ಲಿ ಹಿಂಸೆಗಳಲ್ಲಿ ತೊಡಗುವವರ ವಿರುದ್ಧ ಮತ, ಜಾತಿ ಭೇದವಿಲ್ಲದೆ ಕ್ರಮ ಕೈಗೊಳ್ಳಬೇಕು.**
- **ಪೊಲೀಸ್ ವ್ಯವಸ್ಥೆ ರಾಜಕೀಯದಿಂದ ಸಂಪೂರ್ಣ ಮುಕ್ತವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು.**
- **ರಾಜಕೀಯ ಪಕ್ಷಗಳು ಸಂವಿಧಾನದ ಅಂಶಗಳನ್ನು ಎತ್ತಿ ಹಿಡಿಯಲು ಚುನಾವಣಾ ಅಯೋಗಕ್ಕೆ ವಿಸ್ತೃತ ನಿಯಂತ್ರಣ ಶಕ್ತಿ ನೀಡಬೇಕು.**
- **ರಾಜ್ಯ ಮತ್ತು ಕೇಂದ್ರ ಸರ್ಕಾರದ ಚುನಾವಣಾ ಸ್ಪರ್ಧೆಯಲ್ಲಿ ಮೀಸಲಾತಿಗೆ ಸಾಂವಿಧಾನಿಕ ಮಾನ್ಯತೆ ನೀಡಬೇಕು.**
- **ಉನ್ನತ ನ್ಯಾಯಾಂಗ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗದ ಸಮುದಾಯಗಳು ಸೂಕ್ತ ಪ್ರಾತಿನಿಧ್ಯ ಗಳಿಸಲು ಕ್ರಮ ಕೈಗೊಳ್ಳಬೇಕು.**
- **ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗ ಅಲ್ಪಸಂಖ್ಯಾತ, ಮಹಿಳೆಯರಿಗೆ ಸಮಾನ ಅವಕಾಶ ಸಿಗುವಂತೆ ಕ್ರಮ ಕೈಗೊಳ್ಳಲು ಸಮಾನ ಅವಕಾಶಗಳ ಆಯೋಗವನ್ನು ಸ್ಥಾಪಿಸಬೇಕು.**
- **ಶಾಲಾ ಪಠ್ಯದಲ್ಲಿ ಅಂಬೇಡ್ಕರ್, ಜ್ಯೋತಿ ಬಾ ಪುಲೆ, ಸಾವಿತ್ರಿ ಬಾ ಪುಲೆ ಅವರ ಕುರಿತು ಪಠ್ಯ ಅಳವಡಿಸಬೇಕು.**
- **ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಸ್ಸಿ, ಎಸ್ಟಿ, ಒಬಿಸಿಗಳಿಗೆ ಮೀಸಲಾತಿ ನೀಡಬೇಕು.**
- **ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ಸಮುದಾಯದ ಭೂಮಿ ಸಂಪೂರ್ಣ ನೀರಾವರಿ ವ್ಯಾಪ್ತಿಗೆ ಒಳಪಡಿಸಬೇಕು.**
- **ನಗರ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರನ್ನು ಹೊರಗುತ್ತಿಗೆ ಬದಲಿಗೆ ಖಾಯಂ ಮಾಡಬೇಕು.**
- **ಜಾತಿ ಆಧಾರಿತ ಉದ್ಯಮಗಳನ್ನು ಆಧುನಿಕ ಕಾಲಕ್ಕೆ ಅನುಗಣವಾಗಿ ಬಲಪಡಿಸಬೇಕು.**
- **ಜಾತಿ ಮತ್ತು ಸಾಮಾಜಿಕ ಜನಗಣತಿಯನ್ನು ಬಹಿರಂಗಪಡಿಸಬೇಕು.**
- **ಅನ್ನದಾತರ ಆದಾಯ ಖಾತ್ರಿಪಡಿಸಲು ರೈತರ ಆದಾಯ ಆಯೋಗ ಸ್ಥಾಪಿಸಬೇಕು.**
- **ರಾಜ್ಯ ಜಿಡಿಪಿ ಶೇ 6 ಪಾಲು ಶಿಕ್ಷಣ, ಶೇ 3 ಪಾಲು ಆರೋಗ್ಯಕ್ಕೆ ಮೀಸಲಿಡಬೇಕು.**
- **ಸರ್ಕಾರಿ ಯೋಜನೆಗಳ ಸಾಮಾಜಿಕ ಮೌಲ್ಯಮಾಪನ ನಡೆಯಬೇಕು.**
- **ಅಸಂಘಟಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡಬೇಕು.**
- **ಅಸಂಘಟಿತ ಕಾರ್ಮಿಕರಿಗೆ ಜೀವಿಸಲು ವೇತನ (ಲಿವಿಂಗ್ ವೇಜ್) ನೀಡಬೇಕು.**
- **ಎಲ್ಲಾ ಖಾಸಗಿ ವಸತಿ ಬಡಾವಣೆಗಳಲ್ಲಿ ಶೇ 20 ನ್ನು ಕಡಿಮೆ ದರದ ಮನೆಗಳನ್ನು ಪರಿಶಿಷ್ಟ ಜಾತಿ/ಪಂಗಡ ಸಮುದಾಯಕ್ಕೆ ಮೀಸಲಿಡಬೇಕು.**



## ಸಮ್ಮೇಳನದಲ್ಲಿ ಚರ್ಚಿತವಾದ ವಿಷಯಗಳು:

**ಸಾಮಾಜಿಕ ನ್ಯಾಯದ ಪರಿಕಲ್ಪನೆ:**

ಎ) ಸಾಮಾಜಿಕ ನ್ಯಾಯ ಮತ್ತು ಮಾನವ ಸಮಾನತೆ

ಬಿ) ನ್ಯಾಯ ಮತ್ತು ಮಾರುಕಟ್ಟೆ

ಸಿ) ನ್ಯಾಯ ಮತ್ತು ಸಂಸ್ಕೃತಿ

ಡಿ) ನ್ಯಾಯ, ಹೊರಗಿಡುವಿಕೆ ಮತ್ತು ಅಂಚಿನಲ್ಲಿರುವುದು.

**ರಾಜಕೀಯ ನ್ಯಾಯದ ಪರಿಕಲ್ಪನೆ:**

ಎ) ರಾಷ್ಟ್ರೀಯತೆ ಮತ್ತು ಭಾರತದ ಪರಿಕಲ್ಪನೆ

ಬಿ) ರಾಷ್ಟ್ರ, ರಾಜ್ಯ, ಪೌರತ್ವ ಮತ್ತು ಸಾರ್ವಭೌಮತ್ವ

ಸಿ) ಪ್ರಜಾಪ್ರಭುತ್ವ ಮತ್ತು ಪ್ರಾತಿನಿಧ್ಯ

ಡಿ) ಹಕ್ಕುಗಳು, ಸಾಂವಿಧಾನಿಕ ಮತ್ತು ಕಾನೂನಿಕ ಅಡಳಿತ.

**ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸನ್ನಿವೇಶ:**

ಎ) ಜಾತಿ, ವರ್ಗ ಮತ್ತು ಗುರತಿಸುವಿಕೆ

ಬಿ) ಅಲ್ಪಸಂಖ್ಯಾತತೆ ಮತ್ತು ಹೊರಗಿಡುವಿಕೆ

ಸಿ) ಅನುಕೂಲಕರ ಮತ್ತು ಸಾರ್ವಜನಿಕ ನೀತಿಗಳನ್ನು ವರ್ಗೀಕರಿಸುವುದು

ಡಿ) ಸಾಮಾಜಿಕ ಚಳುವಳಿಗಳು ಮತ್ತು ಸಾಮಾಜಿಕ ರೂಪಾಂತರ

**ಆರ್ಥಿಕ ನ್ಯಾಯ:**

ಎ) ಸಾಂವಿಧಾನಕತೆ ಮತ್ತು ಮಾರುಕಟ್ಟೆ

ಬಿ) ಅಭಿವೃದ್ಧಿ ಮತ್ತು ಪುನರ್ ವಿತರಣೆ

ಸಿ) ಸಮಾನತೆ ಅಂಚಿನಲ್ಲಿರುವಿಕೆ ಮತ್ತು ದೃಢವಾದ ಕ್ರಮ

ಡಿ) ಪರಿಸರಕ್ಕೆ ಸಂಬಂಧಪಟ್ಟಂತೆ ಸಾಮಜಿಕ ನ್ಯಾಯ.

**ಸಾಮಾಜಿಕ ನ್ಯಾಯ ಮತ್ತು ಸಾಂಸ್ಕೃತಿಕ ಡೊಮೇನ್:**

ಎ) ಧರ್ಮ ಮತ್ತು ಸಾಮಾಜಿಕ ನ್ಯಾಯ

ಬಿ) ಧರ್ಮ ಮತ್ತು ಕೋಮುವಾದ

ಸಿ) ಜಾತ್ಯಾತೀತತೆ ಮತ್ತು ಸಾಂಸ್ಕೃತಿಕ ವೈವಿದ್ಯತೆ

ಡಿ) ಸಾಂಸ್ಕೃತಿಕ ಪ್ರಾಬಲ್ಯ ಮತ್ತು ಅಂಚಿನಲ್ಲಿರುವ ಸಂಸ್ಕೃತಿಗಳು.



ಮತೀಯ ಅಸಹನೆಯೆನ್ನುವುದು ಈ ಪರಿ ಹೆಚ್ಚಿರಲಿಲ್ಲ. ಹಾಗಾಗಿ ಈ ಸಮ್ಮೇಳನ ಪ್ರತಿನಿಧಿಸುವ ಆಶಯಗಳು ಹೆಚ್ಚು ಅರ್ಥಪೂರ್ಣ.

ದೇಶವನ್ನು ಕಾಡುತ್ತಿರುವ ಪುಸಕ್ತ ಸಂಕಿರಣ ಸವಾಲುಗಳಿಗೆ ಅಂಬೇಡ್ಕರ್ ಅವರ ಚಿಂತನೆಗಳ ಪರಿಧಿಯಲ್ಲಿ ಪರಿಹಾರಗಳಿವೆ ಎನ್ನುವ ಬಗ್ಗೆ ನನಗೆ ಯಾವುದೇ ಅನುಮಾನ ಉಳಿದಿಲ್ಲ.

ಇಂದು ಭಾರತದ ಬಹುತ್ವದ ಪರಿಕಲ್ಪನೆಗೆ ವಿಚ್ಛಿದ್ರಕಾರಿ ಚಿಂತನೆಗಳಿಂದ ಸವಾಲು ಎದುರಾಗಿದೆ. ದೇಶ ವಿದೇಶಗಳ ಚಿಂತಕರು ಈ ಸವಾಲುಗಳನ್ನು ಎದುರಿಸಲು ಮಾರ್ಗದರ್ಶನ ನೀಡಬೇಕಿದೆ.

ಇಂದು ನಮ್ಮ ನಡುವಿನ ಅಸಮಾನತೆ, ಶೋಷಣೆಯನ್ನು ಉಪೇಕ್ಷಿಸುವವರನ್ನು, ಅದರ ವಿರುದ್ಧ ದನಿ ಎತ್ತದವರನ್ನು ಉತ್ತಮ ಭಾರತೀಯರು ಎಂದು ಹೇಳಲಾಗುತ್ತಿದೆ. ಆಹಾರ ಉಡುಗೆತೊಡುಗೆ, ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರಗಳಲ್ಲಿ ನಾವು ಕಟ್ಟುಪಾಡುಗಳಿಗೆ ಒಳಗಾಗಬೇಕು ಎನ್ನಲಾಗುತ್ತದೆ. ಬಹುಸಂಖ್ಯಾತರ ಭಾರತೀಯ ಕಲ್ಪನೆಯನ್ನು ಒಪ್ಪಬೇಕು ಎನ್ನಲಾಗುತ್ತಿದೆ. ಭಾರತದ ಸಂವಿಧಾನದ ಆಶೋತ್ತರಗಳಿಗೆ ವಿರುದ್ಧವಾದ ಇಂತಹ ನಡೆಯನ್ನು ನಾನು ಕಟುವಾಗಿ ತಿರಸ್ಕರಿಸುತ್ತೇನೆ. ಬಹುಸಂಖ್ಯಾತರ



**ದುರ್ಬಲರ ಸಬಲೀಕರಣಕ್ಕೆ ಸಾಮಾಜಿಕ ಮತ್ತು ಆರ್ಥಿಕ ಕಾಯ್ದೆಗಳನ್ನು ಬಲಗೊಳಿಸುವುದು ಅತಿ ಅಗತ್ಯ.**

– **ಜೈರಾಂ ರಮೇಶ್**, ಸಂಸದರು, ಮಾಜಿ ಸಚಿವ

ವಾದಗಳನ್ನು ಸಹನೆಯಿಂದ ಒಪ್ಪುವುದು ಕೇವಲ ಸಮಸ್ಯೆಗಳನ್ನು ಮುಂದೂಡಬಲ್ಲದಷ್ಟೇ ಹೊರತು ನಿವಾರಿಸಲಾರದು. ಸಮ ಸಮಾಜ ನಿರ್ಮಾಣವಾಗಬೇಕೆಂದರೆ ಹೋರಾಡಬೇಕು.

ಚಿಂತಕರನ್ನು ರಾಷ್ಟ್ರ ವಿರೋಧಿಗಳೆಂದು ಹಣೆಪಟ್ಟಿ ಕಟ್ಟುವುದನ್ನು ನಾನು ಖಂಡಿಸುತ್ತೇನೆ. ಭಾರತದ ಕುರಿತಾದ ಪರಿಕಲ್ಪನೆಯನ್ನು ಸಂಕುಚಿತಗೊಳಿಸುವುದನ್ನು ಒಪ್ಪಲಾಗದು. ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ಅವರ ಬೆಳಕಿನಲ್ಲಿ ನಾವಿಂದು ಸಹನಶೀಲವೂ ಹಾಗೂ ಅಂತ;ಕರಣಪೂರಿತವೂ ಆದ ಚಿಂತನಾ ಕ್ರಮವನ್ನು ರೂಪಿಸಬೇಕಿದೆ.

ಜಗತ್ತಿನ ಅದ್ಭುತ ಮನಸ್ಸುಗಳು ಇಲ್ಲಿ ನೆರೆದಿದ್ದು, ನೀವುಗಳು ಭಾರತದ ಸಮಕಾಲೀನ ಸವಾಲುಗಳು ಹಾಗೂ ಅವಕಾಶಗಳ ಬಗ್ಗೆ ಬೆಳಕು ಚೆಲ್ಲಬೇಕು. ನಿಮ್ಮ ಚಿಂತನೆಗಳನ್ನು ಆಧರಿಸಿ ಕರ್ನಾಟಕ ಸರ್ಕಾರವು 'ಬೆಂಗಳೂರು ಹೇಳಿಕೆ' ಯನ್ನು ಅನುಮೋದಿಸಲಿದೆ. ಆ ಮೂಲಕ ಸಾಮಾಜಿಕ ನ್ಯಾಯ, ಮಾನವಹಕ್ಕು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಗಳಿಗೆ ಸಾಂಸ್ಥಿಕ, ಸಂವಿಧಾನಿಕ, ಆಡಳಿತಾತ್ಮಕ ಪ್ರತಿಕ್ರಿಯೆ ನೀಡಲಿದೆ. ಈ ನೀಲ ನಕಾಶೆಯು ಭಾರತೀಯ ಆಶೋತ್ತರಗಳನ್ನು ರಕ್ಷಿಸುವುದಲ್ಲದೆ ದಲಿತರು, ಆದಿವಾಸಿಗಳು, ಹಿಂದುಳಿದವರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಸಬಲೀಕರಣದ ಕಾಳಜಿವಹಿಸಲಿದೆ.

### ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಂವಾದ ಕಾರ್ಯಕ್ರಮದ ಮುಖ್ಯಾಂಶಗಳು:

ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಪ್ರಸ್ತುತ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದರು ಸಹ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕೇಳಿ ಬರುತ್ತಿರುವ ಘಟನೆಗಳು ತಮ್ಮ ಅವಗಾಹನೆಗೆ ಬಂದಿದ್ದು ದೇವದಾಸಿ ನಿರ್ಮೂಲನೆಗಾಗಿ ಮತ್ತಷ್ಟು ಕಠಿಣ ಕಾನೂನುಗಳನ್ನು ಮತ್ತು ಯೋಜನೆಗಳನ್ನು ಜಾರಿ ಮಾಡಲು ಸರ್ಕಾರ ಚಿಂತಿಸುತ್ತಿದ್ದು, ಅವರನ್ನು ಆರ್ಥಿಕವಾಗಿ ಸದೃಢಗೊಳಿಸಲು ಕೃಷಿ ಭೂಮಿ ಹಂಚಿಕೆ ಬಗ್ಗೆ ಪರಿಶೀಲಿಸಲಾಗುವುದು.

ಡಾ.ಬಿ.ಆರ್.ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ನೆಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವದಾಸಿ ಪದ್ಧತಿ ನಿರ್ಮೂಲನೆ ಕುರಿತು ಪ್ರಶ್ನೆಯೊಂದಕ್ಕೆ ಉತ್ತರಿಸಿ ಮಾತನಾಡಿದ ಅವರು ಇಂತಹ ಅನಿಷ್ಠ ಪದ್ಧತಿಗಳ ನಿರ್ಮೂಲನೆ ಶಿಕ್ಷಣ ಮತ್ತು ಆರ್ಥಿಕ ಸದೃಢತೆಯಿಂದ ಮಾತ್ರ ಸಾಧ್ಯ, ಹಾಗಾಗಿ ದೇವದಾಸಿಯರ ಬದುಕನ್ನು ಸದೃಢಗೊಳಿಸಲು ಕೃಷಿ ಭೂಮಿ ಹಂಚಿಕೆ ಜೊತೆಗೆ ಮತ್ತಷ್ಟು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪರಿಶೀಲಿಸಲಾಗುವುದು ಎಂದು ಹೇಳಿದರು.

ನಟಿ ಮತ್ತು ಮೇಲ್ಮನೆ ಸದಸ್ಯೆ ಶ್ರೀಮತಿ ಡಾ. ಜಯಮಾಲ ನೀಡಿರುವ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತರಲು ಚಿಂತಿಸಲಾಗುತ್ತಿದೆ ಎಂದು ಭರವಸೆ ನೀಡಿದರು.

ಜಾತಿಗಣತಿ ಮತ್ತು ಅಹಿಂದ ಪರ ಯೋಜನೆಗಳ ಕುರಿತು ಕೇಳಿಬಂದ ಪ್ರಶ್ನೆಗೆ ಉತ್ತರಿಸಿದ ಅವರು ಇಂದಿನ ಕಾಲದಲ್ಲಿ ಯೋಜನೆಗಳು ಸಂಪೂರ್ಣವಾಗಿ ಫಲಪ್ರದವಾಗಲು ಮತ್ತು ಯೋಜನೆಗಳು ಸರಿಯಾದ ಜನರಿಗೆ ತಲುಪಲು ಹಾಗೂ ಪರಿಣಾಮಕಾರಿಯಾಗಿ ಜಾರಿಯಾಗಲು ಜಾತಿಗಳನ್ನು ಘಟಕಗಳನ್ನಾಗಿ ಇಟ್ಟುಕೊಂಡು ಜನರ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ಅಗತ್ಯ. ಯಾವುದೇ ಯೋಜನೆಗಳು ಮತ್ತು ಮೀಸಲಾತಿಗಳು ವೈಜ್ಞಾನಿಕವಾಗಿರಬೇಕಾದ ಅವಶ್ಯಕತೆಯಿದ್ದು ಅದಕ್ಕಾಗಿ ಜಾತಿಗಣತಿ ಅವಶ್ಯ ಎಂದರು.

ನಮ್ಮ ಸರಕಾರದ ಯೋಜನೆಗಳು ಬಡವರ ಪರ ಯೋಜನೆಗಳು. ಕ್ಷೀರಭಾಗ್ಯ, ಉಚಿತ ಅಕ್ಕಿ ವಿತರಣೆ, ಕೃಷಿ ಹೊಂಡ ಸೇರಿದಂತೆ ಅನೇಕ ಯೋಜನೆಗಳಿಗೆ ಜಾತಿಯ ತೊಡಕಿಲ್ಲ, ಇಂತಹ ಅನೇಕ ಯೋಜನೆಗಳು ಬಡವರ ಪರವಾಗಿವೆ. ಇಂತಹ ಅನೇಕ ಯೋಜನೆಗಳನ್ನು ಪರಿಶೀಲಿಸದ ಜನ ಕೇವಲ ಅಹಿಂದ ಯೋಜನೆಗಳು ಎನ್ನುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದರು.

ದಕ್ಷಿಣ ಕನ್ನಡದಲ್ಲಿ ಇತ್ತೀಚೆಗೆ ನೆಡೆದ ಕೋಮುವಾದಿ





ಘಟನೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೋಮುವಾದಿ ಶಕ್ತಿಗಳ ವಿರುದ್ಧ ಹರಿಹಾಯ್ದು, ದಕ್ಷಿಣ ಕನ್ನಡದ ಜನರ ವಿಧ್ಯಾವಂತರು ಮತ್ತು ಶಾಂತಿಪ್ರಿಯರು. ಪ್ರಸ್ತುತ ಅಲ್ಲಿಂದ ನಾಲ್ಕು ಅಲ್ಪಸಂಖ್ಯಾತ ಶಾಸಕರುಗಳು ಆಯ್ಕೆಯಾಗಿರುವುದು ಇದಕ್ಕೆ ನಿದರ್ಶನವಾಗಿದೆ. ಯುವ ಜನತೆ ಯಾವುದೇ ಧಾರ್ಮಿಕ ದಳ್ಳುರಿ ಹರಡುವ ಕೋಮುವಾದಿಗಳ ಮಾತುಗಳಿಗೆ ಮರುಳಾಗಬಾರದು ಎಂದು ಕರೆ ಕೊಟ್ಟರು.

ಮಾತೃ ಭಾಷೆಯಲ್ಲಿ ಶಿಕ್ಷಣ ಮಕ್ಕಳ ಪಾಲಕರಿಗೆ ಬಿಟ್ಟ ವಿಷಯ ಎಂದು ಸುಪ್ರಿಂ ಕೋರ್ಟ್ ಈಗಾಗಲೇ ನಿರ್ದೇಶನ ನೀಡಿರುವುದರಿಂದ ರಾಜ್ಯದಲ್ಲಿ ಯಾವುದೇ ಭಾಷೆಯ ಶಿಕ್ಷಣ ಸಂಸ್ಥೆಗಳಿದ್ದರು ಸಹ ಕನ್ನಡ ಕಡ್ಡಾಯ ಹಾಗೂ ಕನ್ನಡ ಮಾಧ್ಯಮ ಮಕ್ಕಳಿಗೆ ಮುಂದಿನ ಉನ್ನತ ಮಟ್ಟದ ಶಿಕ್ಷಣ ಪಡೆಯಲು ಸಹಾಯವಾಗುವಂತೆ ಇಂಗ್ಲೀಷ್ ಭಾಷೆ ಸಹ ಕಡ್ಡಾಯ ಎಂದರು.

ಸಂವಾದದಲ್ಲಿ ರಾಜೆಂದ್ರ ಚೆನ್ನಿ, ಕೆ. ನೀಲಾ, ಸಾಹಿತಿಗಳಾದ ನಟರಾಜ ಹುಳಿಯಾರ, ಸಿದ್ದಯ್ಯ, ಬೋಳವಾರ ಮಹ್ಮದ್ ಕುಂಞ, ಪತ್ರಕರ್ತ ಡಿ. ಉಮಾಪತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಸಮ್ಮೇಳನ ಸಮಾರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾಷಣದ ಮುಖ್ಯಾಂಶಗಳು

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸರ್ಕಾರಿ ನೌಕರರಿಗೆ ಬಡ್ತಿ ಮೀಸಲಾತಿಯಲ್ಲಿ ಬಿಕ್ಕಟ್ಟು ಉಂಟಾಗಿರುವ ಬಗ್ಗೆ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಠಾಕೂರ್ ಹಾಗೂ ನ್ಯಾಯಮೂರ್ತಿ ಗೋಪಾಲಗೌಡ ಅವರ ನೇತೃತ್ವದಲ್ಲಿ ರಚಿಸಿದ ಸಮಿತಿಯು ಈಗಾಗಲೇ ತನ್ನ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿರುವ ಅಂಶಗಳನ್ನು ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು.

ಅಂಬೇಡ್ಕರ್ ವಾದಿಗಳು ಅವರ ತತ್ವ ಸಿದ್ಧಾಂತಗಳನ್ನು ಪುನರ್‌ಮನನ ಮಾಡಿಕೊಳ್ಳುತ್ತಲೇ ಇರಬೇಕು, ಬದ್ಧತೆಯನ್ನು ದೃಢಪಡಿಸುತ್ತಲೇ ಇರಬೇಕು ಎಂದ ಮುಖ್ಯಮಂತ್ರಿಗಳು, ಅಂಬೇಡ್ಕರ್ ಅವರು ಇಡೀ ಮನುಕುಲದ ಉದ್ಧಾರ ಬಯಸಿದರು. ಅಂಬೇಡ್ಕರ್ ನಮ್ಮ ಭಾರತಕ್ಕಷ್ಟೇ ನಾಯಕರಲ್ಲ. ಇಡೀ ವಿಶ್ವದ ನಾಯಕರು. ಸಾಮಾಜಿಕ ಚಿಂತನೆಯಲ್ಲಿ ಅಂಬೇಡ್ಕರ್ ಅವರಿಗೆ ಯಾರೂ ಸಾಟಿ ಇಲ್ಲ. ಅವರಿಗೆ ಅವರೇ ಸಾಟಿ ಎಂದು ಅಭಿಪ್ರಾಯಪಟ್ಟರು.

ಅವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ, ನಮ್ಮ ಸರ್ಕಾರವು ಪೌರಕಾರ್ಮಿಕರನ್ನು ಹಂತ ಹಂತವಾಗಿ ಕಾಯಂಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ 11 ಸಾವಿರ ಪೌರ ಕಾರ್ಮಿಕರನ್ನು ಕಾಯಂ ಗೊಳಿಸಲಾಗುತ್ತಿದೆ. ಒಟ್ಟಾರೆಯಾಗಿ, ಎಲ್ಲಾ ಪೌರಕಾರ್ಮಿಕರನ್ನು ಕಾಯಂಗೊಳಿಸುವುದಲ್ಲದೆ, ಗುತ್ತಿಗೆ ಮತ್ತು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದ ಪೌರಕಾರ್ಮಿಕರನ್ನೂ ಕಾಯಂಗೊಳಿಸಲಾಗುವುದು. ಇವರೆಲ್ಲರಿಗೂ ಕನಿಷ್ಠ ವೇತನವಾದ 14 ಸಾವಿರ ರೂ. ಗಳ ಸಂಬಳ ಸೇರಿದಂತೆ ಸರ್ಕಾರದ ಇತರ ಸವಲತ್ತು ಮತ್ತು ಸೌಲಭ್ಯಗಳು ದೊರೆಯಲಿದೆ.

ಇಡೀ ದೇಶದಲ್ಲೇ ಮೊದಲ ಬಾರಿಗೆ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 24.1 ರಷ್ಟು ಅನುದಾನವನ್ನು ಬಜೆಟ್‌ನಲ್ಲಿ ಮೀಸಲಾಗಿಟ್ಟು ಈ ಅನುದಾನವನ್ನು ಬಳಸದೇ ಇದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವ ಕಾಯಿದೆಯನ್ನು ಜಾರಿಗೆ ತಂದ ರಾಜ್ಯ ನಮ್ಮದು. ಹಾಗೆಯೇ ಯಾವುದೇ 50 ಲಕ್ಷ ರೂ. ವರೆಗಿನ ಗುತ್ತಿಗೆ ಕಾಮಗಾರಿಯ ಮೊತ್ತದ ಪೈಕಿ ಶೇ. 24.1ರಷ್ಟನ್ನು ಟೆಂಡರ್ ಕರೆಯದೇ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಗುತ್ತಿಗೆದಾರರಿಗೆ ನೀಡಲಾಗುವುದು. ಇಂತಹ ಕ್ರಮ ಕೈಗೊಂಡ ದೇಶದ ಮೊದಲ ರಾಜ್ಯ ಎನ್ನುವ ಹಿರಿಮೆ ನಮ್ಮದು.

ಗ್ರಾಮ ಪಂಚಾಯತ್ ಮತ್ತು ಎಲ್ಲ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಶೇ. 50 ರಷ್ಟು ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದ ಮೊದಲ ಸರ್ಕಾರ ನಮ್ಮದು. ಹಾಗೆಯೇ ಉದ್ಯೋಗದಲ್ಲಿ ಶೇ. 33 ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನೀಡಿದೆ.

### ಮಾಧ್ಯಮದೊಂದಿಗೆ ಸಂವಾದದಲ್ಲಿ ಮಾರ್ಟಿನ್ ಲೂಥರ್ ಕಿಂಗ್–III ಅವರ ಮುಖ್ಯಾಂಶಗಳು:

ನಮ್ಮ ಸಮಾಜದಲ್ಲಿ ಸಾಮಾಜಿಕ ಬದಲಾವಣೆ ಅಹಿಂಸಾ ಮಾರ್ಗದಿಂದ ಆಗಬೇಕಿದೆ. ಅಹಿಂಸಾ ಮಾರ್ಗದಿಂದ ಕ್ಷಣ ಮಾತ್ರದಲ್ಲಿ ಸಾಮಾಜಿಕ ಪರಿವರ್ತನೆ ನಿರೀಕ್ಷಿಸುವುದು ಅಸಾಧ್ಯ. ಇದು ಬಹಳ ಸಮಯವನ್ನು ನಿರೀಕ್ಷಿಸುತ್ತದೆ.

ಯಾವುದೇ ಶೋಷಣೆಯ ವಿರುದ್ಧ ಪ್ರತಿಭಟನೆ ಅತ್ಯಗತ್ಯ. ಯಾರಾದರೂ ನಮ್ಮ ಮೇಲೆ ದಾಳಿ ಮಾಡಿದರೆ ಅದನ್ನು ವಿರೋಧಿಸಬೇಕು. ಆದರೆ ವಿರೋಧ ಅಹಿಂಸಾತ್ಮಕವಾಗಿರಬೇಕು. ಈ ವಿಷಯದಲ್ಲಿ ಮಹಾತ್ಮಾಗಾಂಧಿಯವರ ಮಾರ್ಗ ಸರ್ವೋತ್ತಮ.

ಸಾಮಾಜಿಕ ಮಾಧ್ಯಮಗಳು ಇಂದಿನ ಆಧುನಿಕ ಪ್ರಪಂಚದಲ್ಲಿ ಬಹಳ ಪರಿಣಾಮಕಾರಿಯಾಗಿದ್ದು, ಸಮಾಜದ ಶೋಷಿತ ವರ್ಗದವರು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಬಹುದಾಗಿದೆ.

ಆಧುನಿಕ ಸಮಾಜದಲ್ಲಿ ಶೋಷಿತರ, ದಮನಿತರ ಪರ



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರ ಕುರಿತು ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನವನ್ನು ಮುಖ್ಯಮಂತ್ರಿಯವರು ವೀಕ್ಷಿಸುತ್ತಿರುವುದು

ಹೋರಾಡುವ ಅನೇಕ ಉತ್ತಮ ಯುವಕ/ಯುವತಿಯರು ನಮ್ಮ ನಿಮ್ಮ ನಡುವೆ ಇದ್ದು, ಇವರ ಹೋರಾಟದ ಫಲ ನಿಜವಾಗಿಯೂ ಅನೇಕ ಶೋಷಿತರಿಗೆ ಒಳಿತಾಗಬಲ್ಲದು.

ಸಮಾಜದ ಶೋಷಿತರು ಮತ್ತು ದಲಿತ ವರ್ಗದವರು, ಶಿಕ್ಷಣ, ಆರೋಗ್ಯ, ಸಾಮಾಜಿಕ ಹೀಗೆ ಯಾವುದೇ ಕ್ಷೇತ್ರದಲ್ಲಾಗಲಿ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಿದಾಗ ಮಾತ್ರ ಆಳುವ ಸರ್ಕಾರಗಳಿಗೆ ಸಮಸ್ಯೆಗಳ ಅರ್ಥವಾಗುತ್ತದೆ.

ಯಾವುದೇ ಸಾಮಾಜಿಕ ಬದಲಾವಣೆ ತರಬೇಕಾದರೆ ಕೆಳ, ಶೋಷಿತ ವರ್ಗಗಳ ಜನರನ್ನು ಗಣನೆಗೆ ತೆಗೆದುಕೊಂಡು ಗುರಿಮುಟ್ಟುವತನಕ ಹೋರಾಟ ನಡೆಸಬೇಕು. ಇತ್ತೀಚಿಗೆ ಹೆಚ್ಚು ಆಕರ್ಷಿಸುತ್ತಿರುವ ಸಾಮಾಜಿಕ ಮಾಧ್ಯಮಗಳ ಮೂಲಕ ಸಹಾ ಹೋರಾಟ ಮುಂದುವರೆಯಬೇಕು. ಸಮಾನ ಮನಸ್ಕರನ್ನು ಒಗ್ಗೂಡಿಸಿ ಮುನ್ನಡೆದಾಗ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯ. ತಮ್ಮ ತಂದೆ ಡಾ: ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರನ್ನು ಸ್ಮರಿಸಿದ ಕಿಂಗ್ – III ಅನ್ಯಾಯ ಇದ್ದ ಕಡೆ ನ್ಯಾಯವೂ ಇದ್ದೇ ಇರುತ್ತದೆ. ಶೋಷಿತರು ಒಂದಾದಾಗ ಅವರಿಗೆ ನ್ಯಾಯ ಸಿಕ್ಕೇ ಸಿಗುತ್ತದೆ ಎಂಬ ತಮ್ಮ ತಂದೆಯ ನುಡಿಗಳನ್ನು ನೆನಪಿಸಿಕೊಂಡರು.

ಅಮೇರಿಕಾದಲ್ಲೂ ಈ ಶೋಷಣೆ ಇದ್ದೇ ಇದೆ. ಬಿಳಿಯರು ಕರಿಯರ ನಡುವೆ ವರ್ಣ ಭೇದವಿದೆ. ಅಲ್ಲಿ ಒಗ್ಗಟ್ಟಿನ ಹೋರಾಟದ ಮೂಲಕ ಶೋಷಣೆಯಿಂದ ಮುಕ್ತರಾಗುತ್ತಿದ್ದೇವೆ. ಭಾರತದ ಪರಿಸ್ಥಿತಿ ಹಾಗಲ್ಲ. ಕೆಳವರ್ಗದವರ ಸಂಖ್ಯೆ ಹೆಚ್ಚಿದೆ. ಸರ್ಕಾರವು ಕೆಳವರ್ಗದವರ ಪರವಾಗಿಯೇ ಇದೆ. ಸರ್ಕಾರ ಸೂಕ್ತ ಕಾನೂನು ಮತ್ತು ನಿಯಮ ರೂಪಿಸಿ ಕೆಳವರ್ಗದವರಿಗೆ ನ್ಯಾಯ ಕೊಡಿಸಬಹುದು ಎಂದು ಅಭಿಪ್ರಾಯಪಟ್ಟರು.

**ಸಮ್ಮೇಳನದಲ್ಲಿ ಭಾಗವಹಿಸಿದ್ದ ಮುಖ್ಯ ಅತಿಥಿಗಳು:**

**ಮುಖ್ಯ ಅತಿಥಿಗಳು:** ಅಂತರರಾಷ್ಟ್ರೀಯ ಮಾನವ ಹಕ್ಕುಗಳ ವಕೀಲ ಮತ್ತು ಕಾರ್ಯಕರ್ತ ಮೂರನೇ ಮಾರ್ಟಿನ್ ಲೂಥರ್ ಕಿಂಗ್ ಮತ್ತು ರಾಹುಲ್ ಗಾಂಧಿ, ಸಂಸದರು ಹಾಗೂ ಎಐಸಿಸಿ ಉಪಾಧ್ಯಕ್ಷರು, ಪ್ರಕಾಶ್ ಅಂಬೇಡ್ಕರ್, ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಕೈಲಾಸ್ ಸತ್ಯಾರ್ಥಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು..

**ಅಂತರಾಷ್ಟ್ರೀಯ ಸ್ಪೀಕರ್‌ಗಳು:** 80 ಕ್ಕಿಂತಲೂ ಹೆಚ್ಚು ಅಂತರಾಷ್ಟ್ರೀಯ ಸ್ಪೀಕರ್‌ಗಳು ಭಾಗವಹಿಸಿದ್ದರು, ಅದರಲ್ಲಿ ಮುಖ್ಯವಾಗಿ ಪ್ರೊ. ಕಾರ್ನ್‌ಲ್ ವೆಸ್ಟ್, ಲಡ್‌ಬೀಕು ಪರೇಕ್, ಪ್ರೊ. ಜೇಮ್ಸ್ ಮ್ಯಾನ್, ಪ್ರೊ. ಥಾಮಸ್ ವೈಸ್ಕೋಪಸ್ಸ, ಪ್ರೊ ಉಪೇಂದ್ರ ಭಕ್ಷಿ, ಪ್ರೊ. ಲಾರೆನ್ಸ್ ಸೈಮನ್, ಪ್ರಿ. ಸ್ಯಾಮುಯಲ್ ಮೈಲ್ಸ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ರಾಷ್ಟ್ರೀಯ ಸ್ಪೀಕರ್‌ಗಳು:** 140 ಹೆಚ್ಚಿನ ರಾಷ್ಟ್ರೀಯ ಭಾಷಣಕಾರರು ಭಾಗವಹಿಸಿದ್ದರು ಅದರಲ್ಲಿ ಮುಖ್ಯವಾಗಿ ಪ್ರಮುಖರಾದವರು ಎಂದರೆ ಪ್ರೊ. ಸುಖದೇವ್ ತೋರಟ್, ಶ್ರೀಮತಿ ಅರುಣ ರಾಯ್, ಶ್ರಿ ನಿಖಿಲ್‌ಡೇ, ಪ್ರೊ. ಶಿವ ವಿಶ್ವನಾಥ್, ಡಾ. ಶಶಿ ತರೂರ್, ಶ್ರೀ ಕೆ. ರಾಜು, ಶ್ರೀ ಸಲ್ಮಾನ್ ಖುಶಿಧ್, ಶ್ರೀ ಪ್ರಕಾಶ್ ಅಂಬೇಡ್ಕರ್, ಪ್ರೊ. ರಾಜೀವ್ ಗೌಡ, ಶ್ರೀ ಆನಂದ ತೇಲ್‌ತುವಿಮ್ಡೆ, ಶ್ರೀ ವಿಲ್ಸನ್ ಬೆಜವಾಡ, ಪ್ರೊ. ಆಕಾಶ್ ರಾಥೋರ್, ಪ್ರೊ. ವಲೇರಿಯನ್ ರೋಡ್ರಿಗಸ್, ಪ್ರೊ. ಸುಧೀರ್ ಕೃಷ್ಣಸ್ವಾಮಿ, ಪ್ರೊ. ನೀರಾ ಚಾಂಡೋಕೆ, ಪ್ರೊ. ಸತೀಶ್ ದೇಶಪಾಂಡೆ, ಪ್ರೊ. ಪ್ರಬಾತ್ ಪಾಟ್‌ನಾಯಕ್ ಮತ್ತು ಇತರರು.

**ರಾಜ್ಯದ ಸ್ಪೀಕರ್‌ಗಳು:** ಕರ್ನಾಟಕದ ವಿವಿಧ ಜಿಲ್ಲೆಗಳಿಂದ 80 ಕ್ಕಿಂತಲೂ ಹೆಚ್ಚಿನ ಭಾಷಣಕಾರರು ಭಾಗವಹಿಸಿದ್ದರು. ಅವರುಗಳಲ್ಲಿ ಪ್ರಮುಖರಾದವರು ಶ್ರೀ ದೇವನೂರ ಮಹದೇವ, ಪ್ರಿ. ಜಿ.ಕೆ. ಗೋವಿಂದರಾವ್, ಡಾ. ಸಿದ್ದಲಿಂಗಯ್ಯ, ಪ್ರೊ. ಕೆ. ಮರುಳಸಿದ್ದಪ್ಪ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪ್ರೊ. ರಾಜೇಂದ್ರ ಚೆನ್ನಿ, ಪ್ರೊ. ರವಿವರ್ಮ ಕುಮಾರ್, ಪ್ರೊ. ಚಂದ್ರಶೇಖರ ಕಂಬಾರ, ಪ್ರೊ. ಕೆ.ಬಿ. ಸಿದ್ದಯ್ಯ, ಪ್ರೊ. ಮಲ್ಲಿಕಾ ಘಂಟಿ, ಶ್ರೀ ದಿನೇಶ ಅಮೀನ್ ಮಟ್ಟು, ಶ್ರೀಮತಿ ಗೌರಿ ಲಂಕೇಶ್, ಪ್ರೊ. ರಹಮತ್ ತರೀಕೆರೆ, ಜಸ್ಟೀಸ್ ನಾಗಮೋಹನ್ ದಾಸ್, ಪ್ರೊ. ಮೊಗಳ್ಳಿ ಗಣೇಶ್, ಶ್ರೀಮತಿ ಬಿ.ಟಿ. ಲಲಿತ ನಾಯಕ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು..



## ಡಾ. ಬಿ ಆರ್ ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನ 2017ರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮಾಡಿದ ಭಾಷಣದ ಕನ್ನಡ ಅನುವಾದ



ಜಗದ್ವಿಖ್ಯಾತ ಸಮಾಜ ಕಾರ್ಯಕರ್ತ ಹಾಗೂ 'ರಿಯಲೈಜಿಂಗ್ ದ ಡ್ರೀಂ ಇನ್ಕಾರ್ಪೊರೇಟೆಡ್' ಸಂಸ್ಥೆಯ ಸಂಸ್ಥಾಪಕ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಮಾರ್ಟಿನ್ ಲುಥರ್ ಕಿಂಗ್ – 3 ಅವರೇ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾದ ಹಾಗೂ ಈ ಐತಿಹಾಸಿಕ ಸಮ್ಮೇಳನದ ಮುಖ್ಯ ಅತಿಥಿಯಾದ ಶ್ರೀ ರಾಹುಲ್ ಗಾಂಧಿ ಅವರೇ,

ಮಾನವ ಹಕ್ಕುಗಳ ಹೋರಾಟಗಾರರೂ ಹಾಗೂ ನೊಬೆಲ್ ಪ್ರಶಸ್ತಿಗೆ ಭಾಜನರಾದಕೈಲಾಶ್ ಸತ್ಯಾರ್ಥಿಯವರೇ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವ ವಹಿಸಿರುವ ನಮ್ಮ ಹೆಮ್ಮೆಯ ಮಲ್ಲಿಕಾರ್ಜುನ ಖರ್ಗೆಯವರೇ, ಸಂವಿಧಾನ ಶಿಲ್ಪಿ ಡಾ ಬಿ ಆರ್ ಅಂಬೇಡ್ಕರ್ ಅವರ ಮೊಮ್ಮಗ ಹಾಗೂ ಮಾಜಿ ಸಂಸದರಾದ ಶ್ರೀ ಪ್ರಕಾಶ್ ಅಂಬೇಡ್ಕರ್ ಅವರೇ, ಜವಾಹರಲಾಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಎಮಿರಿಟಸ್, ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆಯ ಅಧ್ಯಕ್ಷರಾದ ಪ್ರೊಫೆಸರ್ ಎಸ್ ಕೆ ಥೋರಟ್ ಅವರೇ, ರಾಷ್ಟ್ರೀಯ ಹಾಗೂ ಅಂತರ್ರಾ?ಷ್ಟ್ರೀಯ ಮಟ್ಟದಲ್ಲಿ ತಮ್ಮ ಛಾಪನ್ನು ಮೂಡಿಸಿರುವ ಪಾಂಡಿತ್ಯ ಪೂರ್ಣ ತಜ್ಞರೇ,ಇಲ್ಲಿ ನೆರೆದಿರುವ ಆಹ್ವಾನಿತರೇ,ಮಹಿಳೆಯರೇ, ಮಹನೀಯರೇ,

ಪ್ರಪ್ರಥಮವಾಗಿ ಇಲ್ಲಿ ನೆರೆದ ಸರ್ವರಿಗೂ ಭೀಮ ನಮನಗಳನ್ನು ಸಲ್ಲಿಸುತ್ತೇನೆ.

ಸಾಮಾಜಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುವ, ಅತ್ಯಂತ ಸಮಯೋಚಿತವಾದ ಹಾಗೂ ಮಹತ್ತರವಾದ ಈ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ಈ ಸಂದರ್ಭವು ನನ್ನ ಪಾಲಿಗೆ ಬಹಳ ಮೌಲ್ಯವುಳ್ಳದ್ದಾಗಿದೆ. ಅಂಬೇಡ್ಕರ್ ಚಿಂತನೆಗಳ ಮರು–ಮನನ ಮಾಡುವುದುಹಾಗೂ ಸಾಮಾಜಿಕ ನ್ಯಾಯದ ಮರುಪೂರಣ ಮಾಡುವುದು, ಹೆಚ್ಚುತ್ತಿರುವ ಕೋಮುವಾದದ ವಿರುದ್ಧ ಹೋರಾಡಲು ಮತ್ತು ನಾವಿಂದು ಬದುಕುತ್ತಿರುವ ಸಮಾಜಕ್ಕೆ ಅವಶ್ಯಕವಾಗಿದೆ. ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕೋಮುವಾದ ಹೀಗೆ ಭದ್ರವಾಗಿ ಬೇರನ್ನು ಬಿಟ್ಟಿರಲಿಲ್ಲ. ಆದರೆ ಇಂದು ಪರಿಸ್ಥಿತಿಬೇರೆಯೇ ಇದೆ.

'ಸಮತೆಯ ಅನ್ವೇಷಣೆ' ಎಂಬ ಮೂಲ ತತ್ವದ ಈ ಸಮ್ಮೇಳನವನ್ನು ಡಾ ಬಿ ಆರ್ ಅಂಬೇಡ್ಕರ್ ಅವರ 126ನೇ ಜನ್ಮ ದಿನದ ಆಚರಣೆಯ ಭಾಗವಾಗಿ ಆಯೋಜಿಸಲಾಗಿದೆ. ಅಂಬೇಡ್ಕರ್ ಅವರು ಮಾದರಿ ಸಮಾಜದ ಕನಸನ್ನು ಕಂಡವರು. ಅವರ ಕಲ್ಪನೆಯ ಆ ಸಮಾಜದಲ್ಲಿ ಬಹುತ್ವಕ್ಕೆ ಹೆಚ್ಚಿನ ಮಹತ್ವ ಇತ್ತು. ನಮ್ಮ ಸಂವಿಧಾನ ಶಿಲ್ಪಿ ನಮಗೆ ಕೊಟ್ಟ ಇನ್ನೂ ಮಹತ್ತರವಾದ ಆಲೋಚನೆಯೆಂದರೆ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆ. ಸಾಮಾಜಿಕ ಹಾಗೂ ರಾಜಕೀಯ ಸುಧಾರಣೆಗಾಗಿ ಜಾತಿ ಎಂಬ ಪದ್ಧತಿಯ ಸಂಪೂರ್ಣ ನಿರ್ಮೂಲನೆ. ಇದರ ಮೂಲಕ ಎಲ್ಲಾ ಮನುಷ್ಯರಿಗೂ ಸಮಾನ ಅವಕಾಶಗಳ ಹಾಗೂ ಹಕ್ಕುಗಳ ಪ್ರತಿಪಾದನೆ.

ಎಪ್ಪತ್ತು ವರ್ಷಗಳ ಹಿಂದೆ ಭಾರತವು ಸ್ವತಂತ್ರ ದೇಶವಾದಾಗ ನಮ್ಮ ಮುಂದಿದ್ದ ದೊಡ್ಡ ಸವಾಲುನ್ಯಾಯ ಮತ್ತು ಸಮಾನತೆಯ ಅನ್ವೇಷಣೆ. ಭಾರತದ ಸಂವಿಧಾನವು, ಹಿಂದೆ ಇದ್ದ ಹಲವು ಮಜಲುಗಳ ಅಸಮಾನತೆಯನ್ನು ತೊಡೆದುಹಾಕಿ, ಜಾತಿ, ಧರ್ಮ, ಲಿಂಗ, ಪಂಗಡ ಮತ್ತು ಪ್ರದೇಶ ಆಧಾರಿತ ತರತಮವಿಲ್ಲದ,ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಯನ್ನು ಸಾಧ್ಯಶ್ಯವಾಗಿಸುವ ಕನಸು ಹೊತ್ತಿತ್ತು.ಇಂದು ಮತ್ತೆ, ನಮ್ಮ ಸಂವಿಧಾನ ನಿರ್ಮಾಣಕಾರರಲ್ಲಿ ಒಬ್ಬರಾದ ಅಂಬೇಡ್ಕರ್ ಅವರ ಕನಸಿನ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಅನ್ವೇಷಣೆಯನ್ನು ನಮ್ಮದಾಗಿಸಿಕೊಳ್ಳಬೇಕಿದೆ.

ಡಾ ಅಂಬೇಡ್ಕರ್ ಅವರು ತಮ್ಮ ಜೀವಿತಾವಧಿಯಲ್ಲಿ ಭಾರತೀಯ ಸಮಾಜದಲ್ಲಿ ದಮನಿತರು ಹಾಗೂ ಶೋಷಿತರು ಹುಟ್ಟು ಹಾಕಿದ ಹಲವಾರು ಹೋರಾಟಗಳಿಗೆ ಸಾಕ್ಷಿಯಾದವರು. ಅವರ ಆಲೋಚನೆ ಹಾಗೂ ದೂರದರ್ಶಿತ್ವದಿಂದ ಇಪ್ಪತ್ತನೆಯ ಶತಮಾನದ ದಲಿತ ಹೋರಾಟಗಳಿಗೆ ಬೌದ್ಧಿಕ ಹಾಗೂ ರಾಜಕೀಯ ತಳಹದಿ ಸಿಕ್ಕಿತ್ತು. ನಾವು ಇಂದು ಎದುರಿಸುತ್ತಿರುವ ಸಂಕೀರ್ಣ ಸವಾಲುಗಳಿಗೂ ಅಂಬೇಡ್ಕರ್ ಅವರ ಮಾತುಗಳಲ್ಲಿ, ಆಲೋಚನೆಗಳಲ್ಲಿ ಪರಿಹಾರ ಖಂಡಿತಾ ಇದೆ ಎನ್ನುವುದು ನನ್ನ ನಂಬಿಕೆ.

ಬಹುತ್ವ ಭಾರತದ ಪರಿಕಲ್ಪನೆಯು ಇಂದು ಕವಲು ದಾರಿಯಲ್ಲಿ ನಿಂತಿದೆ. ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾ ಶಕ್ತಿಗಳ ದಾಳಿಯ ಪರಿಣಾಮವಾಗಿ ನಮ್ಮ ದೇಶದ ನಾಗರಿಕತೆ ಮತ್ತು ಸಂಸ್ಕೃತಿಯು ಎತ್ತಿ ಹಿಡಿದಿದ್ದ ಮೌಲ್ಯಗಳು ಬಹು ದೊಡ್ಡ ಸವಾಲನ್ನು ಎದುರಿಸುತ್ತಿವೆ.

ಹಾಗಾಗಿ ಈ ಸಮ್ಮೇಳನ ಹಮ್ಮಿಕೊಳ್ಳಲು ಇದಕ್ಕಿಂತಾ ಉತ್ತಮ ಸಮಯ ಇನ್ನೆಂದೂ ಇರಲಿಕ್ಕಿಲ್ಲ ಎನ್ನುವುದು ನನ್ನ ಭಾವನೆ. ದೂರದ ಊರುಗಳಿಂದ ಬಂದಿರುವ ವಿದ್ವಾಂಸರು ಪ್ರಸ್ತುತ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟುಗಳ ವಿವಿಧ ಆಯಾಮಗಳ ಬಗ್ಗೆ ಚರ್ಚೆ ಮಾಡಿ,ನ್ಯಾಯ ಮತ್ತು ಸಮತೆಯನ್ನು ಸ್ಥಾಪಿಸಲು ಮುಂದೆ ಎತ್ತ ನಡೆಯಬಹುದು ಎನ್ನುವುದಕ್ಕೆ ಒಂದು ದಿಕ್ಸೂಚಿಯನ್ನು ಅಥವಾ ಸಮಸ್ಯಾ ಪರಿಹಾರವನ್ನು ಇಡಬಲ್ಲರು ಎನ್ನುವ ನಂಬಿಕೆ ನನಗೆ ಇದೆ.

ನಿಮಗೆ ಕರ್ನಾಟಕದ ಪರಿಚಯ ಇದ್ದರೆ, ಇಂತಹ ಮಹತ್ವದ ಸಮ್ಮೇಳನಕ್ಕೆ ನಮ್ಮ ರಾಜ್ಯಕ್ಕಿಂತ ಉತ್ತಮ ಸ್ಥಳ ಇನ್ನೊಂದಿಲ್ಲ

ಎನ್ನುವುದೂ ಗೊತ್ತಿರುತ್ತದೆ. ಡಾ ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಪ್ರತಿಪಾದಿಸಿದ ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಎತ್ತಿ ಹಿಡಿಯುವ ವೈವಿಧ್ಯಮಯ ಪರಿಕಲ್ಪನೆ ಹಾಗೂ ಪರಂಪರೆಯ ಜೀವನಶೈಲಿ ನಮ್ಮದು.

ಜಾತಿ ಪದ್ಧತಿ ಹಾಗೂ ಶ್ರೇಣೀಕೃತ ಸಮಾಜದ ವಿರುದ್ಧ ಈ ನಮ್ಮ ನಾಡಿನಲ್ಲಿ ಬಹಳ ಹಿಂದೆಯೇ ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ದಾಳಿ ಮಾಡಿದ ವ್ಯಕ್ತಿಗಳಲ್ಲೊಬ್ಬಹನ್ನೆರಡನೇ ಶತಮಾನದ ಬಸವಣ್ಣ. 'ಸಮಾನ ಜೀವನಕ್ಕೆ ಮತ್ತು ಗೌರವಕ್ಕೆ ಎಲ್ಲರೂಅರ್ಹರು' ಎಂದು ಸಾರಲು ಬಸವಣ್ಣ ಕ್ರಾಂತಿಯನ್ನೇ ಮಾಡಿದ. ಸಾಮಾಜಿಕವಾಗಿ ದುರ್ಬಲವಾಗಿದ್ದ ದಮನಿತ ಸಮುದಾಯಗಳ ಮೂಲಕವೇ ಜಾತಿ ವಿನಾಶ ಚಳವಳಿಯನ್ನು ಕಟ್ಟಿದ ಬಸವಣ್ಣ. ಆ ಚಳವಳಿಯು ಜಾತಿ, ವರ್ಗ ಮತ್ತು ಲಿಂಗ ಆಧಾರಿತ ಶ್ರೇಣೀಕೃತ ವ್ಯವಸ್ಥೆಯನ್ನು ತೀಕ್ಷ್ಣವಾದ ವಿಮರ್ಶೆಗೆ ಒಡ್ಡಿತು. ಭಕ್ತಿ, ಸೂಫಿ ಮತ್ತು ತತ್ವಪದಕಾರರ ಪರಂಪರೆಯ ಜೊತೆಗೆ ಮಿಳಿತಗೊಂಡ ವಚನಕಾರರ ಪರಂಪರೆಯು,ಜನ ಮಾನಸದಲ್ಲಿ ಸಮಾನತೆಯನ್ನು ಆಧರಿಸಿದ ಜೀವನ ದೃಷ್ಟಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಈ ಹಿನ್ನೆಲೆಯ ಕಾರಣ, ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ಕರ್ನಾಟಕದ ಹೋರಾಟಗಾರರು, ವಸಾಹತುಶಾಹಿ ವಿರೋಧಿ ಹೋರಾಟಕ್ಕೆ ಸಾಮಾಜಿಕ ಪರಿವರ್ತನೆಯ ಆಶಯವನ್ನು, ಅಸ್ಪ್ರುಶ್ಯತೆ ವಿರೋಧಿ ಕಾರ್ಯಕ್ರಮಗಳನ್ನು ಹಾಗೂ ಹಿಂದುಳಿದ ವರ್ಗಗಳ ಬಲವರ್ಧನೆ ಚಿಂತನೆಗಳನ್ನು ಮೇಳೈಸಿದರು.

ಕರ್ನಾಟಕವು ದಲಿತರು, ಹಿಂದುಳಿದವರು ಹಾಗೂ ರೈತರ ಚಾರಿತ್ರಿಕ ಹೋರಾಟಗಳಿಗೆ ಸಾಕ್ಷಿಯಾಗಿದೆ. ಇವುಗಳು ಡಾ ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರೇರಣೆ ಪಡೆದಿವೆ. ನನ್ನ ಆಲೋಚನೆಗಳು ಮತ್ತು ದೃಷ್ಟಿಕೋನಗಳುಸಮಾಜವಾದಿ, ಲೋಹಿಯಾವಾದಿ ಮತ್ತು ಅಂಬೇಡ್ಕರ್ ವಾದಿ ದಲಿತ ಹೋರಾಟಗಳಿಂದ ಪ್ರೇರಣೆ ಪಡೆದು, ರೂಪುಗೊಂಡಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ವಿನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಸಮಾಜದ ತಳಸ್ಥರದಲ್ಲಿರುವ ದಲಿತರು, ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರು ಒಂದುಗೂಡಿದರೆ ಮಾತ್ರ ಅಂಬೇಡ್ಕರ್ ಅವರ ಕನಸುಗಳಾದ ಸಮಾನತೆ, ಸ್ವಾತಂತ್ರ್ಯಮತ್ತು ಸಹೋದರತ್ವವನ್ನು ಸಾಕಾರಗೊಳಿಸಲು ಸಾಧ್ಯ ಎನ್ನುವುದನ್ನು ನನ್ನ ಹದಿವಯಸ್ಸಿನಲ್ಲೇ ನಾನು ಮನಗಂಡೆ.

ನನ್ನ ರಾಜಕೀಯ ಜೀವನದ ಉದ್ದಕ್ಕೂ ಅಂಬೇಡ್ಕರ್ ನಮಗೆ ಕೊಟ್ಟ ಪ್ರಜಾಪ್ರಭುತ್ವವಾದಿ ಮತ್ತು ಸಂವಿಧಾನಾತ್ಮಕ ಚೌಕಟ್ಟನ್ನು, ಬಸವಣ್ಣನ ಸಮಾನತೆಯ ಆಶಯವನ್ನು ಹಾಗೂ ಮಹಾತ್ಮಾ ಗಾಂಧಿಯವರ ಅಂತ್ಯೋದಯದ ದೃಷ್ಟಿಕೋನವನ್ನು ಮಿಲಿತಗೊಳಿಸಿ, ನನ್ನ ಕೆಲಸಗಳ ಮೂಲಕ ಪ್ರತಿಪಾದಿಸಲು ಪ್ರಾಮಾಣಿಕಪ್ರಯತ್ನ ಮಾಡಿದ್ದೇನೆ.

ಒಬ್ಬ ಹಣಕಾಸು ಮಂತ್ರಿಯಾಗಿ ಹಾಗೂ ಮುಖ್ಯ ಮಂತ್ರಿಯಾಗಿ ಸರ್ಕಾರದ ಆಯವ್ಯಯ ಪತ್ರ ತಯಾರಿಸಲು ಕುಳಿತರೆ, ನನ್ನ ಕಣ್ಣ ಮುಂದೆ ಬರುವುದು ನನ್ನ ಹಳ್ಳಿಯಲ್ಲಿ ಕಾಯಿಲೆ ಬಿದ್ದ ಮಗಳ ಸಲುವಾಗಿ ಹಿಡಿ ಅನ್ನಕ್ಕಾಗಿ ಶ್ರೀಮಂತರ ಮನೆಯ ಮುಂದೆ ಕೈ ಒಡ್ಡಿ ನಿಂತಿರುವ ತಂದೆಯ ಚಿತ್ರ. ಹಸಿದ ಹೊಟ್ಟೆಗಳು ರಾಜಕೀಯ ಹಕ್ಕುಗಳ ಕನಸನ್ನು ಕಾಣಲು ಸಾಧ್ಯವಿಲ್ಲ. ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ ಇಲ್ಲದೆ ರಾಜಕೀಯ ಸಮಾನತೆಯನ್ನು ಸಾಧಿಸುವುದು ಸಾಧ್ಯವಿಲ್ಲ ಎನ್ನುವ ಎಚ್ಚರಿಕೆಯನ್ನು ಡಾ ಅಂಬೇಡ್ಕರ್ ಅವರು ನಮಗೆ ಕೊಟ್ಟಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಸರ್ಕಾರದ ನೀತಿಗಳು ಹಾಗೂ ಕಾರ್ಯಕ್ರಮಗಳನ್ನು ಕಡೆಗಣಿಸಲ್ಪಟ್ಟ, ದಮನಿತ ಮತ್ತು ಶೋಷಿತರ ಆರ್ಥಿಕ ಸ್ವಾತಂತ್ರ್ಯವನ್ನು ಗಮನದಲ್ಲಿ ಇಟ್ಟುಕೊಂಡೆ ರೂಪಿಸಲಾಗಿದೆ. ಅಮಾರ್ತ್ಯ ಸೇನರ 'ಅಭಿವೃದ್ಧಿಯೇ ಸ್ವಾತಂತ್ರ್ಯ' ಎನ್ನುವ ಮಾತನ್ನು ನಾವು ಕರ್ನಾಟಕದ ಜನರು ಸಂಪೂರ್ಣವಾಗಿ ನಂಬಿದ್ದೇವೆ.

ನಮ್ಮ ಸರಕಾರವು, ತಲೆಮಾರುಗಳ ಕಾಲ ಅಸಮಾನತೆ ಮತ್ತು ತಾರತಮ್ಯವನ್ನು ಅನುಭವಿಸಿದ ಜನರಿಗೆ ಅವಕಾಶಗಳನ್ನು ಒದಗಿಸುವ ಒಂದು ಅಸ್ತ್ರವಾಗಿ ಅಭಿವೃದ್ಧಿಯನ್ನು ಪರಿಗಣಿಸಿದೆ.

ಅದಕ್ಕಾಗಿ ಶ್ರೇಷ್ಠ ಗುಣಮಟ್ಟದ ಶಿಕ್ಷಣ ಅತ್ಯಂತ ಆವಶ್ಯಕ ಎನ್ನುವುದು ನಮ್ಮ ದೃಢವಾದ ನಂಬಿಕೆ. ಸಾಮಾನ್ಯ ಶಾಲೆಗಳು, ವಸತಿ ಶಾಲೆಗಳು ಹಾಗೂ ಹಾಸ್ಟೆಲ್ಲುಗಳ ಜಾಲವು ಬಡವರಿಗೆ ಶಿಕ್ಷಣದ ಅನುಕೂಲಕಲ್ಪಿಸಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಸುಧಾರಣೆ ಹಾಗೂ ಅಭಿವೃದ್ಧಿಗಾಗಿರಾಜ್ಯದ ಒಟ್ಟು ಅನುದಾನದ ಶೇ. 24.1 ರಷ್ಟು ಮೊತ್ತವನ್ನು ಮೀಸಲಿಟ್ಟಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ಹೇಳಲು ಹೆಮ್ಮೆ ಅನಿಸುತ್ತಿದೆ.

ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಿಗೆ ನೀಡುವ ಅನುದಾನದ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸುವ ಮೂಲಕ ಆ ಎರಡೂ ಇಲಾಖೆಗಳನ್ನು ಹೆಚ್ಚು ಕ್ರಿಯಾಶೀಲಗೊಳಿಸಿದ್ದೇವೆ. ಯುವ ಜನಾಂಗಕ್ಕೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವುದಕ್ಕೆ ಹಾಗೂ ರೈತರ ಸುಧಾರಣೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿದ್ದೇವೆ. ದಲಿತರ ಬಲವರ್ಧನೆ ಮಾಡುವ, ಅವರ ಆತ್ಮ ಸ್ಥೈರ್ಯ ಹೆಚ್ಚಿಸುವ ಹಾಗೂ ಎಲ್ಲರನ್ನು ಒಳಗೊಳ್ಳಿಸುವಂತಹ ಅಭಿವೃದ್ಧಿ ಮಾರ್ಗದಲ್ಲಿ ನಡೆದಿದ್ದೇವೆ. ಈ ಹಿನ್ನೆಲೆಯಲ್ಲಿ, ಕರ್ನಾಟಕದಅಭಿವೃದ್ಧಿ ಮಾದರಿಯುಅಧ್ಯಯನಕ್ಕೆ ಯೋಗ್ಯವಾಗಿದೆ.

ಕಳೆದ ಎಪ್ಪತ್ತು ವರ್ಷಗಳಲ್ಲಿ ನಮ್ಮ ದೇಶವು ರಾಜಕೀಯ ಹಾಗೂ ಆರ್ಥಿಕ ಪ್ರಜಾಪ್ರಭುತ್ವವನ್ನು ಸಾಧಿಸುವಲ್ಲಿ ಗಣನೀಯ ಸಾಧನೆ ಮಾಡಿದೆ. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಜಾಗತಿಕ ಶಕ್ತಿಯಾಗಿ ಹೊಮ್ಮಿದ್ದೇವೆ. ಅಣು ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಮುಂದಿದ್ದೇವೆ. ಆದರೆ ಕೆಲವು ಪ್ರಮುಖ ವೈಫಲ್ಯಗಳೂ ಇವೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಹಾಗೂ ಹಿಂದುಳಿದ ವರ್ಗದವರು ಅಭಿವೃದ್ಧಿಯ ಪಥದಲ್ಲಿ ಇಂದಿಗೂ ತಾರತಮ್ಯ ಹಾಗೂ ಇತರೆ ಅಡೆತಡೆಗಳನ್ನು ಅನುಭವಿಸುತ್ತಿದ್ದಾರೆ. ಇತ್ತೀಚೆಗೆ ನಡೆಯುತ್ತಿರುವ ಕೋಮುವಾದಿ ಹಾಗೂ ಜಾತಿವಾದಿ ಗಲಭೆಗಳನ್ನು ನೋಡಿದರೆ ನಾವು ವಿರಮಿಸುವಂತಿಲ್ಲ. ಸತ್ತ ದನವೊಂದರ ಚರ್ಮ ಕಳಚಿದ್ದಕ್ಕೆ ಗುಜರಾತಿನಲ್ಲಿ ದಲಿತರ ಮೇಲೆ ಹಲ್ಲೆಯಾಗಿರುವುದನ್ನು ನಾವು ನೋಡಿದ್ದೇವೆ.

ಇವತ್ತು ಒಳ್ಳೆಯ ಮನುಷ್ಯ ಅನ್ನಿಸಿಕೊಳ್ಳಲು ನಮ್ಮ ನಡುವಿನ ಶೋಷಣೆ, ಅಸಮಾನತೆಗಳನ್ನು ನಿರ್ಲಕ್ಷಿಸಲೇಬೇಕು ಎನ್ನುವ ವಾತಾವರಣ ನಿರ್ಮಾಣವಾಗಿದೆ; ಆಹಾರ, , ಉಡುಗೆ, ಭಾಷೆ, ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಕಠಿಣ ನಿಯಮಗಳಿಗೆ ಬದ್ಧರಾಗಬೇಕಿದೆ; .ಬಲವಂತವಾಗಿ ಹೇರಲ್ಪಡುತ್ತಿರುವ ಬಹುಸಂಖ್ಯಾತರ ಭಾರತದ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲೇ ಬೇಕಿದೆ.

ಇದು ಸಂವಿಧಾನದ ಆಶಯಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದ್ದು, ಇದನ್ನು ನಾನು ವಿರೋಧಿಸುತ್ತೇನೆ. 1945 ನೇ ಇಸವಿಯಲ್ಲೇ ಡಾ ಅಂಬೇಡ್ಕರ್ ಅವರು ಬಹುಸಂಖ್ಯಾತರ ಅಭಿಪ್ರಾಯ ( ಮೆಜಾರಿಟೇರಿಯನಿಸಂ) ಎನ್ನುವುದು ಭಾರತದ ಮಟ್ಟಿಗೆ ತಾತ್ವಿಕವಾಗಿ ಮತ್ತು ಅನ್ವಯಿಕವಾಗಿ ಅಸಮರ್ಥನೀಯ ಆಲೋಚನೆ ಎಂದಿದ್ದರು.

ಈ ನಿಟ್ಟಿನಲ್ಲಿ ಒಂದು ರಾಷ್ಟ್ರವಾಗಿ ನಾವು ಅರ್ಥಮಾಡಿಕೊಳ್ಳಬೇಕಾದ ಸಂಗತಿಯೆಂದರೆ ಇಂತಹ ತೀವ್ರತರವಾದ ಹಾಗೂ ಒಗ್ಗಟ್ಟಿಗೆ ಮಾರಕವಾದ ವಿಚಾರಗಳನ್ನು ಸಹಿಸಿಕೊಳ್ಳುವುದು ಸಮಸ್ಯೆಗಳಿಗೆ ಪರಿಹಾರ ಅಲ್ಲ. ಸಹಿಸಿಕೊಳ್ಳುವಿಕೆಯು ಬಹುಸಂಖ್ಯಾತರ ದಾಳಿಯ ದುಷ್ಪರಿಣಾಮಗಳನ್ನು ಒಂದಿಷ್ಟು ನಿಧಾನಗೊಳಿಸಬಹುದು ಅಷ್ಟೇ. ಸಮಾನತೆಯ ಆಶಯಗಳ ಮೇಲೆ ನಮ್ಮ ದೇಶ ನಿಲ್ಲಲು ನಾವು ಹೋರಾಟ ಮಾಡಲೇಬೇಕಿದೆ.

ಇಂದು ದೇಶದ ಎಷ್ಟೋ ಭಾಗಗಳಲ್ಲಿ ಕಾನೂನು ಎಲ್ಲರನ್ನು ಸಮಾನವಾಗಿ ಕಾಣುತ್ತಿಲ್ಲ. ಕೆಲವರು ಇತರರಿಗಿಂತ ಹೆಚ್ಚು ಸಮಾನರಾಗಿದ್ದಾರೆ. ದಲಿತರು, ಆದಿವಾಸಿಗಳು, ಧಾರ್ಮಿಕ ಮತ್ತು ಸೈದ್ಧಾಂತಿಕ ಅಲ್ಪಸಂಖ್ಯಾತರ ಮೇಲೆ ನಡೆಯುವ ಹಲ್ಲೆಗಳು ವಿಪರೀತ ಹೆಚ್ಚಾಗಿವೆ. ಸಹಸ್ರಾರು ಭಾರತೀಯರಿಗೆ ಉತ್ತಮ ಜೀವನದ ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ವ್ಯವಸ್ಥಿತವಾಗಿ ನಿರಾಕರಿಸಲಾಗುತ್ತಿದೆ. ಇದು,ಎಲ್ಲರನ್ನೂ ಒಳಗೊಳ್ಳಬೇಕೆಂಬಭಾರತದ ಆಡಳಿತದ ಪರಿಕಲ್ಪನೆಗೆ ಅಪಾಯಕಾರಿಯಾಗಿದೆ.

ಇದು ಭಾರತ ಎಂಬ ಪರಿಕಲ್ಪನೆಗೆ ಸಂಪೂರ್ಣ ವಿರುದ್ಧವಾಗಿದೆ. ಬಹಳ ಹಿಂದೆಯೇ ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದರು: "ರಾಷ್ಟ್ರ ಎನ್ನುವುದು ಒಂದೇ ಸಂಸ್ಕೃತಿಯನ್ನು ಪರಿಭಾವಿಸುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಜಾತಿ ಮತ್ತು ಮತದ ಜನರಿಂದಾದದ್ದಲ್ಲ. ರಾಷ್ಟ್ರೀಯತೆ ಎನ್ನುವುದು ಎಲ್ಲರೂ ನನ್ನವರೇ ಹಾಗೂ ನಾವು ಎಲ್ಲರ ಜೊತೆ ಎಂದೆನಿಸುವ ಭಾವನೆ"

ಈ ಹಿನ್ನೆಲೆಯಲ್ಲಿ ಕೆಲವು ಚಿಂತಕರಿಗೆ 'ದೇಶದ್ರೋಹಿ' ಎನ್ನುವ ಹಣೆ ಪಟ್ಟ ಕಟ್ಟುವುದನ್ನು ಹಾಗೂ ಆ ಹೀನ ಪದದ ಬಳಕೆಯನ್ನು ಬಲವಾಗಿ ಖಂಡಿಸುತ್ತೇನೆ. ಯಾಕೆಂದರೆ, ಬಹುತ್ವದ ಅಡಿಯಲ್ಲಿ ನೈತಿಕತೆ ಬೇರೆ ಬೇರೆ ಆಯಾಮಗಳನ್ನು ಹೊಂದುತ್ತದೆ. ಹಾಗೂ ಭಾರತದ ಪರಿಕಲ್ಪನೆಯನ್ನು ಸಂಕುಚಿತ ವ್ಯಾಖ್ಯೆಗೆ ಸೀಮಿತಗೊಳಿಸಲು ಸಾಧ್ಯವಿಲ್ಲ. ನಾವೀಗ ನಮ್ಮ ಸಾಂಸ್ಕೃತಿಕ ಮತ್ತು ನಾಗರೀಕತೆಯ ನೆಲೆಯಲ್ಲಿ ಸಹಿಷ್ಣುತೆ ಮತ್ತು ಕಾರುಣ್ಯದ ಗುಣಗಳನ್ನು ಆಧರಿಸಿದ ಹೊಸ ವ್ಯಾಖ್ಯೆಯೊಂದನ್ನು ಕಂಡುಕೊಳ್ಳಬೇಕಿದೆ. ಬುದ್ಧ, ಬಸವರಂಥ ಸಂತರು ಮತ್ತು ಮಹಾತ್ಮ ಗಾಂಧಿ, ಬಿ ಆರ್ ಅಂಬೇಡ್ಕರರಂಥಾ ದಾರ್ಶನಿಕರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕಿದೆ.

ಭಾರತದ ಬಹುತ್ವ ಮತ್ತು ಜಾತ್ಯಾತೀತತೆಯ ಮೌಲ್ಯಗಳು ಇಂದು ಅಪಾಯದಲ್ಲಿವೆ. ಈ ನೆಲದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಿಂತಕರ ಬಳುವಳಿಯಾಗಿ ಬಂದಂಥ ಪರಂಪರೆಗಳವು ಆಧುನಿಕ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆಯು ಮೌಲ್ಯಾಧಾರಿತವಾಗಿ ಉಳಿಯುವಂತೆ ಮಾಡಲು ಡಾ ಅಂಬೇಡ್ಕರ್ ಅವರು ಪರಂಪರೆಯಿಂದ ಬಂದ ಮೌಲ್ಯಗಳನ್ನು ಹಾಗೂಬೌದ್ಧ ಧರ್ಮದೊಳಗಿನ ಪ್ರಜಾಪ್ರಭುತ್ವವಾದಿ ಅಂಶಗಳನ್ನು ತೆಗೆದುಕೊಂಡರು. ಜನರಿಗೆ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಖಾತ್ರಿ ಪಡಿಸಲು ದೇಶದ ಆಡಳಿತ ಸಂಸ್ಥೆಯು ಸುಧಾರಣಾವಾದಿ ಪಾತ್ರವನ್ನು ವಹಿಸಬೇಕಾಗುತ್ತದೆ ಎನ್ನುವುದು ಅವರಿಗೆ ಅರ್ಥವಾಗಿತ್ತು.

ಕುರುಡು ಸಾಂಪ್ರದಾಯಿಕ ಶಕ್ತಿಗಳಿಂದ ಅಸಹಿಷ್ಣುತೆ ಬೆಳೆಯುತ್ತಿದ್ದು ಪ್ರಜಾಪ್ರಭುತ್ವ, ಜಾತ್ಯಾತೀತತೆಮತ್ತು ಸಮಾನತೆಯ ನಡುವೆ ಇದ್ದ ಆಳವಾದ ಸಂಬಂಧಕ್ಕೆ ಧಕ್ಕೆ ಒದಗಿರುವುದು ದುಖದ ಸಂಗತಿಯಾಗಿದೆ. ಇಂಥಾ ಸಮಯದಲ್ಲಿ ಡಾ ಅಂಬೇಡ್ಕರ್ ಅವರ ವಿಚಾರಗಳಲ್ಲದೆ ಇನ್ನೆಲ್ಲಿ ನಮಗೆ ಬೌದ್ಧಿಕ ಶಕ್ತಿ, ವೈಚಾರಿಕ ಮತ್ತು ನೈತಿಕ ಸ್ಪಷ್ಟತೆಯನ್ನು ಹುಡುಕಲು ಸಾಧ್ಯ? ಮುಂದಿನ ದಾರಿಯ ಕಾರ್ಯಸೂಚಿ ಅವರ ಆಲೋಚನೆಗಳ ಸಹಾಯದಿಂದಲೇ ಬರಬೇಕು. ಜಗತ್ತಿನ ಮೇರು ವಿಧ್ವಾಂಸರು ಸೇರಿರುವ ಈ ಸಮ್ಮೇಳನದಲ್ಲಿ ಹೊಮ್ಮುವ ವಿಚಾರಗಳು ಮಥಿಸಿ ಹೊರಡುವ ಮಾತುಗಳು ನಮಗೆ ದಾರಿದೀಪವಾಗಲಿ ಎಂದು ಆಶಿಸುತ್ತೇನೆ.

ಜಗತ್ತಿನ ಅತ್ಯಂತ ಪ್ರತಿಭಾನ್ವಿತ ಮತ್ತು ಪ್ರಖರ ಮನಸ್ಸುಗಳು ಪ್ರಸ್ತುತದ ಸವಾಲುಗಳನ್ನು ಪರಿಶೀಲಿಸಿ, ತಮ್ಮ ವಿಚಾರಗಳ ಮೂಲಕ ಸಾಣೆ ಹಿಡಿದು ಭಾರತವು ಇಂದು ಎದುರಿಸುತ್ತಿರುವ ಆತಂಕಗಳು ಹಾಗೂ ನಮ್ಮ ಮುಂದಿರುವ ಅವಕಾಶಗಳನ್ನು ವಿಸ್ತೃತ ರೂಪದಲ್ಲಿ ವಿಷದ ಪಡಿಸಬೇಕಿದೆ. ನಿಮ್ಮ ಚರ್ಚೆಗಳ ಮೂಲಕ ಹೊರಡುವ ಅಭಿಪ್ರಾಯವನ್ನು ಕರ್ನಾಟಕ ಸರ್ಕಾರವು ಬೆಂಗಳೂರು ಡಿಕ್ಲರೇಷನ್ ಅನ್ನು ಹೊರಡಿಸಲಿದೆ. ಈ ಹೊತ್ತಿಗೆಯು ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಅಗತ್ಯವಾದ ಸಾಂವಿಧಾನಿಕ, ಸಾಂಸ್ಥಿಕ ಹಾಗೂ ನೀತಿ–ಆಧರಿತ ಕಾರ್ಯಸೂಚಿಯನ್ನು ಪ್ರಸ್ತುತ ಪಡಿಸುತ್ತದೆ. ಡಾ ಮಾರ್ಟಿನ್ ಲೂಥರ್ ಕಿಂಗ್ ಅವರ ಮಾತಿನಲ್ಲೇ ಹೇಳುವುದಾದರೆ, ಈ ಹೊತ್ತಿಗೆಯು 'ದುಃಖದ ಪರ್ವತದ ಮುಂದೆ ಆಶಾಭಾವನೆಯ ಚಿಕ್ಕದೊಂದು ಹರಳಾಗಿ'ನಮ್ಮ ಮುಂದಿರುತ್ತದೆ. ಈ ದಿಕ್ಸೂಚಿ ಹೊತ್ತಿಗೆಯು ಪ್ರತಿಯೊಬ್ಬ ಭಾರತೀಯರ ಅಭಿಲಾಷೆಯನ್ನು ಗೌರವಿಸುತ್ತದೆ, ರಕ್ಷಿಸುತ್ತದೆ ಹಾಗೂ ಉನ್ನತೀಕರಿಸುತ್ತದೆ. ಅದರ ಜೊತೆಗೇ ದಲಿತ, ಆದಿವಾಸಿ, ಹಿಂದುಳಿದ ವರ್ಗ ಹಾಗೂ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಬಲವರ್ಧನೆಗೆ ವಿಶೇಷ ಅವಕಾಶವಿರುವಂತೆ ನೋಡಿಕೊಳ್ಳುತ್ತದೆ. ಈ ಮೂಲಕ ಕರ್ನಾಟಕ ರಾಜ್ಯ ಮತ್ತು ಭಾರತ ದೇಶ, ಈ ಎರಡೂ ಇನ್ನೂ ಹೆಚ್ಚಿನ ಎತ್ತರಕ್ಕೆ ಬೆಳೆಯಲು ಅನುವು ಮಾಡಿಕೊಡುತ್ತದೆ.

ಶ್ರೀ ರಾಹುಲ್ ಗಾಂಧಿ , ಶ್ರೀ ಪ್ರಕಾಶ್ ಅಂಬೇಡ್ಕರ್ , ಹಾಗೂ ಇಲ್ಲಿ ನೆರೆದಿರುವ ಎಲ್ಲ ಚಳುವಳಿಗಾರರು, ವಿದ್ವಾಂಸರು, ನೀತಿ ತಜ್ಞರು – ನಿಮ್ಮೆಲ್ಲರ ಸಮ್ಮುಖದಲ್ಲಿ ನಾನು ನನ್ನ ಮಾತುಗಳನ್ನು ಡಾ ಮಾರ್ಟಿನ್ ಲೂಥರ್ ಕಿಂಗ್ ಅವರ ಹೇಳಿಕೆಯೊಂದಿಗೆ ಕೊನೆಗೊಳಿಸಲು ಇಷ್ಟಪಡುತ್ತೇನೆ. "ಮುಂದಿನ ದಿನಗಳು ಕಷ್ಟಕರವಾಗಿವೆ. ಆದರೆ ನನಗೇನೂ ಚಿಂತೆಯಿಲ್ಲ.ಯಾಕೆಂದರೆ ನಾನು ಪರ್ವತದ ತುತ್ತತುದಿಗೆ ಹೋಗಿ ನೋಡಿದ್ದೇನೆ. ಅಲ್ಲೊಂದು ಭರವಸೆಯ ನೆಲ ನನಗೆ ಕಂಡಿದೆ. ನಾನು ನಿಮ್ಮ ಜೊತೆ ಆ ನೆಲಕ್ಕೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ. ಆದರೆ, ಇಲ್ಲಿ ನೆರೆದಿರುವ ಪ್ರತಿಯೊಬ್ಬರೂ ಒಂದು ಮಾತಿನಲ್ಲಿ ನಂಬಿಕೆ ಇಡಬೇಕು. ನಾವು, ನಮ್ಮ ಜನರು ಆ ನೆಲಕ್ಕೆ ಹೋಗಿಯೇ ತೀರುತ್ತೇವೆ."

ಈ ಐತಿಹಾಸಿಕ ಸಮ್ಮೇಳನದಲ್ಲಿ ಭಾಗಿಯಾಗಿದ್ದಕ್ಕೆ ಪ್ರತಿಯೊಬ್ಬರಿಗೂ ನನ್ನಹೃತ್ಪೂರ್ವಕ ವಂದನೆಗಳು.

**ಜೈ ಹಿಂದ್! ಜೈ ಕರ್ನಾಟಕ! ಜೈ ಭೀಮ್!**



# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ದೀವಟಿಗೆ

ಎನ್ ಜಗನ್ನಾಥ ಪ್ರಕಾಶ್

> **ಭಾರತದಲ್ಲಿದ್ದ ಅತಂತ್ರ ಸ್ಥಿತಿಯನ್ನು ಉಪಯೋಗಿಸಿಕೊಂಡು ರಾಷ್ಟ್ರ ಆಳ್ವಿಕೆಗೆ ಯತ್ನಿಸುತ್ತಿದ್ದ ಬ್ರಿಟಿಷರಿಗೆ ಬಂದ ಪ್ರತಿರೋಧಗಳಲ್ಲಿ ಕರ್ನಾಟಕ ಪಾಲು ಹಿರಿದು. ಟಿಪ್ಪು ಸುಲ್ತಾನ್, ರಾಣಿ ಚೆನ್ನಮ್ಮ, ದೊಂಡಿಯಾ ವಾಘ್ ಹೀಗೆ ಹಲವಾರು ರಾಷ್ಟ್ರ ಪ್ರೇಮಿಗಳು ಬಿಳಿಯರ ಆಕ್ರಮಣದ ವಿರುದ್ಧ ಹೋರಾಟ ನಡೆಸಿದ್ದು ಇತಿಹಾಸ.**

**ಭಾ**ರತದ ಸ್ವಾತಂತ್ರ್ಯ ಚರಿತ್ರೆಯಲ್ಲಿ ಇಂಗ್ಲಿಷರ ಎದುರಿಗೆ ಹೋರಾಡಿದ ಕನ್ನಡನಾಡಿನ ರಾಜರು, ಸಾಮಂತರು, ಜನಸಾಮಾನ್ಯರಿಗೆ ಎದುರಾಳಿ, ಬಲಾಢ್ಯನೆಂಬ ಅರಿವಿದ್ದರೂ ತಾಯ್ನೆಲದ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಬಾರದೆಂಬ ಉದ್ದೇಶದಿಂದ ಟೊಂಕ ಕಟ್ಟಿ ನಿಂತರು.

**ಪರೋಕ್ಷ ಹೋರಾಟ:** ಬಹುತೇಕ ಎಲ್ಲಾ ಘಟನೆಗಳಲ್ಲೂ ಅಂತಿಮವಾಗಿ ಸಶಕ್ತರಾದ ಬ್ರಿಟಿಷರಿಗೆ ಮೇಲುಗೈ ಸಿಕ್ಕರೂ ಜಯ ಸುಲಭವಾಗಿರಲಿಲ್ಲ, ಗೆಲುವಿಗಾಗಿ ಪರೋಕ್ಷ ಹೋರಾಟಗಳನ್ನು ಬಿಳಿಯರು ನಡೆಸಿದರು. ಭಾರತೀಯ ರಾಜ್ಯಗಳ ನಡುವೆ, ನಾಯಕರ ಮಧ್ಯೆ ಸಂಘರ್ಷ ಹುಟ್ಟುಹಾಕಿದರು. ಗೆಲುವು ಪಡೆಯಲು ಬ್ರಿಟಿಷರು ಹಿಡಿದ ಮಾರ್ಗಗಳು ಹತ್ತು ಹಲವು.

ದಕ್ಷಿಣ ಭಾರತದಲ್ಲಿ ಬಲಿಷ್ಠ ಸಾಮ್ರಾಜ್ಯ ಆಳುತ್ತಿದ್ದ ಹೈದರಾಲಿ, ಟಿಪ್ಪುಸುಲ್ತಾನರನ್ನು ಮೊದಲು ಬಲೆಗೆ ಕೆಡವಲು ಬಿಳಿಯರು ಪ್ರಯತ್ನಿಸಿ ವಿಫಲರಾದಾಗ ಅನ್ಯ ಮಾರ್ಗಗಳತ್ತ





ನೋಡಿದರು. ಮೊದಮೊದಲು ಸೋತು ಸಂಧಿ ಮಾಡಿಕೊಂಡ ಬ್ರಿಟಿಷರು ನಂತರ ಹೈದರಾಬಾದ್ ಹಾಗೂ ಮರಾಠ ಪೇಷ್ವೆಗಳ ನೆರವಿನಿಂದ ಟಿಪ್ಪುವನ್ನು ಮಣಿಸಲು ಮುಂದಾದರು. ಯುದ್ಧ ಕಲಿಯಾಗಿದ್ದರೂ ಬಿಳಿಯರ ಶಕ್ತಿ ಹಾಗೂ ಕುತಂತ್ರದ ಮುಂದೆ ಟಿಪ್ಪು ಸೋಲು ಕಾಣಬೇಕಾಯಿತು. 1999 ರಲ್ಲಿ ನಡೆದ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ವೀರಮರಣವನ್ನಪ್ಪಿದ ಮೇಲೆ ಬ್ರಿಟಿಷರ ಎದುರು ನಿಲ್ಲುವವರಾರಿಲ್ಲವೆಂದುಕೊಂಡರೂ ಆಗಾಗ ಸ್ವಾತಂತ್ರ್ಯದ ಕಿಡಿಗಳು ಹಾರುತ್ತಿದ್ದವು. ಅಂತಹ 'ಕಿಡಿ'ಗಳಲ್ಲಿ ಮೊದಲನೆಯದು ವಾಘ್. ದೊಂಡಿಯಾ ವಾಘ್.

**ದೊಂಡಿಯಾ :** ಮೈಸೂರು ಸೈನ್ಯದಲ್ಲಿದ್ದು ನಂತರ ಅದನ್ನು ತೊರೆದು ಸ್ವತಂತ್ರ ಸಂಸ್ಥಾನ ಸ್ಥಾಪನೆಗೆ ಮುಂದಾದ ದೊಂಡಿಯಾ ವಾಘ್ ಈಗಿನ ಚೆನ್ನಗಿರಿಯವನು. ಸಮಾನ ಮನೋಭಾವದವರನ್ನು ಒಗ್ಗೂಡಿಸಿ ಸೈನ್ಯಕಟ್ಟಿ ನಿಧಾನವಾಗಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ, ಆತನ ನಿಗ್ರಹಕ್ಕೆ ಸಜ್ಜಾದ ಬಿಳಿಯರಿಗೆ ಅದೇನು ಸುಲಭದ ತುತ್ತಾಗಿರಲಿಲ್ಲ. ಧೀರನೂ ಬುದ್ಧಿವಂತನೂ ಆದ ದೊಂಡಿಯಾ ವಾಘ್ ತನ್ನ ಮೇಲೆ ಬ್ರಿಟಿಷರು ಹೂಡಿರುವ ತಂತ್ರಗಳನ್ನು ತಿಳಿದು ಅವರ ವಿರುದ್ಧ ಹೋರಾಡಲು ನೆರೆಹೊರೆಯ ರಾಜರನ್ನು ಸಂಪರ್ಕಿಸಿ ಒಟ್ಟಾಗಿ ಸೆಣಸಲು ಕಾರ್ಯ ತಂತ್ರ ರೂಪಿಸಲು ಆರಂಭಿಸಿದ. ಇವೆಲ್ಲವನ್ನು ತಿಳಿದುಕೊಂಡ ಈಸ್ಟ್ ಇಂಡಿಯಾ ಕಂಪನಿ ಸೈನ್ಯ ವೆಲ್ಲೆಸ್ಲಿ ಮುಂದಾಳತ್ವದಲ್ಲಿ ಮೇಲೇರಿ ಬಂತು.

ಟಿಪ್ಪು ಸುಲ್ತಾನರನ್ನು ಸೋಲಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದ



ಸೈನ್ಯಾಧಿಕಾರಿ ವೆಲ್ಲೆಸ್ಲಿ ದೊಂಡಿಯಾ ವಾಘ್‌ನನ್ನು ಹತ್ತಿಕ್ಕಲು ಕಾರ್ಯಾಚರಣೆ ಕೈಗೊಂಡ. ನೇರ ಕದನದಲ್ಲಿ ಶಕ್ತಿಶಾಲಿಯಾಗಿದ್ದ ದೊಂಡಿಯಾವನ್ನು ಸೋಲಿಸಲು ಬೇರೆ ತಂತ್ರಗಳನ್ನು ಬಳಸಿದರು. ದೊಂಡಿಯಾ ಬೆನ್ನಟ್ಟಿ ಹೊರಟ ಬಿಳಿಯರು ನಿಜಾಂ ಪ್ರಾಂತ್ಯ ಪ್ರವೇಶಿಸಿದ್ದ ದೊಂಡಿಯಾನನ್ನು ಎಲ್ಲಾ ದಿಕ್ಕುಗಳಿಂದ ಸುತ್ತುವರೆದು ಆಧುನಿಕ ಶಸ್ತ್ರಗಳೊಂದಿಗೆ ಹೋರಾಟ ಮೊದಲಿಟ್ಟರು. 1800 ಸೆಪ್ಟೆಂಬರ್ 10 ರಂದು 'ಕೋಣಗಲ' (ನಿಜಾಂ ಪ್ರದೇಶ) ಎಂಬ ಶಿಬಿರದಲ್ಲಿ ಯುದ್ಧ ಮಾಡುತ್ತಲೇ ದೊಂಡಿಯಾ ಅಸುನೀಗಿದನು. ನಿಜಾಮನ ಆಳ್ವಿಕೆಗೆ ಕೆಲವು ಪ್ರಾಂತ್ಯಗಳನ್ನು ಬ್ರಿಟಿಷರು ನೀಡಿದ್ದರು. ಅದರಲ್ಲಿ ಕರ್ನಾಟಕದ ಕೆಲವು ಪ್ರದೇಶಗಳು ಸೇರಿದ್ದವು. ಅವುಗಳಲ್ಲಿ ಕೊಪ್ಪಳ ಕೂಡ ಒಂದು.

**ಕೊಪ್ಪಳ ವಿಪ್ಲವ :** ಕೊಪ್ಪಳದಲ್ಲಿ ನಿಜಾಮನ ಅಧಿಕಾರಿಗಳು ಜನಸಾಮಾನ್ಯರನ್ನು ಸುಲಿಯಲು ಆರಂಭಿಸಿದ್ದರು. ಆಗ ಹೊತ್ತಿಕೊಂಡಿತು ನೋಡಿ ಕೊಪ್ಪಳದ ಕಿಡಿ.

ಭೂ ಮಾಲೀಕರಿಗೂ ಕಿರಿಕಿರಿ ತಪ್ಪಲಿಲ್ಲ. ಆಗ ವೀರಪ್ಪನೆಂಬ ಮಾಲೀಕ ಜನರನ್ನು ಸೇರಿಸಿಕೊಂಡು ಕೊಪ್ಪಳ ಹಾಗೂ ಬಹದ್ದೂರ್ ದುರ್ಗಗಳನ್ನು ತನ್ನ ವಶಕ್ಕೆ ತೆಗೆದುಕೊಂಡ. ತಮ್ಮ ವ್ಯಾಪ್ತಿಗೆ ಬರದ ತಮ್ಮ ಕಾನೂನು ಗೌರವಿಸದ ಯಾರನ್ನೂ ಹಾಗೆಯೇ ಉಳಿಸಲು ಸಿದ್ಧರಿಲ್ಲದ ಆಂಗ್ಲರು ನಿಜಾಂ ಸೈನ್ಯದೊಡನೆ ಕೈಜೋಡಿಸಿ ಕೊಪ್ಪಳದ ಕಿಡಿಯನ್ನು ಆರಿಸಿದರು.

ವೀರಪ್ಪ ತನ್ನ ಪುಟ್ಟ ಪಡೆಯೊಂದಿಗೆ ಕೊಪ್ಪಳ ಕೋಟೆಯಲ್ಲಿ ಬ್ರಿಟಿಷರ ಗುಂಡಿಗೆ ಎದೆಯೊಡ್ಡಿ ವೀರಸ್ವರ್ಗ ಸೇರಿದ. ಈ ನೆಲದ ಕಾನೂನನ್ನು ಬದಲಿಸಿ ತಮ್ಮದೇ ಆದ ಕಾಯ್ದೆಗಳನ್ನು ಬ್ರಿಟಿಷರು ಹೇರಿದರು. ಅದರಿಂದ ಭಾರತೀಯರು ಅನೇಕ ಹಕ್ಕುಗಳನ್ನು ಕಳೆದುಕೊಳ್ಳಬೇಕಾಯಿತು. ಪರಂಪರೆಯಿಂದ ಆಚರಿಸಿಕೊಂಡು ಬಂದ ಅನೇಕ ರೀತಿರಿವಾಜುಗಳೂ ಬಿಳಿಯರ ಆಳ್ವಿಕೆಯಲ್ಲಿ ನಲುಗಿ ಹೋದವು.

**ಬೀದರ್‌ದಂಗೆ :** ಕೊಪ್ಪಳದ ವಿಪ್ಲವದ ನಂತರ ಬೀದರ್‌ನ ದೇಶಮುಖರು ಬ್ರಿಟಿಷ್ ಪ್ರತಿನಿಧಿಗಳಾದ ನಿಜಾಂ ಅಧಿಕಾರಿಗಳನ್ನು ಧಿಕ್ಕರಿಸಿ ನಿಂತರು. ಅನ್ಯಾಯಗಳ ವಿರುದ್ಧ ಜನ ತಿರುಗಿಬಿದ್ದರೆ ಬ್ರಿಟಿಷರ ದೃಷ್ಟಿಯಲ್ಲಿ ಅದು ಅಪರಾಧ, ಸಣ್ಣಪ್ರಾಂತ್ಯಗಳಿಗೆ ಮುಖಂಡರಾಗಿದ್ದ ಶಿವಲಿಂಗಪ್ಪ, ತಿರುಮಲರಾಯರು ಹಾಗೂ ಮೇಘಶ್ಯಾಮದೇಶಮುಖರು ಜನರ ನೋವುಗಳಿಗೆ ಸ್ಪಂದಿಸಿ ನಿಜಾಂ ಆಡಳಿತದ ವಿರುದ್ಧ ಸೆಣಸಾಟಕ್ಕೆ ಇಳಿದರು. ತಾವೇ ಆಡಳಿತ ಮಾಡದ ಕಡೆ ಸ್ಥಳೀಯ ಸಾಮಂತರನ್ನು ಆಳ್ವಿಕೆಗೆ ನಿಲ್ಲಿಸುತ್ತಿದ್ದ ಬ್ರಿಟಿಷರು ಅವರ ರಕ್ಷಣೆಗೆ ಬರುತ್ತಿದ್ದರು. ಬೀದರ್‌ನಲ್ಲಿ ನಿಜಾಂ ಪ್ರತಿನಿಧಿಗಳ ವಿರುದ್ಧ ಜನರು ಸೆಟೆದು ನಿಂತಾಗ, ಅದನ್ನು ನಿಯಂತ್ರಿಸಲು ಬ್ರಿಟಿಷ್ ಸೇನೆ ಆಗಮಿಸಿತು. ಯಾವುದೇ ಸಂಘಟಿತ ಹೋರಾಟವನ್ನು ಮುರಿಯಲು ಸನ್ನದ್ಧರಾಗಿದ್ದ ಬಿಳಿಯರ ಮುಂದೆ ಬೀದರ್ ದಂಗೆಯೂ ವಿಫಲವಾಯಿತು. ಆದರೆ ಬ್ರಿಟಿಷರು ಪೂರ್ಣವಾಗಿ ಇದನ್ನ ನಿಗ್ರಹಿಸಲು ಸಾಧ್ಯವಾಗಲಿಲ್ಲ. ಆಗಾಗ ಇಂತಹ ವಿಪ್ಲವಗಳು ನಡೆಯುತ್ತಿದ್ದವು. ಬಿಳಿಯರ ಸೇನೆ ಅದನ್ನು ಹತ್ತಿಕ್ಕುತ್ತಿತ್ತು.

**ಕಿತ್ತೂರು ಹೋರಾಟ :** ಮೈಸೂರು ಯುದ್ಧದ ನಂತರ ಬ್ರಿಟಿಷರಿಗೆ ಸ್ವಲ್ಪ ತ್ರಾಸವಾಗಿದ್ದು ಕಿತ್ತೂರು ಹೋರಾಟ. ಕಿತ್ತೂರು ಪುಟ್ಟ ಸಂಸ್ಥಾನವಾದರೂ ಅದನ್ನು ವಶಪಡಿಸಿಕೊಳ್ಳಲು ಬ್ರಿಟಿಷರು

**ರಾಣಿಚೆನ್ನಮ್ಮ ಕಿತ್ತೂರು ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ಮುಂದಾದ ಕಂಪನಿ ಸೇನೆ ಮೇಲೆ ಕೆಚ್ಚಿನಿಂದಲೇ ಹೋರಾಡಿದರು. ಪ್ರಾರಂಭದಲ್ಲಿ ಪೆಟ್ಟುತಿಂದ ಬಿಳಿಯರು ಕೆಲವು ರಾಷ್ಟ್ರದ್ರೋಹಿಗಳ ನೆರವಿನಿಂದ ನಂತರ ಕಿತ್ತೂರು ಕೋಟೆಯನ್ನು ಗೆದ್ದರು. ರಾಣಿಯನ್ನು ಸೆರೆಹಿಡಿದು ಜೈಲಿನಲ್ಲಿಟ್ಟರು. ರಾಣಿಯ ಶೌರ್ಯ ಸಾಹಸ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿರಸ್ಥಾಯಿಯಾಗಿ ಉಳಿಯಿತು.**



ಸ್ವಲ್ಪ ಹೆಚ್ಚು ಶ್ರಮಿಸಬೇಕಾಯಿತು. ರಾಣಿಚೆನ್ನಮ್ಮ ಕಿತ್ತೂರು ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ಮುಂದಾದ ಕಂಪನಿ ಸೇನೆ ಮೇಲೆ ಕೆಚ್ಚಿನಿಂದಲೇ ಹೋರಾಡಿದರು. ಪ್ರಾರಂಭದಲ್ಲಿ ಪೆಟ್ಟುತಿಂದ ಬಿಳಿಯರು ಕೆಲವು ರಾಷ್ಟ್ರದ್ರೋಹಿಗಳ ನೆರವಿನಿಂದ ನಂತರ ಕಿತ್ತೂರು ಕೋಟೆಯನ್ನು ಗೆದ್ದರು. ರಾಣಿಯನ್ನು ಸೆರೆಹಿಡಿದು ಜೈಲಿನಲ್ಲಿಟ್ಟರು. ರಾಣಿಯ ಶೌರ್ಯ ಸಾಹಸ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿರಸ್ಥಾಯಿಯಾಗಿ ಉಳಿಯಿತು.

**ಸಂಗೊಳ್ಳಿರಾಯಣ್ಣ :** ಬ್ರಿಟಿಷರ ಸಾಮ್ರಾಜ್ಯ ಷಾಹಿ ವಿರುದ್ಧ ಬಂಡೆದ್ದ ಇನ್ನೊಬ್ಬ ಅಪ್ರತಿಮ ಸಂಗೊಳ್ಳಿ ರಾಯಣ್ಣ. ಕಿತ್ತೂರು ಸಂಸ್ಥಾನವನ್ನು ಬ್ರಿಟಿಷರ ಬಿಗಿಮುಷ್ಠಿಯಿಂದ ಬಿಡಿಸಬೇಕೆಂಬ ಉದ್ದೇಶದಿಂದ ಗೆರಿಲ್ಲಾ ತಂತ್ರದಲ್ಲಿ ಬಿಳಿಯರಿಗೆ ಬಿಸಿ ಮುಟ್ಟಿಸಿದ ರಾಯಣ್ಣ. ಸಾಮಾನ್ಯ ಸೈನಿಕನಾಗಿದ್ದ ರಾಯಣ್ಣ ತನ್ನ ಸ್ನೇಹಿತರ ಪಡೆಕಟ್ಟಿ ಸರ್ಕಾರಿ ಖಜಾನೆ ಲೂಟಿ, ಟೆಲಿಫೋನ್ ಸಂಪರ್ಕನಾಶ, ಕಚೇರಿಗಳ ಮೇಲೆ ಹಲ್ಲೆ ಹೀಗೆ ಗೆರಿಲ್ಲಾ ತಂತ್ರದಿಂದ ರಾಯಣ್ಣನ ತಂಡ ಚಿಕ್ಕದಾಗಿದ್ದರೂ ಅವರ ಕೃತ್ಯಗಳು ಪರಿಣಾಮಕಾರಿಯಾಗಿದ್ದರೂ ಅವರ ಕೃತ್ಯಗಳು ಪರಿಣಾಮ ನಿರತನಾಗಿದ್ದ ರಾಯಣ್ಣನನ್ನು ಹಿಡಿಯಲು ಅಸಾಧ್ಯವೆನ್ನಿಸಿದಾಗ ಬ್ರಿಟಿಷರು ತಮ್ಮ ಮಾಮೂಲಿ ತಂತ್ರವನ್ನು ಹಿಡಿದು ಗಲ್ಲಿಗೇರಿಸಿದರು.

**ಕುಟಿಲ ನೀತಿ :** ಭಾರತದ ಸಾಮಂತರನ್ನು ಸೋಲಿಸಲು ಸ್ಥಳೀಯ ಪಾಳೆಯರನ್ನೂ, ರಾಜರನ್ನೂ ಕುಟಿಲತೆಯಿಂದ ಉಪಯೋಗಿಸುತ್ತಿದ್ದ ಬಿಳಿಯರು ನಂತರ ತಮಗೆ ನೆರವಾದರೂ ನೆಮ್ಮದಿಯಿಂದ ಇರಲು ಬಿಡುತ್ತಿರಲಿಲ್ಲ. ಟಿಪ್ಪು ಸುಲ್ತಾನನ್ನು ಸೋಲಿಸಲು ನೆರವಾಗಿದ್ದ ಕೊಡಗಿನ ದೊರೆ ವೀರರಾಜೇಂದ್ರನ ಕುಟುಂಬದವರು ಹೆಚ್ಚಿನ ಕಾಲ ಆಳ್ವಿಕೆಯಲ್ಲಿರಲು ಆಂಗ್ಲರು ಅವಕಾಶ ನೀಡಲಿಲ್ಲ. ಬ್ರಿಟಿಷರಿಗೆ ಇಂತಹ ಸರ್ವೆ ಸಾಮಾನ್ಯವಾಗಿತ್ತು. ಗಂಡು ಮಕ್ಕಳನ್ನು ಹೊರತುಪಡಿಸಿ ಬೇರೆಯವರಿಗೆ ಆಳ್ವಿಕೆ ನಡೆಸಲು ಹಕ್ಕಿಲ್ಲವೆಂಬ ಬ್ರಿಟಿಷರ ಕಾನೂನು ದೇಶದಾದ್ಯಂತ ಹಲವಾರು ರಾಜಮನೆತನಗಳು ಆಡಳಿತವನ್ನು ಬ್ರಿಟಿಷರಿಗೆ ಒಪ್ಪಿಸಲು ಸುಲಭವಾಯಿತು.

ಆಂಗ್ಲರ ಆಕ್ರಮಣದ ನಂತರವೂ ಅನೇಕ ಪ್ರಾಂತ್ಯಗಳಲ್ಲಿ ಬಿಡುಗಡೆಗಾಗಿ ಹೋರಾಟಗಳು ನಡೆದವು. ಕೆಲವೆಡೆ ರಾಜಮನೆತನದವರು ಇಂತಹ ಪ್ರಯತ್ನಗಳಿಗೆ ಕೈಹಾಕಿದರೆ ಇನ್ನೂ ಕೆಲವೆಡೆ ಸ್ವಾಮಿನಿಷ್ಠರು ತಮ್ಮ ಧಣಿಗಳ ಪರವಾಗಿ ದನಿ ಎತ್ತಿದರು. ಕಿತ್ತೂರಿನಲ್ಲಿ ರಾಮಣ್ಣ ಪ್ರತಿರೋಧ ಮಾಡಿದರೆ ಕೊಡಗಿನಲ್ಲಿ ಕಲ್ಯಾಣ ಸ್ವಾಮಿ, ಪುಟ್ಟಬಸಪ್ಪ, ಬಾದಾಮಿಯಲ್ಲಿ ನಿಂಬಾಜಿ ಮೊದಲಾದ ದೇಶವೀರರು ಸಂಘರ್ಷ ನಡೆಸಿದರು.

**ಅನುಕೂಲ ಸಿಂಧುಕಾನೂನು :** ಭಾರತವನ್ನು ಪೂರ್ಣವಾಗಿ ತಮ್ಮ ಆಳ್ವಿಕೆಗೆ ತೆಗೆದುಕೊಳ್ಳಲು ಬ್ರಿಟಿಷ್ ಸರ್ಕಾರ ದೃಢ ನಿಶ್ಚಯ ಮಾಡಿತ್ತು. ಅದರ ಗುರಿ ಸಾಧನೆಗೆ ಹತ್ತಾರು ಅನುಕೂಲ ಸಿಂಧು ಕಾನೂನುಗಳನ್ನು ಜಾರಿಗೆ ತಂದಿತು. ಅಂತಹ ಕಾನೂನುಗಳಲ್ಲಿ ದತ್ತು ಪುತ್ರರಿಗೆ ಹಕ್ಕಿಲ್ಲವೆಂಬುದು ಒಂದಾದರೆ ಪ್ರಜೆಗಳ್ಯಾರು ಆಯುಧಗಳನ್ನು ಇಟ್ಟುಕೊಳ್ಳಬಾರದೆಂಬುದು ಇನ್ನೊಂದು. ನಮ್ಮಲ್ಲಿ ಅನೇಕರು ಆತ್ಮರಕ್ಷೆಗಾಗಿ ಆಯುಧವನ್ನು ಸದಾ ತಮ್ಮಲ್ಲಿಟ್ಟುಕೊಳ್ಳುವುದು ಅನೂಚಾನವಾಗಿ ನಡೆದುಬಂದ ರೂಢಿ. ಆದರೆ ಬಿಳಿಯರ ಪ್ರಕಾರ ಇದು ನಿಷಿದ್ಧ.

**ಹಲಗಲಿಬೇಡರು :** ಇಂತಹ ಕಾನೂನಿ ವಿರುದ್ಧ ಬಂಡೆದ್ದವರು ಹಲಗಲಿಯ ಬೇಡರು. ತಮ್ಮ ಸ್ವಾಭಿಮಾನದ ಸಂಕೇತವಾಗಿರುವ ಆಯುಧವನ್ನು ಸರ್ಕಾರಕ್ಕೆ ನೀಡಲು ಬೇಡರು ಸಮ್ಮತಿಸಲಿಲ್ಲ. ಹಲಗಲಿಯ ಬೇಡರನ್ನು ಅವರ ಮನೆಗಳಿಗೆ ಅಗ್ನಿಸ್ಪರ್ಶ ಮಾಡಿ ಬ್ರಿಟಿಷರು ಮಣಿಸಿದರು. ನೂರಾರು ಮಂದಿ ಬೆಂಕಿಯ ಜ್ವಾಲೆಗಳಲ್ಲಿ ಪ್ರಾಣತ್ಯಾಗ ಮಾಡಿದರೆ ಉಳಿದವರನ್ನು ಗಲ್ಲಿಗೇರಿಸಲಾಯಿತು.

ಸ್ವಾತಂತ್ರ್ಯದ ಸ್ವಾಭಿಮಾನದ ಪ್ರತೀಕವಾಗಿರುವ ಆಯುಧಗಳಿಗಾಗಿ ಹಲಗಲಿಯ ಬೇಡರು ಹುತಾತ್ಮರಾದರು. ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೊತ್ತಿಕೊಂಡ ಕಿಡಿಗಳು ಆಗಾಗ ಕಿಡಿಕಾರುತ್ತಲೇ ಇದ್ದವು. ಇವು ಕೆಲಕಾಲ ಪ್ರಜ್ವಲಿಸಿ ಬ್ರಿಟಿಷರಿಗೆ ಬಿಸಿ ಮುಟ್ಟಿಸಿದ್ದವು. ನಂದಿಸಿದರೂ ಮತ್ತೆ ಹೊತ್ತಿಕೊಳ್ಳುತ್ತಿದ್ದ ಕಿಡಿಗಳು ಸ್ವಾತಂತ್ರ್ಯದವರೆಗೂ ಆಗಾಗ ಕಾಣಿಸಿಕೊಳ್ಳುತ್ತಲೇ ಇದ್ದುವು.

ಅಂತಹ ಕಿಡಿಗಳಲ್ಲಿ ಸುರಪುರದ ವೆಂಕಟಪ್ಪನಾಯಕ, ನರಗುಂದದ ಬಾಬಾ ಸಾಹೇಬ. ಮುಂಡರಗಿ ಭೀಮರಾಯರೂ ಪ್ರಮುಖರು. ■






# ಮಾವಿನಗುಂಡಿಯ ಮಹಿಳಾ ಸತ್ಯಾಗ್ರಹಿಗಳು

ವೀರಣ್ಣ ಚೌಳೂರ್

**ಸ್ವಾತಂತ್ರ್ಯದ ಹೋರಾಟದ ಕಾವು ಒಳಗೊಳಗೆ ಕುದಿಯುತ್ತಿದ್ದು ಮಾವಿನ ಗುಂಡಿಯ ಘಟನೆಯು, ಜನಮನದಲ್ಲಿನ ದೇಶ ಪ್ರೇಮದ ಲಾವಾರಸವು ಚಿಮ್ಮಲು ಇದೊಂದು ರಹದಾರಿ. ಕಲ್ಹಾಳದ ತಿಮ್ಮಣ್ಣ ಭಟ್ಟರಿಗಾದ ಅನ್ಯಾಯವನ್ನು ಕಂಡ ಮಹಿಳೆಯರು ಬ್ರಿಟೀಷ್ ಸರ್ಕಾರದ ವಿರುದ್ಧ ಗುಡುಗಲು ಪ್ರಾರಂಭಿಸಿದರು. ತಿಮ್ಮಣ್ಣ ಭಟ್ಟರ ಪತ್ನಿ ಕಲ್ಹಾಳದ ಲಕ್ಷ್ಮಮ್ಮನವರ ಮುಂದಾಳತ್ವದಲ್ಲಿ ತ್ಯಾಗಲಿಯ ಭುವನೇಶ್ವರಮ್ಮ, ಕುಳಿಬೈಲು ಗಣಪಮ್ಮ, ಭಾಗೀರಥಮ್ಮ, ಹೊಸಕೊಪ್ಪದ ಸೀತಮ್ಮ ಮತ್ತು ದೇವಮ್ಮ, ಹಂಜಿಬೈಲು ದುಗ್ಗಮ್ಮ ಇವರುಗಳು ಅನೇಕ ಸ್ತ್ರೀಯರನ್ನು ಒಟ್ಟು ಗೂಡಿಸಿಕೊಂಡು ಕಚ್ಚೆಹಾಕಿ ಸೊಂಟಕ್ಕೆ ಸೆರಗು ಸಿಕ್ಕಿಸಿಕೊಂಡರು.**

ಗಾಂಧಿ ಎನ್ನುವ ಧೀಮಂತ ಶಕ್ತಿ ಭರತ ಖಂಡದ ಅಬಾಲವೃದ್ಧರೆಲ್ಲರಲ್ಲಿಯೂ ವಿದ್ಯುತ್‌ನಂತೆ ಸಂಚರಿಸಿ ಸ್ವಾತಂತ್ರ್ಯ ಹೋರಾಟದ ಪೂರ್ವಸಿದ್ಧತೆಗೆ ಪ್ರೇರಕ-ಕಾರಕ ಶಕ್ತಿಯಾಯಿತು. ಇದರ ಪರಿಣಾಮ ನಾಡಿನಾದ್ಯಂತ ಎಲ್ಲೆಂದರಲ್ಲಿ ಹರತಾಳಗಳು, ಮುಷ್ಕರಗಳು, ಧರಣಿ ಸತ್ಯಾಗ್ರಹಗಳು ಭುಗಿಲೆದ್ದು ದೇಶವ್ಯಾಪಿ ಪ್ರಾರಂಭವಾಗಿದ್ದವು. 'ಗಾಂಧಿ" ಎನ್ನುವ ಮಂತ್ರಕ್ಕೆ ಇಷ್ಟು ಪ್ರಮಾಣದ ಶಕ್ತಿ ಇರುತ್ತದೆ ಎಂಬುದನ್ನು ಬ್ರಿಟೀಷ್ ಸರ್ಕಾರ ಊಹಿಸರಲಿಲ್ಲ.

1932 ರಲ್ಲಿ ಪ್ರಾರಂಭವಾದ ಕರ ನಿರಾಕರಣೆಯ ಚಳುವಳಿ ಬ್ರಿಟೀಷರ ಆಡಳಿತ ಯಂತ್ರಕ್ಕೆ ಬಿತ್ತು ಬಹು ದೊಡ್ಡ ಕೊಡಲಿ ಪೆಟ್ಟು. ಇದರಿಂದ ಆಲದ ಮರವೆಂಬ ಬ್ರಿಟೀಷ್ ಸರ್ಕಾರದ ಬೇರುಗಳು ಅಲುಗಾಡಿ ಕಂಪಿಸಿದವು. ಸ್ವಾತಂತ್ರ್ಯದ ಹೋರಾಟದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಹುತಾತ್ಮರಾದವರು ಅಸಂಖ್ಯ. ಭಾರತೀಯರಲ್ಲಿ 'ಗಾಂಧಿ' ಎನ್ನುವ ಅಸ್ತ್ರ ಸಂಮೋಹನ ಶಕ್ತಿಯಾಗಿ ಪ್ರವಹಿಸಿ, ಸಾಮಾನ್ಯ ಜನ ದುಡಿಮೆ, ಹಬ್ಬ-ಹರಿದಿನ, ಜಾತ್ರೆ, ಹುಣ್ಣಿಮೆ ಎಲ್ಲವನ್ನು ಬದಿಗೊತ್ತಿ ಗಾಂಧಿಯ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು ಅಲ್ಪಸ್ವಲ್ಪ ಜನ ಬರಲಿಲ್ಲ. ಜನಸ್ತೋಮವೆ ಸಾಗರದಂತೆ ಹರಿದು ಬಂದಿತ್ತು ಜಾತಿ, ಧರ್ಮ, ಲಿಂಗಭೇದಗಳಿಲ್ಲದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಮಾವಿನಗುಂಡಿ ಎನ್ನುವ ಚಿಕ್ಕ ಊರಿನಲ್ಲಿ ಮಹಿಳೆಯರು ಕೈ ಗೊಂಡ 'ಕರ' ನಿರಾಕರಣೆಯ ಸತ್ಯಾಗ್ರಹ ದೇಶವ್ಯಾಪಿ ಪ್ರಸಿದ್ಧಿ ಪಡೆಯಿತು. ಮಾವಿನಗುಂಡಿಯ ಸುತ್ತಮುತ್ತಲ ಗ್ರಾಮೀಣರು, ಕೃಷಿಕರು ಕರನಿರಾಕರಣೆಯ ಚಳುವಳಿಯನ್ನು ಪ್ರಾರಂಭಿಸಿದಾಗ  ಆಡಳಿತ ವರ್ಗದ ನೌಕರರು, ಜನಸಾಮಾನ್ಯರ ಆಸ್ತಿ – ಪಾಸ್ತಿಯನ್ನು ಜಪ್ತಿ ಮಾಡಿ, ಸಾಕು ಪ್ರಾಣಿಗಳಾದ ಎಮ್ಮೆ, ಹಸುಕರುಗಳನ್ನು ಹಿಡಿದು ಎಳೆದೊಯ್ದರು. ಹೀಗೆ ಪ್ರಾರಂಭವಾದ ಘಟನೆ ದೊಡ್ಡ ತಿರುವು ಪಡೆದುಕೊಂಡಿತು.

ಕಲ್ಗಾಳದ ತಿಮ್ಮಣ್ಣ ಭಟ್ಟರು 'ಕರ' ವನ್ನು ಸರ್ಕಾರಕ್ಕೆ ಕೊಡುವುದಿಲ್ಲವೆಂದು ನಿರಾಕರಿಸಿದರು. ಕುಪಿತರಾದ ಅಧಿಕಾರಿಗಳು ಭಟ್ಟರ ಮನೆಯ ಮುಂದಿನ ಎಮ್ಮೆಗಳನ್ನು ಹರಾಜಿಗಿಟ್ಟರು. ಕಾಮಗಾರಿ ಇಲಾಖೆಯ ಒಬ್ಬ ಗುಮಾಸ್ತ ಮತ್ತು ಪೋಲೀಸ್ ಹವಲ್ದಾರ (ಸಬ್ ಇನ್ಸ್‌ಪೆಕ್ಟರ್) ಇವರುಗಳು ಹರಾಜಿನಲ್ಲಿ ಎಮ್ಮೆಗಳನ್ನು ಕೊಂಡುಕೊಂಡರು.

ಸ್ವಾತಂತ್ರ್ಯದ ಹೋರಾಟದ ಕಾವು ಒಳಗೊಳಗೆ ಕುದಿಯುತ್ತಿದ್ದು ಮಾವಿನ ಗುಂಡಿಯ ಘಟನೆಯು, ಜನಮನದಲ್ಲಿನ ದೇಶ ಪ್ರೇಮದ ಲಾವಾರಸವು ಚಿಮ್ಮಲು ಇದೊಂದು ರಹದಾರಿ. ಕಲ್ಗಾಳದ ತಿಮ್ಮಣ್ಣ ಭಟ್ಟರಿಗಾದ ಅನ್ಯಾಯವನ್ನು ಕಂಡ ಮಹಿಳೆಯರು ಬ್ರಿಟೀಷ್ ಸರ್ಕಾರದ ವಿರುದ್ಧ ಗುಡುಗಲು ಪ್ರಾರಂಭಿಸಿದರು. ತಿಮ್ಮಣ್ಣ ಭಟ್ಟರ ಪತ್ನಿ ಕಲ್ಗಾಳದ ಲಕ್ಷ್ಮಮ್ಮನವರ ಮುಂದಾಳತ್ವದಲ್ಲಿ ತ್ಯಾಗಲಿಯ ಭುವನೇಶ್ವರಮ್ಮ, ಕುಳಿಬೈಲು ಗಣಪಮ್ಮ, ಭಾಗೀರಥಮ್ಮ, ಹೊಸಕೊಪ್ಪದ ಸೀತಮ್ಮ ಮತ್ತು ದೇವಮ್ಮ, ಹಂಜಿಬೈಲು ದುಗ್ಗಮ್ಮ ಇವರುಗಳು ಅನೇಕ ಸ್ತ್ರೀಯರನ್ನು ಒಟ್ಟು ಗೂಡಿಸಿಕೊಂಡು ಕಚ್ಚೆಹಾಕಿ ಸೊಂಟಕ್ಕೆ ಸೆರಗು ಸಿಕ್ಕಿಸಿಕೊಂಡರು.

ಮೊದಲ ಹೆಜ್ಜೆಯಾಗಿ ಎಮ್ಮೆಗಳನ್ನು ಕೊಂಡುಕೊಂಡ ನೌಕರರ ಮನೆಯ ಮುಂದೆ ಧರಣಿ ಕುಳಿತರು. ಕಾಮಗಾರಿ ಇಲಾಖೆಯ ಗುಮಾಸ್ತ ಧರಣಿ ಕುಳಿತ ಸ್ತ್ರೀಯರನ್ನು ತೇಗದ ಮರದ ಪಟ್ಟಿಯಿಂದ ಮನಸೋ ಇಚ್ಛೆ ಥಳಿಸಿದನು. ಆ ಏಟುಗಳಿಗೆ ಹೆಣ್ಣುಮಕ್ಕಳು ಜಗ್ಗಲಿಲ್ಲ. ಪೋಲೀಸ್ ಹವಲ್ದಾರನು ಈ ಸ್ತ್ರೀಯರನ್ನು ಜಗುಲಿಯ ಮೇಲಕ್ಕೂ ಬಿಟ್ಟುಕೊಳ್ಳದೆ ಇದ್ದಾಗ ಸತ್ಯಾಗ್ರಹಿಗಳು ಸುರಿಯುವ ಮಳೆಯಲ್ಲಿ ರಸ್ತೆಯಲ್ಲೆ ಕೂತರು. ಇವರಿಗೆ ಒಣಗಿದ ಬಟ್ಟೆಗಳನ್ನು ಕೊಡಕೂಡದೆಂದು ಆಜ್ಞೆ ಮಾಡಿದನು. ಈ ತರಹದ ಅಮಾನವೀಯ ಘಟನೆ ಕನ್ನಡ ನಾಡಿನಲ್ಲಿ ಮತ್ತೆಲ್ಲು ನಡೆದಿಲ್ಲ. ಇದರಿಂದ ಮತ್ತಷ್ಟು ಕುಪಿತರಾದ ಸ್ತ್ರೀಯರು ಮುಷ್ಕರವನ್ನು ತೀವ್ರಗೊಳಿಸಿದರು. ಸ್ತ್ರೀಯರ ಸಂಖ್ಯೆ ಹೆಚ್ಚುತ್ತಲೆ ನಡೆಯಿತು. ಕುಪಿತನಾದ ಹವಲ್ದಾರನು ಕೆಲವರನ್ನು ಜೈಲಿಗೆ ಹಾಕಿ, ಸಿದ್ದಾಪುರದ ನ್ಯಾಯಧೀಶರ ಮುಂದೆ ಹಾಜರು ಪಡಿಸಿದನು. ಇವರಲ್ಲಿ ಭುವನೇಶ್ವರಮ್ಮ 31 ದಿನಗಳ ಕಾಲ, ಕಲ್ಗಾಳದ ಲಕ್ಷ್ಮಮ್ಮ 21 ದಿನಗಳವರೆಗೆ ಉಪವಾಸ ಮಾಡಿದ್ದರಿಂದ ಇವರ ಆರೋಗ್ಯ ತೀವ್ರವಾಗಿ ಹದಗೆಟ್ಟಿತು. ಆದ್ದರಿಂದ ನ್ಯಾಯಾಧೀಶರು ಇವರಿಬ್ಬರನ್ನು ನ್ಯಾಯಾಲಯದ ಕಲಾಪ ಮುಗಿಯುವವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು. ಆನಂತರ ಇವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಇವರಿಗೆ ನೆರವಾಗುತ್ತಿದ್ದ ಇತರ ಮಹಿಳೆಯರಿಗೆ ನಾಲ್ಕು ತಿಂಗಳ ಕಾಲ ಕಠಿಣ ಸಜೆ ವಿಧಿಸಿ ಸೆರೆಮನೆಗೆ ತಳ್ಳಲಾಯಿತು.

ಸ್ತ್ರೀಯರನ್ನು ಸೆರೆಮನೆಗೆ ಹಾಕಿದ್ದು, ಮಲೆನಾಡಿನ ಸ್ತ್ರೀಯರ ಅಂತಃಕರಣವನ್ನೇ ಕೆರಳಿಸಿತು. ಕಾರ್ಮಿಕ, ಕೃಷಿಕ, ಸ್ತ್ರೀಯರೆಲ್ಲರೂ ಸಣ್ಣ ಮಕ್ಕಳನ್ನು ಎತ್ತಿಕೊಂಡು ಬಂದು ಹಗಲಿರುಳೆನ್ನದೆ ಆಹೋ ರಾತ್ರಿ ಧರಣಿ ಕುಳಿತಾಗ ಹೋರಾಟ ಉಗ್ರ ಸ್ವರೂಪ ಪಡೆದುಕೊಂಡಿತು. ಈ ಹೆಣ್ಣು ಮಕ್ಕಳ ಹೋರಾಟದಿಂದ ಹೆದರಿದ ಹವಲ್ದಾರನು ಎಮ್ಮೆಗಳನ್ನು 'ಜಡ್ಡಿ'ಯ ಮಡಿವಾಳ ಭದ್ರದೇವ ಎಂಬುವವರಿಗೆ ಕೈ ಬದಲಿಸಿದನು. ಆಗ ಗುಂಜಾಳು ಮಹದೇವಮ್ಮನ ನೇತೃತ್ವದಲ್ಲಿ ಅನೇಕ ಮಹಿಳೆಯರು ಒಟ್ಟುಗೂಡಿ 'ಜಡ್ಡಿ'ಯ ಮಡಿವಾಳ ಭದ್ರದೇವನ ಮನೆಯ ಮುಂದೆ ಧರಣಿ ಕುಳಿತರು. ಅಧಿಕ ಸಂಖ್ಯೆಯಲ್ಲಿದ್ದ ಸ್ತ್ರೀಯರನ್ನು ಕಂಡು ಗಾಬರಿಯಾದ ಭದ್ರದೇವನು ಎಮ್ಮೆಗಳನ್ನು ಹಂಜಕ್ಕಿ ತಿಪ್ಪನಿಗೆ ಕೊಟ್ಟನು.



ಮಹಿಳೆಯರೆಲ್ಲರು ತಿಪ್ಪನ ಮನೆಯ ಮುಂದೆ ಧರಣಿ ಕುಳಿತು ಕೊಳ್ಳುತ್ತಾರಂತೆ ಎಂಬ ಸುದ್ದಿ ತಿಳಿದ ಹಂಜಕ್ಕಿ ತಿಪ್ಪ ಎಲ್ಲ ಎಮ್ಮೆಗಳನ್ನು ಸ್ತ್ರೀಯರಿಗೆ ಕೊಡಲು ಒಪ್ಪಿದನು. ಹೀಗೆ ಮಲೆನಾಡಿನ ಸ್ತ್ರೀಯರ ಕರ ನಿರಾಕರಣೆಯ ಸತ್ಯಾಗ್ರಹ ದೇಶವ್ಯಾಪಿ ಸುದ್ದಿಮಾಡಿತು. ಇದನ್ನು ಪತ್ರಿಕೆಯಲ್ಲಿ ವರದಿ ಮಾಡಲು ಮದ್ರಾಸಿನಿಂದ "ಹಿಂದೂ" ಪತ್ರಿಕೆಯ ವರದಿಗಾರರಾದ ಶ್ರೀ. ಪಾರ್ಥಸಾರಥಿಯವರು ಮಾವಿನಗುಂಡಿಗೆ ಆಗಮಿಸಿದರು. ಅವರನ್ನು ಪೋಲೀಸಿನವರು ಬಂಧಿಸಿ ಸಿದ್ದಾಪುರಕ್ಕೆ ಕರೆದೊಯ್ದರು. ಇಷ್ಟಾದರೂ ವರದಿಗಾರರು ಮಾವಿನಗುಂಡಿಯ ಮಹಿಳೆಯರ 'ಕರ' ನಿರಾಕರಣೆಯ ಸತ್ಯಾಗ್ರಹದ ವಿಸ್ತೃತ ವರದಿಯನ್ನು ಸಿದ್ದಪಡಿಸಿ ಪತ್ರಿಕೆಯಲ್ಲಿ ಪ್ರಕಟಿಸಿದರು.

ಆಗಿನ ಸಂದರ್ಭದಲ್ಲಿ ಮಾವಿನ ಗುಂಡಿಯ ಮಹಿಳೆಯರ ಕರ ನಿರಾಕರಣೆಯ ಸತ್ಯಾಗ್ರಹ ಸುತ್ತ ಮುತ್ತಲ ಹಳ್ಳಿಗರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಪೋಲೀಸಿನವರ ಲಾಠಿ ಏಟಿಗೆ ಜಗ್ಗದ, ಪ್ರಾಣಾರ್ಪಣೆಗೂ ಸಿದ್ಧರಾದ ಮಹಿಳೆಯರ ಹೋರಾಟ ಮತ್ತು ತ್ಯಾಗ ರಾಷ್ಟ್ರವ್ಯಾಪಿ ಹರಡಿ ಇತರೆ ಭಾಗದ ಚಳುವಳಿಗಾರರಿಗೆ ಸ್ಫೂರ್ತಿ ಪ್ರೇರಣೆಯಾದದ್ದು ಆಶ್ಚರ್ಯವೇನಲ್ಲ. ಮಾವಿನಗುಂಡಿಯ ಮಹಿಳಾ ಸತ್ಯಾಗ್ರಹಿಗಳ ಹೋರಾಟವನ್ನು ಜನಮನದಲ್ಲಿ ನೆಲಸಲೋಸುಗ ಸೊಲಬಕ್ಕನವರು – ಜೈಲಿನ ಎಡ ಭಾಗದಲ್ಲಿ ಸತ್ಯಾಗ್ರಹ ನಿರತ ಮಹಿಳೆಯ ಚಿತ್ರಗಳನ್ನು , ಸ್ಟೇಷನ್ನಿನ ಎದುರು ಭಾಗದಲ್ಲಿರುವ ಜೈಲಿನಲ್ಲಿ ಮಹಿಳೆಯರನ್ನು ಖೈದಿಗಳನ್ನಾಗಿ ಬಂಧಿಸಿಡಲಾಗಿದ್ದ ಚಿತ್ರಗಳನ್ನು ಮಾಡಿಸಿದ್ದಾರೆ. ಸ್ಥಳಕ್ಕೆ ಭೇಟಿ ಕೊಟ್ಟು ಈ ಚಿತ್ರಗಳನ್ನು ನೋಡಿದರೆ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಎಷ್ಟಿತ್ತು ಎಂಬುದನ್ನು ನೆನೆದರೆ ಒಂದು ಕ್ಷಣ ಮೈ 'ಝುಂ' ಎನ್ನುತ್ತದೆ.





# ಕಿತ್ತೂರ ಕಿಡಿ ಸಂಗೊಳ್ಳಿ ರಾಯಣ್ಣ

ಸುರೇಶ ಗೋವಿಂದರಾವ್ ದೇಸಾಯಿ

ಬ್ರಿಟಿಷ್ ವಸಾಹತಿನ ಸಮಯದಲ್ಲಿ ಅನೇಕ ಪಾಳೇಗಾರರು, ಚಿಕ್ಕಮಟ್ಟ ರಾಜರು, ದಳವಾಯಿಗಳು, ದೇಸಾಯರು ಈ ನಾಡಿನಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಅವರಲ್ಲಿ ಅನೇಕರು ಹುತಾತ್ಮರಾಗಿದ್ದರು. ಅವರಲ್ಲಿ ನರಗುಂದದ ಬಾಬಾಸಾಹೇಬ, ಸುರಪುರದ ವೆಂಕಟಟಪ್ಪ ನಾಯಕ, ಕಿತ್ತೂರಿನ ಸರದಾರ ಗುರುಸಿದ್ದಪ್ಪ, ಸಂಗೊಳ್ಳಿ ರಾಯಣ್ಣ, ಅವರಾದಿ ವೀರಪ್ಪ ಹೀಗೆ ಅನೇಕ ವೀರರು ಸ್ಮಾರಕಕ್ಕೆ ಕಾರಣರಾಗಿದ್ದಾರೆ. ಇವರಲ್ಲಿ ಸಂಗೊಳ್ಳಿ ರಾಯಣ್ಣ ಕಿತ್ತೂರು ನಾಡಿನ ರಕ್ಷಣೆಗಾಗಿ, ರಾಣಿ ಚನ್ನಮ್ಮನ ಬಲಗೈ ಭಂಟನಾಗಿ ರಾಜ್ಯದ ಉಳಿವಿಗಾಗಿ ಅತ್ಮಾರ್ಪಣೆ ಮಾಡಿಕೊಂಡಿದ್ದಾನೆ.

ಸಂಗೊಳ್ಳಿ ರಾಯಣ್ಣ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ 1798 ಅಗಷ್ಟ 15ರಂದು ಜನಿಸಿದನು. ತಂದೆ ಭರಮಣ್ಣ ರೋಗಣ್ಣವರ. ಈತ ಸಂಗೊಳ್ಳಿಯ ಓಲೆಕಾರನಾಗಿ ಕೆಲಸ ಮಾಡುತ್ತಿದ್ದನು. ತಾಯಿ ಕೆಂಚವ್ವ ಕೂಡ ಅಪ್ಪಟ ದೇಶಭಕ್ತೆ. ನೇಗಿನಹಾಳ ಈಕೆಯ ತವರುಮನೆ. ರೋಗಣ್ಣವರ ವಂಶ, ಶೂರ ಧೀರ ಯೋಧರ ವಂಶ, ವಿಜಯಪುರ ಆದಿಲ್‌ಶಾಹಿ ಆಡಳಿತದಲ್ಲಿ ನಡೆದ ಹೋರಾಟದಲ್ಲಿ ಇವರ ಮನೆತನದವರು ತೋರಿದ ಶೌರ್ಯ ಬಲಿದಾನಗಳಿಂದಾಗಿ ಇವರ ಎರಡು ಮನೆತನಗಳಿಗೆ ಸಂಗೊಳ್ಳಿಯ ಜಮೀನನ್ನು ಉಂಬಳಿಯಾಗಿ ನೀಡಿದ್ದರು. ಈ ಜಮೀನುಗಳು ಗ್ರಾಮದ ಕುಲಕರ್ಣಿಯ ಜಮೀನಿಗಿಂತ ಹೆಚ್ಚಾಗಿದ್ದವು. ಕಾರಣ ಕುಲಕರ್ಣಿ ರಾಯಣ್ಣನ ಬಗ್ಗೆ ಅಸೂಯೆ ಹೊಂದಿದ್ದನು. ರಾಯಣ್ಣನ ಶೌರ್ಯದ ಮುಂದೆ ಕುಲಕರ್ಣಿಯ ಆಟ ನಡೆಯದಿದ್ದಾಗ ತನ್ನ ಅಧಿಕಾರ ಬಳಸಿ ಇವನ ಜಮೀನಿನ ಮೇಲೆ ಸುಂಕ ಹೇರಿದನು. ರಾಯಣ್ಣ ಸುಂಕ ಕೊಡದೇ ಇದ್ದಾಗ ಅವನಿಲ್ಲದ ಸಮಯ ನೋಡಿ ರಾಯಣ್ಣನ ತಾಯಿ ಕೆಂಚವ್ವಳನ್ನು ಚಾವಡಿಗೆ ಕರೆಯಿಸಿ ಶಿಕ್ಷೆ ನೀಡಿದನು. ಕುಲಕರ್ಣಿ ಆಕೆಯ ಬೆನ್ನು ಮೇಲೆ ಬೀಸುವ ಕಲ್ಲು ಹೊರಿಸಿ ಬಿಸಿಲಿನಲ್ಲಿ ನಿಲ್ಲಿಸಿದ. ಇದನ್ನು ಪ್ರತಿಭಟಿಸಿದ ರಾಯಣ್ಣನ ಜಮೀನುಗಳನ್ನು ಜಪ್ತಿ ಮಾಡಲಾಯಿತು. ಇಲ್ಲಿಗೆ ಆರಂಭವಾದ ಕಿತ್ತೂರಿನ ದಂಗೆಯು 1824ರಿಂದ 1830ರ ವರೆಗೆ ಅಂದರೆ ರಾಯಣ್ಣನ ಕೊನೆಯುಸಿರಿನವರೆಗೂ ನಡೆಯಿತು.

ರಾಯಣ್ಣನಿಗೆ ಮದುವೆಯೂ ಆಗಿತ್ತು. ಹೆಂಡತಿಯ ಹೆಸರು ಮಲ್ಲವ್ವ. ಈ ದಂಪತಿಗಳಿಗೆ ಒಬ್ಬ ಹನುಮಂತನೆಂಬ ಮಗನೂ ಜನಿಸಿದ್ದನು. ಮಲ್ಲವ್ವಳೂ ಕೂಡಾ ನೇಗಿನಹಾಳದ ಹಳಬ ಲಕ್ಕಪ್ಪನ ತಂಗಿ. ಇದೇ ಲಕ್ಕಪ್ಪನು ರಾಯಣ್ಣನನ್ನು ಮೋಸದಿಂದ ಹಿಡಿದು ಕೊಡುತ್ತಾನೆ. ಇಂಥ ಕುತಂತ್ರಿ ಕುನ್ನಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ತಾಯ್ನಾಡನ್ನೇ ಬ್ರಿಟಿಷರಿಗೆ ಬಲಿ ಕೊಟ್ಟು ಕಿತ್ತೂರು ಸಂಸ್ಥಾನವನ್ನೇ ಅಂತ್ಯಗೊಳಿಸಲು ಮುಂದಾದರು. ಬ್ರಿಟಿಷರು ಹೇಳುವಂತೆ ಅವನು ಬಂಡುಕೋರ ಆಗಿರಲಿಲ್ಲ. ಅವನೊಬ್ಬ ಅಪ್ಪಟ ದೇಶಾಭಿಮಾನಿ; ಸ್ವಾತಂತ್ರ್ಯ ಯೋಧನಾಗಿದ್ದ. "ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ" ಎಂಬ ತತ್ವವನ್ನು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದನು.

1824ರಲ್ಲಿ ಕಿತ್ತೂರು ಸಂಸ್ಥಾನದ ಪತನವಾಯಿತು. ಆಗ ರಾಣಿ ಚನ್ನಮ್ಮ ವೀರಮ್ಮ ಜಾನಕಿಬಾಯಿ ಅವರನ್ನೆಲ್ಲ ಬಂಧಿಸಲಾಯಿತು. ಅವರ ಜೊತೆ ರಾಯಣ್ಣನೂ ಬಂಧಿತನಾಗಿದ್ದನು. ಆದರೆ ಇವನನ್ನು ಬ್ರಿಟಿಷರು ಕ್ಷಮಿಸಿದ್ದರು. ಇವನು ತನ್ನ ಹಳ್ಳಿಗೆ ಹೋಗಿ ವಾಲಿಕಾರನ ಕೆಲಸವನ್ನು ಮುಂದುವರೆಸಿದನು. ಆದರೆ ಆಂಗ್ಲರ ಗುಲಾಮನಾದ ಕುಲಕರ್ಣಿ ತನ್ನ ಅಟ್ಟಹಾಸವನ್ನು ಮೆರೆಯತೊಡಗಿದನು. ಅದು ರಾಯಣ್ಣನಿಗೆ ಹಿಡಿಸಲಿಲ್ಲ. ಜನತೆಯ ಗೋಳನ್ನು ಕಂಡು ರಾಯಣ್ಣನ ಮನಸ್ಸು ರೋಸಿ ಹೋಯಿತು. ಜನತೆಯನ್ನು ಕಲೆ ಹಾಕಿದನು. ಆಂಗ್ಲರ ಆಡಳಿತದಲ್ಲಿ ಅಡ್ಡಿ ಆತಂಕಗಳನ್ನು ತಂದೊಡ್ಡಲು ಆರಂಭಿಸಿದನು. ಹೇಗಾದರೂ ಮಾಡಿ ಕಿತ್ತೂರು ಸಂಸ್ಥಾನವನ್ನು ಪುನಃ ಸ್ಥಾಪಿಸುವದೇ ಅವನ ಗುರಿಯಾಗಿತ್ತು. ಅದಕ್ಕಾಗಿ ಅನೇಕ ಕಷ್ಟ–ನಷ್ಟಗಳನ್ನು ಅನುಭವಿಸಬೇಕಾಯಿತು. ಇದೇ ಸಮಯದಲ್ಲಿ ರಾಣಿ ಚನ್ನಮ್ಮನ ದತ್ತು ಪುತ್ರ ಶಿವಲಿಂಗ ಸರ್ಜನ ರಕ್ಷಣೆಯ ಹೊಣೆ ಹೊತ್ತು ಕೊಳ್ಳಬೇಕಾಯಿತು. ಬ್ರಿಟಿಷರ ವಿರುದ್ಧ ಮತ್ತೊಂದು ಸಮರ ಯೋಜನೆ ರೂಪಿಸತೊಡಗಿದನು. ರಾಣಿ ಚನ್ನಮ್ಮಳನ್ನು ಮತ್ತೆ ಕಿತ್ತೂರು ನಾಡಿನ ಪಟ್ಟದರಸಿಯನ್ನಾಗಿ ನೋಡುವುದೇ ಅವನ ಹೆಬ್ಬಯಕೆಯಾಯಿತು. ಆದ್ದರಿಂದ ಚನ್ನಮ್ಮನ ಸ್ಮರಣೆಯಲ್ಲಿ ಶಿವಲಿಂಗ ಸರ್ಜನನ್ನು ತಮ್ಮ ದೊರೆಯೆಂದು ಪಣ ತೊಟ್ಟು ಅವನ ಹೆಸರಿನಲ್ಲಿ ಕಾರ್ಯಾಚರಣೆಗಾಗಿ ನೂರಾರು ಹಳ್ಳಿಗರ ಬೆಂಬಲ ಪಡೆದನು.

ಕಿತ್ತೂರು ನಾಡು ಕಟ್ಟಲು ಹಲವಾರು ಯುವಶಕ್ತಿಗಳು ಬೆಂಬಲಿಸಿದರು. ಅದರಲ್ಲಿ ಬಿಚ್ಚುಗತ್ತಿ ಚನ್ನಬಸಪ್ಪ, ದಳವಾಯಿ ಗುರುಸಿದ್ದಪ್ಪ, ಗುರಿಕಾರ ಬಾಳಪ್ಪ, ಗಜವೀರ, ವಡ್ಡರ ಯಲ್ಲಪ್ಪ, ಅಮಟೂರು ಬಾಳಪ್ಪ, ಸರದಾರ ಗುರುಸಿದ್ದಪ್ಪ, ಮಂಡಗತ್ತಿ ಚನ್ನಬಸಪ್ಪ, ಬಸ್ತವಾಡ ಬಾಳಾ ನಾಯಕ, ಯಲ್ಲಪ್ಪ ನಾಯಕ, ಬೆಳವಡಿ ರುದ್ರ ನಾಯಕ, ದೇಗಾಂವಿ ಭೀಮನಾಯಕ, ಸುತಗಟ್ಟಿ ಅಪ್ಪೋಜಿ, ಇನ್ನೂ ಹಲವಾರು ಸಂಗಡಿಗರೆಲ್ಲ ಸೇರಿ ಗೆರಿಲ್ಲಾ ಯುದ್ಧ ತಂತ್ರಗಳಿಂದ ಆಂಗ್ಲರ ವಿರುದ್ಧ ಕಾರ್ಯಾಚರಣೆ ಆರಂಭಿಸಿದರು. ಸರ್ಕಾರಿ ಕಛೇರಿಯ ಮೇಲೆ ದಾಳಿ ಮಾಡಿ ಅಲ್ಲಿಯ ಕಾಗದ ಪತ್ರಗಳನ್ನು ನಾಶ ಮಾಡುವುದು. ತಿಜೋರಿಗಳಲ್ಲಿಯ ಹಣ ಲೂಟಿ ಮಾಡುವುದು ಇವು ಅವರ ನಿತ್ಯದ ಕಾಯಕಗಳಾದವು. ಕಿತ್ತೂರು ಸಂಸ್ಥಾನದ ಪ್ರತಿ ಮೂಲೆ ಮೂಲೆಯಲ್ಲಿ ಸಂಗೊಳ್ಳಿ ರಾಯಣ್ಣನ ಹೆಸರು ಧ್ವನಿಸಿತು. ಆಂಗ್ಲರ ಬಲದ ರಹಸ್ಯವನ್ನರಿತ ರಾಯಣ್ಣ ಕಂಪನಿ ಸರ್ಕಾರವನ್ನು ನಿತ್ಯ ಬಗ್ಗು ಬಡಿಯುತ್ತಾ, ಭಯದಲ್ಲಿಟ್ಟು ಹಂಡಿಬಡಗನಾಥ ಗುಡ್ಡದಲ್ಲಿ ಅಡಗಿಕೊಂಡು ಯುದ್ಧ ತಂತ್ರವನ್ನು ಹೆಣೆದು ಸೇನೆ ಸಜ್ಜುಗೊಳಿಸಿದನು. ಆಂಗ್ಲರಿಗೆ ಸುದ್ದಿ ತಿಳಿದು ದಾಳಿ ಮಾಡಿದರು. ಹಂಡಿಬಡಗನಾಥದಲ್ಲಿ ನಡೆದ ಯುದ್ಧದಲ್ಲಿ ಆಂಗ್ಲರು ಸೋತು ಸುಣ್ಣವಾದರು. ಹೀಗೆ ರಾಯಣ್ಣನ ಸೈನ್ಯಬಲ ಹಾಗೂ ಜಂಘಾಬಲ ಎರಡೂ ಹೆಚ್ಚಿತು. 1830ರ ವೇಳೆಗೆ ಸೈನ್ಯ 2000 ಯೊಧರನ್ನೊಳಗೊಂಡಿತು. ಖಜಾನೆಯನ್ನು ಲೂಟಿ ಮಾಡುತ್ತಾ ಆಂಗ್ಲರ ರುಂಡ ಚೆಂಡಾಡುತ್ತಾ ಅವರ ಮನೆಗೆ ಬೆಂಕಿ ಹಚ್ಚುತ್ತಾ ಬ್ರಿಟಿಷರಿಗೆ ಸಿಂಹಸ್ವಪ್ನನಾದನು.





1830 ಜನೆವರಿ 05ರಂದು ಬೀಡಿಯ ತಹಶೀಲ್ದಾರ್ ಕಛೇರಿಯನ್ನು ಸುಟ್ಟು ಖಜಾನೆಯಲ್ಲಿಯ ಎರಡು ಸಾವಿರ ರೂಪಾಯಿಗಳನ್ನು ಲೂಟಿ ಮಾಡಿದನು. ನಂತರ ಜನವರಿ 09ರಂದು ಖಾನಾಪೂರ ಪಟ್ಟಣವನ್ನು ಲೂಟಿ ಮಾಡಿದ ನಂತರ ರಾಯಣ್ಣ ನಂದಗಡಕ್ಕೆ ಬಂದಾಗ ಅಲ್ಲಿನ ನಾಡಪ್ರೇಮಿಯೊಬ್ಬ ಸಾವಿರ ರೂಪಾಯಿ ದೇಣಿಗೆಯಾಗಿ ನೀಡಿದನು. ಹಾಗೆಯೇ ಮುಂದೆ ಇಟಗಿಗೆ ಬಂದಾಗ ಅಲ್ಲಿನ ರೈತರೆಲ್ಲ ಸೇರಿ ಐದುಸಾವಿರ ರೂಪಾಯಿಗಳನ್ನು ಕಾಣಿಕೆ ಕೊಟ್ಟರು. ಅದೇ 12ನೇ ತಾರೀಖು ರಾಯಣ್ಣನು ಸಂಗಡಿಗರೊಂದಿಗೆ ಸಂಪಗಾವಿ ತಹಶೀಲ್ದಾರ ಕಛೇರಿಗೆ ಕೊಳ್ಳಿ ಇ ಟ್ಟು ಸುಟ್ಟು ಬೂದಿ ಮಾಡಿದನು. ಜನವರಿ 14ರಂದು ಸಂಗೊಳ್ಳಿಯ ಮೇಲೆ ದಾಳಿ ಮಾಡಿ ಬ್ರಿಟಿಷರ ಮಾಹಿತಿ ರವಾನೆ ಮಾಡುತ್ತಿದ್ದ ಅಂಚೆ ಸಿಬ್ಬಂದಿಯನ್ನು ಶಿಕ್ಷಿಸಿದನು.

ಇತ್ತ ಆಂಗ್ಲರ ಸೈನ್ಯವೊಂದು ಕಿತ್ತೂರಿಗೆ ಬಂದಿರುವದನ್ನು ತಿಳಿದು ರಾಯಣ್ಣ ಹಳಿಯಾಳ ಖಜಾನೆಗೆ ದಾಳಿ ಇತ್ತನು. ಆದರೆ ಅದು ವಿಫಲವಾಯಿತು. ಈ ವೇಳೆ ರಾಯಣ್ಣನ ಸಂಬಂಧಿಯು ಸೇರಿದಂತೆ ಇಬ್ಬರು ಯೋಧರು ಹುತಾತ್ಮರಾದರು. ರಾಯಣ್ಣನ ಕಾಲಿಗೂ ಗುಂಡು ತಗುಲಿತು. ಅದನ್ನು ಲೆಕ್ಕಿಸದೆ ಪರಾರಿಯಾದರು. ಇವರ ಉಪಟಳದಿಂದ ಕಂಗೆಟ್ಟಿದ್ದ ಆಂಗ್ಲರ ಸೈನ್ಯವು ಹೇಗಾದರೂ ಮಾಡಿ ರಾಯಣ್ಣನನ್ನು ಮುಗಿಸಿಬಿಡಬೇಕೆಂದು ಸಂಪಗಾವ, ಸುತಗಟ್ಟಿ, ದೇಶನೂರ ಗ್ರಾಮಗಳನ್ನು ಸುತ್ತುವರಿದು ರಾಯಣ್ಣ ಪಾರಾಗಿ ಹೋಗದಂತೆ ಹೊಂಚು ಹಾಕಿದರು. ಆದರೆ ಅವರ ಯತ್ನ ಸಫಲವಾಗಲಿಲ್ಲ. ನಂತರ ಕಿತ್ತೂರ ದಾಳಿ ನಡೆಯಿತು. 1831ರ ಫೆಬ್ರವರಿ 8ರಂದು ನಡೆದ ಕದನದಲ್ಲಿ ರಾಯಣ್ಣನ 78 ಸೈನಿಕರು ಹುತಾತ್ಮರಾದರೆ, 85 ಜನ ಸೆರೆ ಸಿಕ್ಕರು. 36 ಜನ ಗಾಯಗೊಂಡರು. ರಾಯಣ್ಣ ಆಂಗ್ಲರ ಕೈಗೆ ಸಿಗಲಿಲ್ಲ. ಕಂಪನಿ ಸರಕಾರ ರಾಯಣ್ಣನನ್ನು ಮಟ್ಟ ಹಾಕಲು ಕುತಂತ್ರ ಯೋಚನೆಯನ್ನು ಮಾಡಿತು. ರಾಯಣ್ಣನನ್ನು ಹಿಡಿದು ಕೊಟ್ಟವರಿಗೆ ಭಾರೀ ಬಹುಮಾನವೆಂದು ಸಾರಿತು. ಕಂಪನಿಯ ಕೆಲ ಪಟ್ಟ ಭದ್ರ ಹಿತಾಸಕ್ತಿಗಳು ಸಂಗೊಳ್ಳಿ ರಾಯಣ್ಣನನ್ನು ಹಿಡಿಯಲು ಉತ್ಸುಕರಾದರು.

ಕಾರ್ಯಾಚರಣೆಯೊಂದರ ನಂತರ ರಾಯಣ್ಣನು ಕಾಡಿನ ಮಧ್ಯದಲ್ಲಿ ಮುಗಟಖಾನ್ ಹುಬ್ಬಳ್ಳಿ ಹತ್ತಿರ ಹರಿಯುತ್ತಿದ್ದ ನದಿಯಲ್ಲಿ ತನ್ನ ರಕ್ತಸಿಕ್ತವಾದ ಖಡ್ಗವನ್ನು ತೊಳೆದು ಜಳಕ ಮಾಡಲು ತಯಾರಾದನು. ಆಗ ಅವನ ಜೊತೆ ಇದ್ದ ಗೌಡರ ಹಳಬ ನೇಗಿನಹಾಳದ ಲಕ್ಕ್ಯಾ ಮಾತ್ರ ಪೂರ್ವ ನಿಯೋಜನೆಯಂತೆ ಅಲ್ಲಿ ರಾಯಣ್ಣನ ಆಪ್ತರಾರೂ ಬರದಂತೆ ಮಾಡಲಾಗಿತ್ತು. ರಾಯಣ್ಣ ತನ್ನ ಕತ್ತಿಯನ್ನು ಬಾಯಲ್ಲಿ ಹಿಡಿದುಕೊಂಡು ಈಜುವುದನ್ನು ನೋಡಿ ಲಕ್ಕ್ಯಾ ರಾಯಣ್ಣನ ಖಡ್ಗವನ್ನು ಉಪಾಯದಿಂದ ತನ್ನ ಕಡೆ ಪಡೆದುಕೊಂಡು ಆತ ನಿರಾಯುಧನಾಗುವಂತೆ ಮಾಡಿಬಿಟ್ಟ. ರಾಯಣ್ಣ ನೀರಲ್ಲಿ ಈಜುತ್ತಾ ಮುಂದೆ ಸಾಗಿದಾಗ ಮೊದಲೇ ನೀರಿನಲ್ಲಿ ಅವಿತುಕೊಂಡಿದ್ದ ಲಿಂಗನಗೌಡನ ಅನುಯಾಯಿಗಳು ಒಮ್ಮೆಲೆ ರಾಯಣ್ಣನ ಮೇಲೆ ಮುಗಿ ಬಿದ್ದರು. ಆಗ ಲಕ್ಕ್ಯಾ–ರಾಯಣ್ಣ ರಾಯಣ್ಣ ಲಿಂಗನಗೌಡನ ಕಡೆಯವರು ನಿನ್ನನ್ನು ಕೊಲ್ಲುತ್ತಾರೆ, ತಪ್ಪಿಸಿಕೊಂಡು ಓಡು ಓಡು ಅಂತಾ ರಾಯಣ್ಣನ ಕತ್ತಿಯೊಂದಿಗೆ ಪರಾರಿಯಾದನು. ರಾಯಣ್ಣ– "ಏ! ಲಕ್ಕ್ಯಾ ನನ್ನ ಕತ್ತಿ ಕೊಡು" ಎಂದು ಕೂಗಿದರೂ ಆತ ಕೇಳಿಸದಂತೆ ತಿರುಗಿ ನೋಡದೇ ಪಲಾಯನ ಮಾಡಿದನು. ರಾಯಣ್ಣ ನಿರಾಯುಧನಾದರೂ




ವಂಚಕರೊಂದಿಗೆ ದಿಟ್ಟತನದಿಂದ ಒಬ್ಬಂಟಿಯಾಗಿ ಹೋರಾಡಿದನು. ಆದರೆ ಅದು ನಿರರ್ಥಕವಾಯಿತು. ಕೂಡಲೇ ಲಿಂಗನಗೌಡ ಮತ್ತಷ್ಟು ಜನರೊಂದಿಗೆ ಅಲ್ಲಿಗೆ ಬಂದು ಬಲೆ ಹಾಕಿ ರಾಯಣ್ಣನನ್ನು ಸೆರೆ ಹಿಡಿದರು. ಈ ಘಟನೆ ನಡೆದದ್ದು 1830ನೇ ಎಪ್ರಿಲ್ 8ರಂದು. ಬಂಧಿಸಿದ ರಾಯಣ್ಣನನ್ನು ಧಾರವಾಡಕ್ಕೆ ಒಯ್ದು ಜೈಲಿನಲ್ಲಿರಿಸಿದರು. 1830 ರ ಎಪ್ರಿಲ್ 24ರಂದು ಪ್ರಾಥಮಿಕ ವಿಚಾರಣೆ ಸಂಪಗಾವಿಯಲ್ಲಿ ನಡೆಯಿತು. ಮುಂದೆ ತನಗೆ ಮರಣದಂಡನೆ ಕಾದಿದೆ ಎಂದು ತಿಳಿದಿದ್ದರೂ ರಾಯಣ್ಣ ಅಂದು ನ್ಯಾಯಾಲಯದಲ್ಲಿ ವಿಚಾರಣಾಧಿಕಾರಿ ಎಂಡರ್ಸನ್ ಎದುರಿನಲ್ಲಿ ವಿರೋಚಿತ ಮಾತುಗಳಿಂದ ತನ್ನ ದಾಳಿಗಳನ್ನು ಸಮರ್ಥಿಸಿಕೊಂಡನು.


1830ರ ಡಿಸೆಂಬರ್ 16ರಂದು ಅಂತಿಮ ವಿಚಾರಣೆ ನಡೆದು ನ್ಯಾಯಾಲಯವು ಎಲ್ಲಾ ಅಪರಾಧಿಗಳನ್ನು ದೋಷಿತರೆಂದು ನಿರ್ಣಯಿಸಿತು. ವಿಶೇಷ ನ್ಯಾಯಾಲಯವನ್ನು ನಡೆಸಿದ ಕಮಿಶನರ್ ಮಿ ಅಂಡರ್ಸನ್ ಎಲ್ಲಾ ಗಲಭೆಗಳಿಗೆ ರಾಯಣ್ಣನೇ ಕಾರಣವೆಂದು ಅವನಿಗೂ ಹಾಗೂ ಅವನ 13 ಜನ ಸಂಗಡಿಗರಿಗೂ ಗಲ್ಲು ಶಿಕ್ಷೆ ವಿಧಿಸಲಾಯಿತು. ತನ್ನ ಮೆಚ್ಚಿನ ತಾನವಾಗಿದ್ದ ನಂದಗಡದಲ್ಲಿಯೇ ಶಿಕ್ಷೆ ವಿಧಿಸುವಂತೆ ರಾಯಣ್ಣ ಕೇಳಿಕೊಂಡಾಗ 1831 ಜನವರಿ 26ರಂದು ದೇಶಭಕ್ತ ರಾಯಣ್ಣನನ್ನು ನಂದಗಡದಲ್ಲಿಯ ಊರ ಹೊರಗಿನ ಆಲದ ಮರಕ್ಕೆ ನೇಣು ಹಾಕಲಾಯಿತು. ನಂತರ ಉಳಿದ ಸಂಗಡಿಗರನ್ನು ನೇಣಿಗೆ ಹಾಕಲಾಯಿತು.

ರಾಯಣ್ಣನಿಗೆ ಗಲ್ಲಿಗೇರಿಸುವ ಮುನ್ನ ಬ್ರಿಟಿಷ ಅಧಿಕಾರಿಗಳು ನಿನ್ನ ಕೊನೆಯ ಬಯಕೆ ಏನು ಎಂದು ಕೇಳಿದಾಗ, "ಈ ನಾಡಿನಲ್ಲಿ ಇನ್ನೊಮ್ಮೆ ಜನಿಸಿ ಬ್ರಿಟಿಷರೊಂದಿಗೆ ಹೋರಾಡಬೇಕು ಮತ್ತು ಈ ಪವಿತ್ರ ಭೂಮಿಯಿಂದ ಅವರನ್ನು ಹೊರ ಹಾಕಬೇಕು ಎಂಬುದೇ ನನ್ನ ಕೊನೆಯ ಬಯಕೆ, ಬ್ರಿಟಿಷರನ್ನು ಹೊಡೆದೋಡಿಸಲು ಮನೆಗೊಬ್ಬ ರಾಯಣ್ಣ ಹುಟ್ಟಿ ಬರಲಿ!" ಎಂದು ಕೊರಳೊಡ್ಡಿದನು. ಕಿತ್ತೂರಿನ ಇತಿಹಾಸದಲ್ಲಿಯೇ ಮರೆಯಲಾರದ ಶೋಕದ ದಿನವಾಯಿತು. ನಾಡಿನಲ್ಲಿ ಕತ್ತಲೆ ಕವಿಯಿತು. ನಾಡಿಗೆ ನಾಡೇ ಕಂಬನಿ ಮಿಡಿಯಿತು. ಇದು ಸಂಗೊಳ್ಳಿ ರಾಯಣ್ಣನ ಅಂತ್ಯವಲ್ಲ. ಮುಂಬರುವ ರಾಷ್ಟ್ರಭಕ್ತರಿಗೆ ಪ್ರೇರಣೆಯಾಯಿತು. ಸ್ವಾತಂತ್ರ್ಯ ಸಂಗ್ರಾಮ ಆರಂಭವಾಯಿತು.

# ದೇಶಭಕ್ತ ಮಹಾದೇವ ಹರಿಭಾಯಿ ದೇಸಾಯಿ




ಗೋವಿಂದರಾವ್



ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಹುತಾತ್ಮರಾದವರು ಅನೇಕರು. ಅವರಲ್ಲಿ ಮಹಾದೇವ ಹರಿಭಾಯಿ ದೇಸಾಯಿ ಇವರು ಒಬ್ಬರು. ಮಹಾತ್ಮ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿ ಹಲವಾರು ಬಾರಿ ಜೈಲುವಾಸವನ್ನು ಅನುಭವಿಸಿ ಬಂದಿದ್ದರು. ಇವರು ಗುಜರಾತ್ ರಾಜ್ಯದ ಸೂರತ್ ಜಿಲ್ಲೆಯ ಸರಸ್ ಎಂಬ ಹಳ್ಳಿಯಲ್ಲಿ 1892ರ ಜನವರಿ ಒಂದರಂದು ಜನಿಸಿದರು. ತಂದೆ ಹರಿಭಾಯಿ ದೇಸಾಯಿ ತಾಯಿ ಜಮುನಾಬೆನ್. ಮಹಾದೇವ ಏಳು ವರ್ಷದವನಿದ್ದಾಗಲೇ ತಾಯಿ ಜಮುನಾಬೆನ್ ತೀರಿಕೊಂಡರು. ಪ್ರಾಥಮಿಕ ಶಿಕ್ಷಣವನ್ನು ಸರಸ್‌ನಲ್ಲಿ ಪೂರೈಸಿದರು. ಪ್ರೌಢ ಹಾಗೂ ಉನ್ನತ ಶಿಕ್ಷಣವನ್ನು ಸೂರತ್‌ನಲ್ಲಿ ಮಾಡಿದರು. ಕಾನೂನು ಪದವಿಯನ್ನು ಮುಗಿಸಿದ ಮೇಲೆ ವಕೀಲಿ ವೃತ್ತಿಯನ್ನು ಆರಂಭಿಸಿದರು. ಆದರೆ ವಕೀಲಿ ವೃತ್ತಿ ಇವರಿಗೆ ಹಿಡಿಸಲಿಲ್ಲ. ನಂತರ ಬ್ಯಾಂಕ್‌ನಲ್ಲಿ ಉದ್ಯೋಗಿಯಾದರು. ಅದನ್ನೂ ಮುಂದುವರಿಸಲಿಲ್ಲ. ಮಧ್ಯದಲ್ಲಿಯೇ ಕೆಲಸ ಬಿಟ್ಟರು. ಅವರಿಗೆ ಹೆಚ್ಚಿನ ಭಾಷಾ ಅಭ್ಯಾಸ ಮಾಡುವ ಆಸೆಯಾಗಿ ಹಿಂದಿ, ಸಂಸ್ಕೃತ, ಬಂಗಾಳಿ, ಉರ್ದು ಮುಂತಾದ ಭಾಷೆಗಳ ಅಧ್ಯಯನ ಆರಂಭಿಸಿದರು.

ಭಾಷಾ ಪ್ರೌಢಿಮೆಯನ್ನು ಬೆಳೆಸಿಕೊಂಡು ಮಹಾತ್ಮಾಗಾಂಧೀಜಿಯವರನ್ನು ಭೇಟಿಯಾದರು. ಅಲ್ಲಿ ಗಾಂಧೀಜಿಯವರ ಕಾರ್ಯಚಟುವಟಿಕೆಗಳು ಇವರ ಮನಸ್ಸನ್ನು ಸೆಳೆದವು. ಅವರ ಪ್ರಭಾವಕ್ಕೆ ಒಳಗಾಗಿ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾದರು. ನಂತರ ಸುಮಾರು 25ವರ್ಷಗಳ ಕಾಲ ನಿಷ್ಠೆಯಿಂದ, ಆದರ್ಶ ಮಾರ್ಗದಲ್ಲಿ ನಡೆದರು. ಗಾಂಧೀಜಿಯವರ ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸಿ ನೆರವು ನೀಡತೊಡಗಿದರು. ಅವರ ಜೊತೆಯಲ್ಲೇ ಸಾಬರಮತಿ ಆಶ್ರಮದಲ್ಲಿ ನೆಲೆಸಿದರು. ಆ ವೇಳೆಯಲ್ಲಿ "ಯಂಗ್ ಇಂಡಿಯಾ" ಹಾಗೂ "ನವಜೀವನ" ಪತ್ರಿಕೆಗಳ ಸಂಪಾದನೆಯನ್ನು ಗಾಂಧೀಜಿ ಮಾಡುತ್ತಿದ್ದರು. ದೇಸಾಯಿಯವರು ಸಂಪಾದನಾ ಕಾರ್ಯಕ್ಕೆ ಸಹಾಯ ಮಾಡುತ್ತಿದ್ದರು.

ಸ್ವಾತಂತ್ರ್ಯ ಚಳುವಳಿ ಜೋರಾಗಿತ್ತು. ಆ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರನ್ನು ಬಂಧಿಸಿ ಸೆರಮನೆಗೆ ಕಳಿಸಿದರು. ಆಗ ಎರಡೂ ಪತ್ರಿಕೆಯ ಕೆಲಸ ಇವರ ಹೆಗಲಿಗೆ ಬಂತು. ಪತ್ರಿಕೆಗಳ ಮೂಲಕ ಇವರು ಹಲವಾರು ಲೇಖನಗಳನ್ನು ಪ್ರಕಟಿಸಿದರು. ಇದರಿಂದ ಓದುಗರಲ್ಲಿ ದೇಶಪ್ರೇಮ ಜಾಗೃತವಾಯಿತು. ಸ್ವಾತಂತ್ರ್ಯ ಚಳುವಳಿಗೆ ಹೆಚ್ಚಿನ ಚಾಲನೆ ಮೂಡುವಲ್ಲಿ ನೆರವಾಯಿತು. ನಂತರ ಗಾಂಧೀಜಿಯವರ ಆಶಯದಂತೆ ಮೋತಿಲಾಲ್–ನೆಹರೂರವರ 'ಇಂಡಿಪೆಂಡೆಂಟ್' ಪತ್ರಿಕೆಯ ಸಂಪಾದಕರಾದರು. ಅಲ್ಲಿ ಬಹಳ ದಿನ ಮುಂದುವರಿಯುವದು ಕಷ್ಟವಾಯಿತು. ಏಕೆಂದರೆ ದೇಸಾಯಿಯವರನ್ನು ಸರ್ಕಾರ ಬಂಧಿಸಿತು. ಬಿಡುಗಡೆಯಾದ ನಂತರ ಪತ್ರಿಕೆಯ ಕೆಲಸವನ್ನು ಮುಂದುವರೆಸಿದರು. ಆದರೆ ಉಪ್ಪಿನ ಸತ್ಯಾಗ್ರಹದಲ್ಲಿ ಮತ್ತೆ ಬಂಧನಕ್ಕೊಳಗಾದರು.





ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ತೀವ್ರಗೊಳಿಸಲು ಗಾಂಧೀಜಿಯವರೊಂದಿಗೆ ಭಾರತದ ಎಲ್ಲಾ ಪ್ರಾಂತ್ಯಗಳಲ್ಲೂ ಹಲವಾರು ಬಾರಿ ಸುತ್ತಾಡಿದ್ದಾರೆ. ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚುವ ಸಲುವಾಗಿ ದೇಶದ ವಿವಿಧೆಡೆ ಭಾಷಣವನ್ನು ಮಾಡಿದರು. ಮಹಾದೇವ ದೇಸಾಯಿಯವರ ಭಾಷಣ ಏರ್ಪಾಡಾದರೆ ಜನ ಕಿಕ್ಕಿರಿದು ಸೇರುತ್ತಿದ್ದರು. ಇದೇ ವೇಳೆಯಲ್ಲಿ ಲಂಡನ್‌ನಲ್ಲಿ ದುಂಡು ಮೇಜಿನ ಪರಿಷತ್ತು ನಡೆಯಿತು. ಗಾಂಧೀಜಿಯವರು ಅದರಲ್ಲಿ ಭಾಗವಹಿಸಿದರು. ಆಗ ದೇಸಾಯಿಯವರು ಅದರಲ್ಲಿ ಪಾಲ್ಗೊಂಡರು. ಇವರನ್ನು 1942ರಲ್ಲಿ ಮತ್ತೆ ಸೆರಮನೆಗೆ ಕಳಿಸಲಾಯಿತು. ಪುಣೆಯಲ್ಲಿನ ಆಗಾಖಾನ್ ಅರಮನೆಯ ಸೆರಮನೆಯಲ್ಲಿದ್ದಾಗ ಇವರಿಗೆ ಹೃದಯಾಘಾತವಾಯಿತು. ಅದು 1942ರ ಆಗಸ್ಟ್ 15ರಂದು ಬಂಧನದಲ್ಲಿದ್ದಾಗಲೇ ದೇಸಾಯಿಯವರು ನಿಧನರಾದರು.

ಗಾಂಧೀಜಿಯವರು "ದೇಶ ಭಕ್ತನ ಸಾವು" ಇದು. ಹೀಗಾಗಬಾರದಿತ್ತು. ದೇಸಾಯಿಯವರ ಸಾವು ನನ್ನೊಬ್ಬ ಸಹೋದರನನ್ನು ಕಳೆದುಕೊಂಡಂತಾಗಿದೆ. ಎಂದು ಅವರ ಚಿತೆಗೆ ಅಗ್ನಿ ಸ್ಪರ್ಶ ಮಾಡಿದವರು. ಮಹಾತ್ಮಾ ಗಾಂಧೀಜಿಯವರು ಅವರ ಸಮಾಧಿಗೆ ನಿತ್ಯವೂ ಪುಷ್ಪಗಳನ್ನು ಅರ್ಪಿಸಿ ಬರುತ್ತಿದ್ದರು. "ಭಾರತ ಬಿಟ್ಟು ತೊಲಗಿ" ಚಳುವಳಿಯಲ್ಲಿ ದೇಸಾಯಿಯವರು ಪ್ರಮುಖ ಪಾತ್ರ ವಹಿಸಿದ್ದರು. ಚಳುವಳಿಯಲ್ಲಿ ಅಹಿಂಸೆಗೆ ಹೆಚ್ಚು ಮಹತ್ವ ಕೊಟ್ಟರು. ಗಾಂಧೀಜಿಯವರೊಂದಿಗೆ ಇದ್ದಾಗ ನಿತ್ಯವೂ ಇವರು ದಿನಚರಿ ಬರೆಯುತ್ತಿದ್ದರು. ಅದು ಎಂಟು ಸಂಪುಟಗಳಲ್ಲಿ ಪ್ರಕಟವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಇವರ ಲೇಖನಗಳು ಜನತೆಯ ಕಣ್ಣು ತೆರಸಿದವು. ಇವರ ಹೆಸರಿನಲ್ಲಿ ಗುಜರಾತ್‌ನಲ್ಲಿ ಅಧ್ಯಯನ ಪೀಠ ಆರಂಭಿಸಿ ಮಹಾದೇವ ದೇಸಾಯಿಯವರಿಗೆ ಗೌರವ ಸಲ್ಲಿಸಲಾಗಿದೆ.

## ದೇಶೀಯ ಸಸ್ಯ ತಳಿ ಸಂರಕ್ಷಣೆಗಾಗಿ ಭಾರತ ಸರ್ಕಾರದಿಂದ ಸಮುದಾಯ ಪ್ರಶಸ್ತಿ

# ರಾಷ್ಟ್ರವೇ ಮೆಚ್ಚಿದ ಹಳ್ಳಿ ರೈತರ ಹೆಮ್ಮೆಯ ಸಾಧನೆ







ಚಿತ್ರ, ಲೇಖನ:
**ಕಿಶನರಾವ್ ಕುಲಕರ್ಣಿ**

ನಮ್ಮ ದೇಶದ ಕೃಷಿ ಪರಂಪರೆಯಲ್ಲಿ ಉತ್ತಮ ಆರೋಗ್ಯಕ್ಕೆ, ಅಧಿಕ ಇಳುವರಿಗಾಗಿ, ಜಾನುವಾರುಗಳ ಮೇವಿಗಾಗಿ ಇದ್ದ ನೂರಾರು ವಿವಿಧ ದೇಶೀಯ ಬೀಜದ ತಳಿಗಳು ಈಗಾಗಲೆ ಗುರುತು ಸಿಗದಂತೆ ಮಾಯವಾಗಿ ಹೋಗಿವೆ. ಸಂಸ್ಕೃತಿ ಲೇಪನ ಹೊಂದಿ ಭಾರತೀಯರ ನಿತ್ಯದ ಬದುಕಿನ ಜೊತೆಗೆ ಬೆಸುಗೆಯಾಗಿದ್ದ ಅದೆಷ್ಟೊ ತಳಿಗಳು ಘಟ್ಟಪ್ರದೇಶದಂತ ಸ್ಥಳಗಳಲ್ಲಿ ಬುಡಕಟ್ಟು ಸುಮುದಾಯದಲ್ಲಿ ಇದ್ದರೂ ಹೊರ ಪ್ರಪಂಚಕ್ಕೆ ಬರುತ್ತಿಲ್ಲ. ಈ ಎಲ್ಲ ದೇಶೀಯ ತಳಿಗಳ ಜಾಗೆಯಲ್ಲಿ ಸದ್ಯ ಹೈಬ್ರಿಡ್ (Terminatory Seeds, BT Seeds) ಬೀಜದ ತಳಿಗಳು ಹಾಜರಾಗಿ ರೈತರನ್ನು ಪರಾವಲಂಬಿಯನ್ನಾಗಿ ಮಾಡಿವೆ.

ಅವಸಾನದ ಅಂಚಿನಲ್ಲಿರುವ ಅಳಿದುಳಿದ ಇಂತಹ ಬೀಜದ ತಳಿಗಳನ್ನು ಸದ್ದುಗದ್ದಲವಿಲ್ಲದೆ ಸಂಗ್ರಹಿಸಿ ಅಭಿವೃದ್ಧಿಪಡಿಸುತ್ತಿರುವ ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಗುಂಡೇನಟ್ಟಿ ಗ್ರಾಮದ ಸಾಮಾನ್ಯ ರೈತರ ಸಾಧನೆ ಸಣ್ಣದೇನಲ್ಲ. ಈ ಗ್ರಾಮದ ರೈತರು ಸೇರಿ ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಹಾಗೂ ಬೀಜ ಬ್ಯಾಂಕ್ ಸ್ಥಾಪಿಸಿಕೊಂಡು ದೇಶೀಯ ಕೃಷಿ ವಿಧಾನ ಹಾಗೂ ದೇಶೀ ಬೀಜ ಸಂಗ್ರಹ ಕೆಲಸವನ್ನು ಹತ್ತಾರು ವ಼ರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ಈ ಗ್ರಾಮಸ್ಥರ ಕೆಲಸವನ್ನು ಕೇವಲ ಕರ್ನಾಟಕವಲ್ಲ ಇಡೀ ರಾಷ್ಟ್ರವೇ ಮೆಚ್ಚಿಕೊಂಡಿದೆ.

ಇವರ ಸೇವಾ ಪರಿಶ್ರಮಕ್ಕಾಗಿ ಈಚೆಗೆ ದೆಹಲಿಯಲ್ಲಿ ಸಸ್ಯ ತಳಿ ಸಂರಕ್ಷಣೆ ಹಾಗೂ ರೈತರ ಹಕ್ಕುಗಳ ಪ್ರಾಧಿಕಾರದಿಂದ ಕೊಡಲ್ಪಡುವ ಪ್ರತಿಷ್ಠಿತ 'ಸಸ್ಯ ತಳಿ ಸಂರಕ್ಷ ಸಮುದಾಯ ಪ್ರಶಸ್ತಿ'ಯನ್ನು ಈ ಹಳ್ಳಿಯ ಸಂಸ್ಥೆಯವರು ಪಡೆದುಕೊಂಡಿದ್ದಾರೆ. ನಿತ್ಯ ಮಣ್ಣಿನಲ್ಲಿಯೇ ಮಣ್ಣಾಗಿ ಜೀವನ ಕಳೆದು ರಾಜ್ಯದ ರಾಜಧಾನಿಯ ಮುಖವನ್ನೇ ನೋಡದ ಈ ಗ್ರಾಮೀಣ ಸಮುದಾಯದ ರೈತರು, ರಾಜಧಾನಿ ದೆಹಲಿಯಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಸಚಿವರಾದ ಶ್ರೀ, ರಾಧಾ ಮೋಹನ್ ಸಿಂಗ್ ಅವರಿಂದ ಸನ್ಮಾನಿತರಾಗಿರುವುದು ಅವರ ಪಾಲಿಗೆ ಅದು ಸುದಿನ. ಅಲ್ಲಿಯವರೆಗೆ ತಾವು ಪಟ್ಟ ಶ್ರಮ ಸಾರ್ಥಕ ಎಂದರಿತು ರೈತರಾದ ಬಿ.ಬಿ. ಕಿಲಾರಿ, ಶಂಕರ ಲಂಗಟಿ, ಆನಂದ ತೇಗೂರ, ಉಮಾದೇವಿ ತೇಗೂರ, ಪಾರ್ವತಿ ಚನ್ನಣ್ಣವರ,

ಪ್ರಶಂಸನಾ ಪತ್ರಗಳ ಜೊತೆಗೆ ಭಾರತ ಸರ್ಕಾರ, ಈ ಸಂಸ್ಥೆಯ ಮತ್ತಷ್ಟು ಅಭಿವೃದ್ಧಿಗಾಗಿ ರೂಪಾಯಿ 10 ಲಕ್ಷ ನಗದು ನೀಡಿದ್ದು ಈ ಬಡ ರೈತರ ಸಂತಸಕ್ಕೆ ಪಾರವೇ ಇದ್ದಿಲ್ಲ.

ಭಾರತ ಸರ್ಕಾರ ಮೆಚ್ಚಿಕೊಂಡು ಈ ಸಂಸ್ಥೆಗೆ ದೇಶದ ಹೆಮ್ಮೆ ಪ್ರಶಸ್ತಿ ನೀಡಲು ಕಾರಣವಾದರೂ ಏನಿರಬಹುದು, ಇವರು ಮಾಡಿದ್ದಾದರೂ ಏನು, ಸಮಾಜಕ್ಕೆ ಈ ಗುಂಡೇನಟ್ಟಿ ಎಂಬ ಪುಟ್ಟ ಹಳ್ಳಿಯ ರೈತರ ಸಮುದಾಯ ದೇಶದ ಕೃಷಿ ವ್ಯವಸ್ಥೆಗೆ ನೀಡಿದ ಕೊಡುಗೆಯಾದರೂ ಎಂತಹದ್ದು ಎಂಬ ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲದೆ.

**ಬಿತ್ತುವ ಬೀಜದ ಮೇಲೆ ಸ್ವಾವಲಂಬನೆಯ ಗುರಿ:** ಬೀಜದ ಮೇಲೆ ವಿವಿಧ ಕಂಪನಿಗಳು ಏಕಸ್ವಾಮ್ಯತೆ ಸಾಧಿಸುವುದನ್ನು ವಿರೋಧಿಸಿ, ಬೀಜದ ವಿಷಯದಲ್ಲಿ ರೈತರಿಗೆ ಸ್ವಾವಲಂಬನೆ ಪಾಠ ಮಾಡುವುದಕ್ಕಾಗಿ ಈ ಹಳ್ಳಿಯ ರೈತ ಸಮುದಾಯವು 2008ರಲ್ಲಿ ಸುಮಾರು 40 ರೈತರು ಸೇರಿ ಸಂಘಟನೆ ಮಾಡಿಕೊಂಡರು. ಈ ನೆಲಕ್ಕೆ, ವಾತಾವರಣಕ್ಕೆ ಸೂಕ್ತವೆನಿಸುವ ದೇಶೀಯ ಬೀಜ ತಳಿಗಳ ಸಂಗ್ರಹಕ್ಕಾಗಿ ಪುಟ್ಟದಾಗಿ ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಹಾಗೂ ಬೀಜ ಬ್ಯಾಂಕ್ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ಅಲ್ಲದೆ ತಾವು ಸಂಗ್ರಹಿಸಿದ ಬೀಜದ ತಳಿಗಳನ್ನೇ ಬೆ(ಅ)ಳೆದು ನೋಡಿ ಅದು ಸರಿ ಎನಿಸಿದ ನಂತರವೇ ಸಂಗ್ರಹ ಕಾಯಕದಲ್ಲಿ ತೊಡಗಿದ್ದರು. ಅಲ್ಲಿಂದ ನಿಧಾನವಾಗಿ ತಾವು ಸಂಗ್ರಹಿಸಿದ ಬೀಜದ ತಳಿಗಳನ್ನು ಉಳಿದ ರೈತರಿಗೆ ವಿನಿಮಯ ಮಾದರಿಯಲ್ಲಿ ವಿತರಿಸುವ ಕೆಲಸ ಆರಂಭಿಸಿದರು. ಇದಕ್ಕೆ ಆರಂಭದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಭಾರಿ ಪ್ರಮಾಣದಲ್ಲಿ ಬೇಡಿಕೆ ಬಂತು.

ಇದರ ಜೊತೆಗೆ ಈ ತಳಿಗಳು ಸ್ಥಳೀಯವಾಗಿ ಬದಲಾಗುವ



ನಿಯಂತ್ರಿಸಿಕೊಳ್ಳುವ, ಉತ್ತಮ ರುಚಿ, ಗುಣಮಟ್ಟ, ಉತ್ಕೃಷ್ಟ ಪೋಷಕಾಂಶಗಳ ಗುಣಮಟ್ಟ ಹಾಗೂ ಔಷಧಿ ಗುಣಗಳನ್ನು ಹೊಂದಿರುವಂತಹ ಸುಮಾರು 200 ವರ್ಷಗಳಷ್ಟು ಹಳೆಯ ದೇಶೀಯ ಬೀಜ ತಳಿಗಳನ್ನು ಸಂಗ್ರಹಿಸಿದರು. ಇವರ ಕೆಲಸಕ್ಕೆ ಬೆಳಗಾವಿ, ಧಾರವಾಡ ಜಿಲ್ಲೆ ಸೇರಿದಂತೆ ವಿಶೇಷವಾಗಿ ಪಶ್ಚಿಮಘಟ್ಟದ ರೈತರು ಸಹಾಯ ನೀಡಿದರು. ಬಹುತೇಕ ರೈತರು ಈ ಬೀಜಗಳನ್ನು ಆಹಾರಕ್ಕಾಗಿ ಬಳಸುವುದರ ಜೊತೆಗೆ ಬೀಜ ಉತ್ಪಾದನೆಗೂ ಮುಂದಾದರು. ನೂರಕ್ಕು ಹೆಚ್ಚು ಭತ್ತದ ತಳಿಯ ಜೊತೆಗೆ ಜೋಳ, ತೊಗರಿ, ಉದ್ದು, ಹೆಸರು, ಅಲಸಂದಿ, ಅಗಸೆ ಹಾಗೂ ತರಕಾರಿಗಳಂತಹ ತಳಿಗಳ ಸಂರಕ್ಷಣಾ ಕೆಲಸ ನಡೆಯಲಾರಂಭಿಸಿತು.

**ಹಬ್ಬಿದ ಬೀಜದ ಗಾಳಿ:** ಗುಂಡೇನಟ್ಟಿ ಹಳ್ಳಿಯಿಂದ ಆರಂಭವಾದ ಈ ಬೀಜದ ಅಭಿಯಾನದ ಗಾಳಿ ಖಾನಾಪೂರ ತಾಲ್ಲೂಕು ಸೀಮೆ ದಾಟಿ ವರ್ಷದೊಳಗೆ ಬೆಳಗಾವಿ ಜಿಲ್ಲೆಯನ್ನು ವ್ಯಾಪಿಸಿಕೊಂಡಿತು. ಬಳಿಕ ಕರ್ನಾಟಕದ ತುಂಬೆಲ್ಲಾ ಹರಿದಾಡಿ, ಸಂಗ್ರಹಗೊಂಡ ಬೀಜಗಳು ವಿವಿಧ ರಾಜ್ಯಗಳ ಗಡಿ ಪ್ರವೇಶ ಮಾಡಿದವು. ಈ ಬೀಜ ವಿನಿಮಯ ಒಂದ ರೀತಿ ನೆಟ್‌ವರ್ಕ ರೀತಿಯಲ್ಲಿ ವೇಗವಾಗಿ ಕೆಲಸ ಮಾಡಲಾರಂಭಿಸಿತು. ಜೋಳ, ತೊಗರಿ, ಅಗಸೆ, ತರಕಾರಿಯಂತಹ ಸಾಂಪ್ರದಾಯಿಕ ಬೆಳೆಗಳ ಪ್ರಭೇದಗಳ ಸಂರಕ್ಷಣಾ ಕಾರ್ಯ ಮುಂದುವರೆಯಿತು. ಜೊತೆಗೆ ಸಾವಯವ ಕೃಷಿ ಅಡಿಯಲ್ಲಿ ಅವುಗಳನ್ನು ಉಳುಮೆ ಪ್ರಾರಂಭಿಸಿದರು.

**ಪ್ರಾಮಾಣಿಕ ಸೇವೆಗೆ ಸಂದ ಗೌರವ:** ಸಮಗ್ರವಾಗಿ ಬಹುತೇಕ ಬೀಜಗಳು ಸಂಗ್ರಹವಾದ ಬಳಿಕ 2011 ರಿಂದ ಸಮುದಾಯ ಬೀಜ ಬ್ಯಾಂಕ್‌ನ್ನು ಸ್ಥಾಪಿಸಿದರು. 2016ನೇ ಸಾಲಿನಲ್ಲಿ ಸುಮಾರು 92 ಕ್ವಿಂಟಲ್‌ಗಿಂತಲೂ ಹೆಚ್ಚು ದೇಶೀಯ ತಳಿಗಳ ಬೀಜಗಳನ್ನು ರಾಜ್ಯದ ವಿವಿಧ ರೈತರಿಗೆ ವಿತರಣೆಮಾಡಲಾಗಿದೆ. ಇದರಿಂದಾಗಿ ಈಗ ಆ ಭಾಗದಲ್ಲಿ ಕಂಪನಿಯಿಂದ ಬರುವ ಬಂಜೆ ಬೀಜಗಳು,



ಕುಲಾಂತರಿ ಬೀಜಗಳ ಹಾವಳಿ ಕಡಿಮೆಯಾಗಿದೆ. ಬಿತ್ತನೆ ಮಾಡುವ ಮುನ್ನ ರೈತರು ಬೀಜಕ್ಕಾಗಿ ಅಂಗಡಿಗಳಿಗೆ ಎಡತಾಕುವುದಿಲ್ಲ, ನೇರವಾಗಿ ರೈತರು ಈ ಹಳ್ಳಿಗರ ಬೀಜ ಬ್ಯಾಂಕ್‌ಗೆ ಬಂದು ಉಚಿತವಾಗಿ ಬೀಜ ತೆಗೆದುಕೊಂಡು ಹೋಗುತ್ತಾರೆ. ಬೆಳೆದ ನಂತರ ಅದಕ್ಕೆ ಮತ್ತಷ್ಟು ಹೆಚ್ಚಿಗೆ ಬೀಜ ಸೇರಿಸಿ ಪುನಃ ಈ ಬೀಜ ಬ್ಯಾಂಕಿಗೆ ತಂದೊಪ್ಪಿಸುವುದು ಮಾತ್ರ ಕಡ್ಡಾಯ.

**ರೈತರಿಗೆ ತರಬೇತಿ, ಮಾರ್ಗದರ್ಶನ:** ಹತ್ತಾರು ವರ್ಷಗಳಲ್ಲಿ ತಾವು ತಿಳಿದುಕೊಂಡ ಅನುಭವವನ್ನು ಉಳಿದ ರೈತರಿಗೆ ತಿಳಿಸುವುದಕ್ಕಾಗಿ ಕಾರ್ಯಾಗಾರ, ತರಬೇತಿ, ಮಾಹಿತಿ, ಪ್ರಾತ್ಯಕ್ಷಿಕೆಗಳನ್ನು ಉಚಿತವಾಗಿ ಹಮ್ಮಿಕೊಳ್ಳುತ್ತಾರೆ. ರೈತರಿಗೆ ಸಂಸ್ಥೆಯಿಂದ ರಾಷ್ಟ್ರೀಯ ಬೀಜ ಸರಣಿ ಮತ್ತು ನಿರ್ಗತಿಕರಿಗೆ ರೈತರಿಗೆ ಉಚಿತ ಬೀಜ ದಾನ, ಲಭ್ಯವಿರುವ ಸಂಪನ್ಮೂಲಗಳನ್ನು ಪುಷ್ಠೀಕರಣ, ಸಾಂಪ್ರದಾಯಿಕ ಪ್ರಭೇದಗಳ ಹುಡುಕಾಟ, ಔಷಧೀಯ ಮೌಲ್ಯಗಳನ್ನು ದಾಖಲಿಸುವ ಕಿಚನ್ ಗಾರ್ಡನ್ ಚಟುವಟಿಕೆಗಳನ್ನು ಜನಪ್ರಿಯಗೊಳಿಸುವುದು, ತರಕಾರಿ ಬೀಜ ವಿತರಿಸುವಂತಹ ಚಟುವಟಿಕೆಗಳು ನಡೆಯುತ್ತಿವೆ. ಅಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ರೈತರಿಗೆ ಉಚಿತವಾಗಿ ಸುಸ್ಥಿರ ಕೃಷಿ ಮಿಶ್ರ ಕೊಯ್ಲು ಮತ್ತು ಸಾಂಪ್ರದಾಯಿಕ ಪ್ರಭೇದಗಳು, ವ್ಯವಸ್ಥೆ ಶುದ್ಧೀಕರಣ, ಉತ್ತಮ ಗುಣಮಟ್ಟದ ಬೀಜಗಳು ಮತ್ತು ವಿತರಣೆ ಮತ್ತು ವ್ಯವಸ್ಥೆ, ಬೀಜ ಪ್ರದರ್ಶನಗಳು ಮತ್ತು ವಿಜ್ಞಾನಿಗಳು ಮತ್ತು ಪ್ರಗತಿಪರ ರೈತರೊಂದಿಗಿನ ಚರ್ಚೆಗಳು ಎಗ್ಗಿಲ್ಲದೆ ನಡೆಯುತ್ತಿವೆ.

ಎಲ್ಲೋ ಮೂಲೆಯಲ್ಲಿದ್ದ ತೃಣ ಧಾನ್ಯಗಳು, ಬೇಳೆ ಕಾಳುಗಳು, ಎಣ್ಣೆಬೀಜಗಳು ಹೀಗೆ ಅವಸಾನದ ಅಂಚಿನಲ್ಲಿದ್ದ ಅದೆಷ್ಟೋ ಬೀಜದ ತಳಿಗಳು ಈಗ ಗುಂಡೇನಟ್ಟಿ ಗ್ರಾಮ ಹುಡುಕಿಕೊಂಡು ಬರಲಾರಂಭಿಸಿವೆ. ಸುಮಾರು 92 ಭತ್ತದ ದೇಶೀಯ ಬೀಜದ ತಳಿಗಳು ಜೊತೆಗೆ ಅಷ್ಟೆ ಸಂಖ್ಯೆಯ ತರಕಾರಿ ಬೀಜಗಳನ್ನು ಸಂಗ್ರಹ ಮಾಡಲಾಗಿದೆ. ಈ ಹಳ್ಳಿಯ ಸಾಮಾನ್ಯ ರೈತರು ತಾವೂ ಸೇರಿದಂತೆ ಸಾವಿರಾರು ರೈತರಿಗೆ ಬೀಜಗಳ ವಿಷಯದಲ್ಲಿ ಸ್ವಾವಲಂಬಿ ಪಾಠ ಮಾಡಿ ಸುಖಿ ರೈತ ಕುಟುಂಬಗಳನ್ನು ಕಟ್ಟುತ್ತಿದ್ದಾರೆ.

**ಬದಲಾದ ಬದುಕಿನ ವೈಖರಿ:** 'ನಮ್ಮ ಈ ಬಗೆಯ ವಿಚಾರಗಳನ್ನು ಹತ್ತಿರದಿಂದ ಗಮನಿಸಿದ್ದ ಈ ಕ್ಷೇತ್ರದಲ್ಲಿ ಮಾಹಿತಿ ಹೊಂದಿರುವ ಸಂಪನ್ಮೂಲ ವ್ಯಕ್ತಿ ಶಿವರಾಜ ಹುನುಗುಂದ ಎಂಬುವವರು, 2006ರಲ್ಲಿ ಧರ್ಮಸ್ಥಳದಲ್ಲಿ ನಡೆದಿದ್ದ ದೇಶೀಯ ಬೀಜ ಮೇಳದಲ್ಲಿ ಪಾಲ್ಗೊಳ್ಳಲು ನಮ್ಮ ಹಳ್ಳಿಗರಿಗೆ ಸಲಹೆ ನೀಡಿದ್ದರು ಅಲ್ಲಿಗೆ ಹೋಗಿ ಬಂದ ನಂತರ ನಮ್ಮ ಚಿತ್ರಣವೆ ಬದಲಾಯಿತು ನೋಡ್ರಿ' ಎಂದು ಸಾವಯವ ಕೃಷಿಕರ ಬಳಗದ ಅಧ್ಯಕ್ಷ ಬಿ.ಬಿ. ಕಿಲಾರಿ ಹೇಳುತ್ತಾರೆ.

ಧರ್ಮಸ್ಥಳದಲ್ಲಿ ನಡೆದ ಬೀಜ ಮೇಳದಿಂದ ಹತ್ತತ್ತು ಗ್ರಾಮಗಳಿಗಾಗುವಷ್ಟು 25 ದೇಶೀಯ ಭತ್ತದ ತಳಿಗಳ ಬೀಜಗಳನ್ನು ತಂದು ತಮ್ಮ ಜಮೀನಿನ 25 ಗುಂಟೆ ಪ್ರದೇಶದಲ್ಲಿ ಬಿತ್ತನೆ ಮಾಡಿದರು. ತಲಾ ಆಯಾ ಬೀಜದ ತಳಿಗಳಿಂದ 3 ರಿಂದ 5 ಕೆ.ಜಿಯಷ್ಟು ಬೀಜ ಬೆಳೆದು ರೈತರಿಗೆ ಹಂಚುವ ಕಾರ್ಯ ಆರಂಭಿಸಿದರು. ಭತ್ತದ ಪೈರುಗಳನ್ನು ನೋಡಿ ಮೆಚ್ಚಿಕೊಂಡ ಧಾರವಾಡ ಸಮೀಪದ ಮುಗದ ಭತ್ತದ ಸಂಶೋಧನಾ ಕೇಂದ್ರದ ತಜ್ಞರಾದ ಡಾ.ಎನ್.ಜಿ. ಹನುಮರಟ್ಟಿ ಬೀಜ ಅಭಿವೃದ್ಧಿಪಡಿಸುವ ಈ ರೈತರ ಕೈಗೆ ಅಮೂಲ್ಯವೆನಿಸುವ 24 ದೇಶಿಯ ಭತ್ತದ ತಳಿಗಳ ಬೀಜಗಳನ್ನು ನೀಡಿದ್ದು ಈ ಪರಿ ಬೀಜ ಬ್ಯಾಂಕ್ ಅಭಿವೃದ್ಧಿಯಾಗಲು ಮತ್ತೊಂದು ಕಾರಣವಾಗಿದೆ.

**ಪಶ್ಚಿಮ ಘಟ್ಟದಲ್ಲಿ ಬೀಜಗಳಿಗಾಗಿ ಶೋಧ:** ಘಟ್ಟಪ್ರದೇಶದಲ್ಲಿ ಅನಾದಿಕಾಲದಿಂದಲೂ ಬಳಕೆ ಇದ್ದು, ಸದ್ಯ ಅಳಿವಿನಂಚಿಗೆ ಬಂದಿರುವ ವಿವಿಧ ದೇಶೀಯ ಬೀಜ ತಳಿಗಳನ್ನು ರಕ್ಷಣೆ ಮಾಡಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೆಲಸ ಆರಂಭಿಸಿದರು. ಈ ಸಂದರ್ಭದಲ್ಲಿ ಘಟ್ಟಪ್ರದೇಶದ ಜಾಂಜೋಟಿ, ಅಭಿನಾಳ, ಬಾಮಗಾಂವ್, ಮತ್ರಗಾ, ಕಲಕುಂಟಿ, ತೆವಲಿ, ನಿಜನಗೂಡ, ನವಗಾ, ಕರಂಜನಾ ಇಂತಹ ಅನೇಕ ಸ್ಥಳಗಳಿಗೆ ಭೇಟಿ ನೀಡಿ ಕರೆ ಹಕ್ಕಲಸಾಲಿ, ಸೊರಟ, ಅಭಿನಾಳ, ಕೆಂಪುನೆಳೆ, ಆಲೂರು ಸಣ್ಣ, ಹೆಗ್ಗೆ, ಮುಳ್ಳಾರಿ, ಕಗ್ಗ, ಕೊತಂಬರಿಸಾಳಿ, ಯಾಲಕ್ಕಿಸಾಳಿ, ಬಂಗಾರಕಡ್ಡಿ, ಬಾದಶಾಭೋಗ, ಜೀರಿಗೆಸಣ್ಣ, ಓಡಿಶಾದ ರಾಮಗಲಿ ಮೊದಲಾದ ಅಪರೂಪದ ತಳಿಗಳನ್ನು ಹುಡುಕಿ ಸಂಗ್ರಹಿಸಿ ಅಭಿವೃದ್ಧಿಪಡಿಸಿದರು. ಬಿಡುವಿನ ವೇಳೆಯಲ್ಲೂ ಸಂಘದ ಸದಸ್ಯರು ಬೀಜ ಹುಡುಕಾಟ ನಡೆಸಿದ್ದಾರೆ.

**ಭತ್ತದ ಪ್ರಮುಖ ದೇಶೀಯ ತಳಿಗಳು:** ಈ ಎಲ್ಲ ಪರಿಶ್ರಮದ ಫಲವಾಗಿ ಚಿಕ್ಕದಾದ ತಮ್ಮ ಜಮೀನಿನಲ್ಲಿ ಮಡಿಗಳನ್ನಾಗಿ ಮಾಡಿ ಸುಮಾರು 92 ದೇಶೀಯ ತಳಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಎಂತಹ ಮಣ್ಣು, ನೀರು, ಹವಾಮಾನಕ್ಕೆ ಯಾವ ಬೀಜ ಬೇಕು, ಯಾವ ಯಾವ ಭತ್ತದಲ್ಲಿ ಎಂತಹ ಗುಣಗಳಿವೆ ಎಂಬಿತ್ಯಾದಿ ಮಾಹಿತಿ ಅರಿತುಕೊಂಡು ರೈತರಿಗೆ ಬಿತ್ತನೆಗಾಗಿ ಬೀಜಗಳನ್ನು ನೀಡುತ್ತಿದ್ದಾರೆ.

**ಭತ್ತದ ತಳಿಗಳು :** ಮುಗದ ದೊಡಗ್ಯಾ, ಮುಗದ ಸಿರಿ, ಕುಂಕುಮ ಸಾಲಿ, ಕಾಗಸಾಲಿ, ಡಾಂಬರಸಾಳಿ, ಕುಮುದ, ಕೃಷ್ಣ



ಬಂಗಾರ ಕಡ್ಡಿ, ರತ್ನಚೂಡಿ, ಗಂಧಸಾಳಿ, ಚಂಪಕಸಾಳಿ, ಕರೆಕಾಲ ದೊಡಗ್ಯಾ, ಚಂಡಿಕ್ಯಾ ಮುಗದ, ಮೈಸೂರ ಮಲ್ಲಿಗೆ, ಕರೆಗಜವಿಲಿ, ಬರ್ಮಾ ಬ್ಲ್ಯಾಕ್ ಎಂಬಂತಹ 92 ಬೀಜಗಳ ಸಂಗ್ರಹ ಈಗ ಇವರಲ್ಲಿದೆ. ಮೂಲ ಬಂಗಾರಕಡ್ಡಿ ಭತ್ತದ ಬೀಜ ತಳಿಯ ಹುಡುಕಾಟ ಇನ್ನೂ ನಡೆದಿದೆ.

ಸಾಮಾನ್ಯವಾಗಿ ದೇಶೀಯ ಭತ್ತದ ತಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೋಷಕಾಂಶಗಳಿವೆ, ಇದಕ್ಕಿಂತ ಮಿಗಿಲಾಗಿ ಈ ಎಲ್ಲ ಬೀಜಗಳು ಮರುಹುಟ್ಟು ಪಡೆಯುತ್ತವೆ. ರೈತರು ಮುಂದಿನ ಬಿತ್ತನೆಗಾಗಿ ಬೀಜದಂಗಡಿಗೆ ಹೋಗದೇ ತಮ್ಮ ಜಮೀನಿನಲ್ಲಿಯೇ ಬೆಳೆದ ಬೀಜಗಳನ್ನು ಬಿತ್ತನೆ ಮಾಡುವ ರೀತಿಯಲ್ಲಿ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶವಿದೆ ಎಂದು ಸಂಘದ ಮಾರ್ಗದರ್ಶಕ ಶಿವರಾಜ ಹುನುಗುಂದ ಹೇಳುತ್ತಾರೆ.

**ಸಂಗ್ರಹವಾದ ಯಾವ ತಳಿಯಲ್ಲಿ ಏನು ವಿಶೇಷ?**

ದೇಶೀಯ ಭತ್ತದ ತಳಿಯಲ್ಲೊಂದಾದ ಕುಂಕುಮ ಸಾಳಿಗೆ ವಿಶಿಷ್ಟ ಸುವಾಸನೆ ಇದೆ. ಅದರಿಂದ ರುಚಿಕರವಾದ ಪಲಾವ್ ತಯಾರಿಸಬಹುದು, ಕರಿ ಭತ್ತಕ್ಕೆ ರೋಗ ನಿರೋಧಕ ಗುಣವಿದೆ, ಕರಿ ಗಜವಿಲಿ ಭತ್ತದಲ್ಲಿ ಕಬ್ಬಿಣದ ಅಂಶ ಹೇರಳವಾಗಿದ್ದು ಬಾಣಂತಿಯರಿಗೆ ಅದರ ಅನ್ನ ನೀಡುವುದು ಆರೋಗ್ಯಕರ, ಚಂಡಿಕ್ಯಾ ಕಪ್ಪು ತಳಿಯ ಅಕ್ಕಿ ಮೂಲವ್ಯಾಧಿಗೆ ಔಷಧಿಯಾಗಿ ಪರಿಣಮಿಸುತ್ತದೆ, ಸ್ವರಟಾ ತಳಿ ಅಕ್ಕಿ ಅವಲಕ್ಕಿ ಮಾಡಲು ಸೊಗಸಾಗಿರುತ್ತದೆ, ಕರಿ ಹಕ್ಕಳಸಾಲಿ ಭತ್ತದಿಂದ ಮಾಡಿದ ಆಹಾರ ಶೀತ ಜ್ವರದಿಂದ ಬಳಲುವವರಿಗೆ ಹಾಗೂ ಟೈಫೈಡ್ ಜ್ವರ ಔಷಧವಾಗಿ ಕೆಲಸ ಮಾಡುತ್ತದೆ. ಹಿಂದಿನ ನಮ್ಮ ಹಿರಿಯರು ನೆಗಡಿ, ಶೀತ, ಜ್ವರದಂತಹ ಸಣ್ಣಪುಟ್ಟ ತೊಂದರೆಗಳಿಗೆ ಆಯುರ್ವೇದಲ್ಲಿ ಸಸ್ಟಿಕಸಾಳಿ ಎಂದು ಕರೆಯುವ ನವರಾ ಭತ್ತ ಬಳಸುತ್ತಿದ್ದರು. ಅಲ್ಲದೆ ಇದು ನರರಗೋಗಕ್ಕೆ ಉಪಯುಕ್ತ ಅಕ್ಕಿ ಎಂದು ಸಮುದಾಯ ಸದಸ್ಯ ಶಂಕರ ಲಂಗಟೆ ಮಾಹಿತಿ ನೀಡುತ್ತಾರೆ. ಅಲ್ಲದೆ ಭತ್ತ ಬೆಳೆಯುವ ಅವಧಿ, ಇಳುವರಿ, ಬಳಕೆ ಯಾವುದಕ್ಕೆ ಎಂಬಿತ್ಯಾದಿ ಮಾಹಿತಿಯ ಬ್ರೋಚರ್‌ಗಳನ್ನು ಮಾಡಿಸಿ ಹಂಚುತ್ತಿದ್ದಾರೆ.

**ಹಳ್ಳಿಯಲ್ಲಿ ಬೀಜ ಬ್ಯಾಂಕ್ ಸ್ಥಾಪನೆ:** ನಮ್ಮ ಬ್ಯಾಂಕಿನಲ್ಲಿ ಹಣವಿಲ್ಲದಿರಬಹುದು, ಆದರೆ ನಮ್ಮೆಲ್ಲರ ಪ್ರಯತ್ನದಿಂದಾಗಿ ಅಳಿದು ಹೋಗಲಿರುವ ಅಪರೂಪದ ದೇಶೀಯ ಭತ್ತದ ತಳಿಗಳ ಜೊತೆಗೆ ವಿವಿಧ ತರಕಾರಿಯ ಬೀಜಗಳ ಸಾಕಷ್ಟು ಸಂಗ್ರಹವಿದೆ' ಎಂದು ಸಂಘದ ಅಧ್ಯಕ್ಷ ಬಿ.ಬಿ. ಕಿಲಾರಿ ಸಂತಸದಿಂದ ಹೇಳುತ್ತಾರೆ. ಕಡಿಮೆ ಮಳೆ ಬೀಳುವ ಪ್ರದೇಶಕ್ಕೆ

**ಅಂಚೆ ಮೂಲಕ ಬೀಜ, ಫೋನ್ ಮೂಲಕ ಮಾಹಿತಿ :** ಮನೆಯ ಕೈತೋಟಕ್ಕೂ ದೇಶೀಯ ತಳಿಯ ತರಕಾರಿ ಬೀಜಗಳನ್ನು ಅಂಚೆ ಮೂಲಕ ತಲುಪಿಸುವ ಮತ್ತು ಕೃಷಿ ಕುರಿತ ಮಾಹಿತಿಯನ್ನು ಫೋನ್ ಮೂಲಕ ನೀಡುವ ವ್ಯವಸ್ಥೆಯನ್ನು ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಹೊಂದಿದೆ.

**ಬೀಜದ ಮನೆ ಎಂಬ ವಿಶಿಷ್ಠ ಕ್ರಮ:**

ಸಿದ್ಧಾರೂಢ ಬೀಜ ಬಳಗದ ಸದಸ್ಯರು. ಬೀಜ ಹುಡುಕಾಟ ಹಾಗೂ ಹಂಚಿಕೆ ದೃಷ್ಠಿಯಿಂದ ನಾಲ್ಕು ಮನೆಯ ಚೌಕಾಕಾರದ ಪಟ್ಟಕವನ್ನು ಬಳಸುತ್ತಾರೆ. ಇದು ಒಂದು ರೀತಿ ಪಗಡೆ ಆಟಕ್ಕೆ ಬಳಸುವ ಪಟ್ಟಕ ಇದ್ದಂತಿರುತ್ತದೆ. ಪ್ರತಿಯೊಂದು ಚೌಕಗಳಲ್ಲಿ ಮನೆಗಳು ಇರುತ್ತವೆ. ಬೀಜದ ಚರ್ಚೆ ನಡೆದ ಸಮಯದಲ್ಲಿ ಈ ಪಟ್ಟಕ ಹಾಸುತ್ತಾರೆ. ಅಲ್ಲಿ ಸಾಮಾನ್ಯವಾಗಿ ಬಿತ್ತನೆಯಾಗುವ ಬೀಜಗಳನ್ನು ಹಾಗೂ ಬಿತ್ತನೆಯೇ ನಡೆಯದ ಬೀಜಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲ ಬೀಜಗಳನ್ನು ಸ್ವಲ್ಪ ಜನ ಬಾಳ ಬಿತ್ತನೆ ಮಾಡುತ್ತಿದ್ದರೆ, ಆ ಬೀಜಗಳನ್ನು ಪಟ್ಟಕದ ದೊಡ್ಡ ಮನೆಯಲ್ಲಿ ಹಾಕಲಾಗುತ್ತದೆ. ಇದರಿಂದ ದೊಡ್ಡ ಪ್ರಮಾಣದ ರೈತರು ಆಹಾರಕ್ಕಿಂತ ವ್ಯವಹಾರದ ದೃಷ್ಠಿಯಿಂದ ಬೆಳೆಯುತ್ತಾರೆ ಎಂಬುದು ಗೊತ್ತಾಗುತ್ತದೆ. ಬಹಳ ಜನ ಸ್ವಲ್ಪ ಬಿತ್ತನೆ ಮಾಡುತ್ತಾರೆ ಎಂದರೆ ಬೀಜಗಳನ್ನು ಚೌಖಾನೆಯ ಸಣ್ಣ ಮನೆಯಲ್ಲಿ ಹಾಕುತ್ತಾರೆ. ಇಲ್ಲಿ ಅತಿ ಸಣ್ಣ ರೈತರು ತಮ್ಮ ಆಹಾರಕ್ಕಾಗಿ ಮಾತ್ರ ಬಿತ್ತನೆ ಮಾಡುತ್ತಾರೆ ಎಂದು ತಿಳಿಯುತ್ತದೆ. ಕೆಲ ಬೀಜಗಳನ್ನು ಯಾವ ಮನೆಯಲ್ಲೂ ಹಾಕುವುದಿಲ್ಲ ಆಗ ಈ ಬೀಜ ಇಲ್ಲಿ ಬಿತ್ತನೆಯಾಗುವುದಿಲ್ಲ ಎಂದು ಅರಿವಾಗುತ್ತದೆ. ಇದು ರೈತರಿಂದಲೇ ನಡೆಯುವ ಚಟುವಟಿಕೆಯ ಆಗಿರುವುದರಿಂದ ಅನಕ್ಷರಸ್ಥರು ಸರಳವಾಗಿ ಮಾಹಿತಿ ನೀಡಬಲ್ಲರು.

ಹೊಂದಿಕೆಯಾಗುವ ತಳಿ, ಹೆಚ್ಚು ಮಳೆ ಬೀಳುವ ಪ್ರದೇಶಕ್ಕೆ ಹೊಂದಿಕೆಯಾಗುವ ತಳಿ ಹಾಗೂ ಬರ ನಿರೋಧಕ, ಕೀಟ ಮತ್ತು ರೋಗ ನಿರೋಧಕ, ಕಳೆ ಸಮಸ್ಯೆ ಪರಿಸಹರಿಸುವಂತಹ ಭತ್ತದ ತಳಿ ಬೀಜಗಳು ಇವರ ಸಂಗ್ರಹಿದಲ್ಲಿವೆ.

**ಬಾಗಿಲುಗಳಿಗೆ ಭತ್ತದ ತೋರಣ:** ಸಾರ್ವಜನಿಕರಲ್ಲಿ ದೇಶೀಯ ತಳಿಗಳ ಬಗ್ಗೆ ಜಾಗೃತಿ ಮೂಡಿಸುವ ದೃಷ್ಟಿಯಿಂದ ಪ್ರತಿಯೊಂದು ಮನೆಗಳ ಮುಂಬಾಗಿಲುಗಳಿಗೆ ಮಾವಿನ ಎಲೆಯ ತೋರಣಗಳ ಬದಲಿಗೆ ವಿವಿಧ ತಳಿಗಳ ಭತ್ತದ ತನೆಗಳನ್ನು ಪೋಣಿಸಿ ತೋರಣ ಕಟ್ಟಿದ್ದಾರೆ. ಪ್ರತಿಯೊಂದು ತೋರಣಗಳಲ್ಲಿಯ ಭತ್ತದ ತೆನೆಗಳಿಗೆ ಆಯಾ ತಳಿಗಳ ಹೆಸರುಗಳ ಚೀಟಿ ಕಟ್ಟಿರುವುದರಿಂದ ಬೇಡಿ ಬಂದವರಿಗೆ ಬೀಜ ಅಭಿವೃದ್ಧಿಪಡಿಸಿ ಎಂದು ಹೇಳಿ ಆಯಾ ತೆನೆಗಳಲ್ಲಿಯ ಕಾಳುಗಳನ್ನು ಉದುರಿಸಿ ಹೊನ್ನಿನ ಹಾಗೆ ನೀಡುತ್ತಿರುವುದು ವಿಶೇಷ.

**ಸಾವಯವ ಕೃಷಿಗೆ ಮಹತ್ವ ಕೊಡಿ, ಮಣ್ಣಿನ ಸಹಜತೆ ಕಾಪಾಡಿ.**ನಿಜವಾದ ಕೃಷಿ ವ್ಯವಸ್ಥೆ ಅರ್ಥಮಾಡಿಕೊಳ್ಳದೇ ಇರುವ ಹಾಗೂ ತಮ್ಮಲ್ಲಿನ ಅಜ್ಞಾನ ಹಾಗೂ ತಪ್ಪು ಕಲ್ಪನೆಯಿಂದ ಹತಾಸೆಗೊಳ್ಳುವ ರೈತರು ಮಾತ್ರ ಆತ್ಮಹತ್ಯೆಯಂತಹ ದಾರಿ ತುಳಿಯುತ್ತಾರೆ, ಕೃತ್ರಿಮ ಪದ್ಧತಿ ಅನುಸರಿಸದೇ ನಿಸರ್ಗ, ಪ್ರಕೃತಿ ನೋಡಿ ಕಲಿತು ಕೃಷಿಯಲ್ಲಿ ತೊಡಗಿದರೆ ಮಾತ್ರ ಲಾಭ ಪಡೆಯಲು ಸಾಧ್ಯ. ಆದರೆ ಮಾನವ ತನ್ನ ದುರಾಸೆಯಿಂದ ಮಣ್ಣಿಗೆ ಎರ್ರಾ–ಬಿರ್ರಿ ರಾಸಾಯನಿಕ ಸುರಿದು ಚಿನ್ನದಂತಹ ಮಣ್ಣನ್ನು ವಿಷಪೂರಿತಗೊಳಿಸಿದ್ದಾನೆ, ಇದರಿಂದ ನಿಜವಾಗಿ ಮಣ್ಣು ತನ್ನ ಫಲವತ್ತತೆ ಕಳೆದುಕೊಂಡು ನಿಸ್ಸಾರವಾಗಿದೆ, ಮತ್ತೆ ನಾವು ಹಲವಾರು ತಂತ್ರಗಳ ಮೂಲಕ ಮಣ್ಣಿಗೆ ನೈಜತೆ ಕೊಡಬೇಕಾಗಿದೆ, ಹೀಗೆ ಬದಲಾಗಬೇಕಾದ ಕೃಷಿಪದ್ಧತಿಗಳ ಬಗ್ಗೆ ಹಾಗೂ ಮೇಲ್ಮಣ್ಣಿನ ರಕ್ಷಣೆ ಕುರಿತು ಉಮಾದೇವಿ ತೇಗೂರ, ಪಾರ್ವತಿ ಚನ್ನಣ್ಣವರ ರೈತರಿಗೆ ಕಿವಿಮಾತು ಹೇಳುತ್ತಾರೆ.

ಬೆಳೆಗಳಿಗೆ ಬೇಕಾದ ಎಲ್ಲ ರೀತಿಯ ಪೋಷಕಾಂಶಗಳು ಈ ಸಹಜ ಮಣ್ಣಿನಲ್ಲಿವೆ, ಆದರೆ ಇಂತಹ ಫಲವತ್ತಾದ ಈ ಮಣ್ಣನ್ನು ಅವೈಜ್ಞಾನಿಕ ರೀತಿಯಲ್ಲಿ ರಾಸಾಯನಿಕವನ್ನು ಬೆರೆಸಿ ಕೃತಕ ಮಣ್ಣನ್ನಾಗಿಸಲಾಗುತ್ತಿದೆ. ಸದ್ಯ ರಸಾಯನಿಕ ಗೊಬ್ಬರವಿಲ್ಲದೇ ಮಣ್ಣಿನಲ್ಲಿ ಏನೂ ಬೆಳೆಯಲು ಸಾಧ್ಯವಿಲ್ಲ ಎಂಬಷ್ಟರ ಮಟ್ಟಿಗೆ ರೈತರು ಬಂದಿದ್ದಾರೆ. ಆದರೆ ಕೆಲವೊಂದು ಪದ್ಧತಿಗಳನ್ನು ಅನುಸರಿಸಿದರೆ ಪುನಃ ಮಣ್ಣಿಗೆ ಸಹಜತೆ ತಂದುಕೊಡಲು ಸಾಧ್ಯ ಎನ್ನುವುದು ಅವರ ಅನುಭವದ ಮಾತು.

**ಕೃಷಿ ತ್ಯಾಜ್ಯ ದಹಿಸಬೇಡಿ :** ಕೃಷಿಯಿಂದ ದೊರೆಯುವ ತ್ಯಾಜ್ಯಗಳನ್ನು ಸುಡುವುದರ ಬದಲು ಜಮೀನಿನ ಮೇಲೆ ಹರಡಿ ಹೊದಿಕೆ ಮಾಡಿದರೆ ಕ್ರಮೇಣ ಅದು ಮಣ್ಣಿನಲ್ಲಿ ಲೀನವಾಗುತ್ತದೆ. ನೈಸರ್ಗಿಕ ಕ್ರಿಯೆಗಳು ಮಣ್ಣಿನ ಮೇಲೆ ಹೊದಿಕೆ ಇದ್ದಾಗ ಮಾತ್ರ ನಡೆಯುತ್ತವೆ. ಸಜೀವ ಹೊದಿಕೆಯಾಗಿದ್ದರಂತೂ ಬೆಳೆಗಳಿಗೆ ಬೇಕಾಗುವ ಎಲ್ಲಾ ರೀತಿಯ ಪೋಷಕಾಂಶಗಳನ್ನು ಈ ಹೊದಿಕೆ ಪೂರೈಸುವುದರ ಜೊತೆಗೆ ಸಾರಜನಕ ಸ್ಥಿರೀಕರಿಸುತ್ತದೆ, ತೇವಾಂಶ ಕಾಪಾಡಿಕೊಳ್ಳುತ್ತದೆ, ಮೇಲ್ಮಣ್ಣಿನ ರಕ್ಷಣೆ ಮಾಡುತ್ತದೆ. ಬೆಳೆಗಳ ಕೆಳಗೆ ದ್ವಿದಳ ಧಾನ್ಯದ ಬೆಳೆಗಳನ್ನು ಬೆಳೆಸಿದರೆ ಕಳೆ ಕಡಿಮೆ ಮಾಡುವುದರ ಜೊತೆಗೆ ಮುಖ್ಯ ಬೆಳೆಗಳಿಗೆ ಸಾರಜನಕ ಪೂರೈಸುತ್ತದೆ. ಈ ಹೊದಿಕೆ ವಾತಾವರಣದ ಆದ್ರತೆಯನ್ನೂ ಕಾಪಾಡಲೂ ನೆರವಾಗುತ್ತದೆ. ಬಳ್ಳಿಗಳು ನೆಲಕ್ಕೆ ವೇಗವಾಗಿ ಹಬ್ಬುವುದರ ಜೊತೆಗೆ ಸೂರ್ಯನ ನೇರಳಾತೀತ ಕಿರಣಗಳು ಮಣ್ಣಿಗೆ ತಾಕದಂತೆ ನೋಡಿಕೊಳ್ಳುತ್ತದೆ ಎಂದು ರೈತರಿಗೆ ಉ(ಖ)ಚಿತ ಮಾಹಿತಿ ನೀಡಲಾಗುತ್ತದೆ.

**ಪರಿಸರಕ್ಕೆ ಪುರಕವಾಗುವ ಸಾಂಪ್ರದಾಯಕ ಕೃಷಿ ಪದ್ಧತಿ**

ಮಿಶ್ರ ಬೆಳೆಗಳ ಬಿತ್ತನೆ ಪದ್ಧತಿ ಲಾಭದಾಯಕವೂ ಆಗಿರುವುದರ ಜೊತೆಗೆ ಮಣ್ಣಿಗೆ ಫಲವತ್ತತೆ ತುಂಬುವ ವಿಧಾನವೂ ಆಗಿದೆ ಎನ್ನುತ್ತಾರೆ. ಸಾಮಾನ್ಯವಾಗಿ ಮುಂಗಾರು ಮಳೆಗೆ ಬಿತ್ತನೆ ಮಾಡುವ ಈ ಪದ್ಧತಿಯಲ್ಲಿ ಸಜ್ಜೆಯೊಂದಿಗೆ ಜೋಳ ಸೇರಿಸಿ ಬಿತ್ತನೆ ಮಾಡುವುದರ ಜೊತೆಗೆ ಎಳ್ಳು, ತೊಗರೆ, ಔಡಲ, ಮಡಿಕೆ, ಅಲಸಂದೆ, ಹೆಸರುಗಳಂತಹ ತರಾವರಿ ದ್ವಿದಳ ಧಾನ್ಯಗಳನ್ನೂ ಬಿತ್ತನೆ ಮಾಡಬಹುದು. ಎರಡನೇ ಮಳೆ ಹೊತ್ತಿಗೆ ಆ ಬೀಜಗಳೆಲ್ಲಾ ಮೊಳೆತು ಗೇಣೆತ್ತರ ಬೆಳೆದಿರುತ್ತವೆ. ಸಾಲದ್ದಕ್ಕೆ ಸಾಲಿನ ಮಧ್ಯದಲ್ಲಿ ಎಡೆಕುಂಟೆ ಹೊಡೆದು ಹುರುಳಿ ಬಿತ್ತನೆ ಮಾಡಬಹುದು. ಮೊದಲ ಬೆಳೆಯಾಗಿ ಹೊಟ್ಟೆಗೆ ಹಿಟ್ಟು ನೀಡುವ ಜೋಳ–ಸಜ್ಜೆ ಬಂದರೆ, ಎರಡನೇ ಬೆಳೆಯಾಗಿ ಹಣ ತರುವ ಎಳ್ಳು ಕೈ ಸೇರುತ್ತದೆ. ಹೀಗೆ ಒಂದರ ಹಿಂದೆ ಒಂದರಂತೆ ಹಂತ ಹಂತವಾಗಿ ಹೆಸರು, ಅಲಸಂದೆ, ಮಡಿಕೆ ಬೆಳೆಗಳು ಕೊಯ್ಲಿಗೆ ಬರುತ್ತವೆ. ಜೊತೆಗೆ ದನಕರುಗಳಿಗೆ ಹೊಟ್ಟು–ಮೇವು ಸಿಗುತ್ತದೆ. ಇದರ ಬಳಿಕ ಬೆಳೆಗಳ ಅಡಿಯಲ್ಲಿ ಹುರುಳಿ ಸೊಗಸಾಗಿ ಬೆಳೆದಿರುತ್ತದೆ.

**ವಿಶ್ವವಿದ್ಯಾಲಯಗಳಲ್ಲಿ ಆವಿಷ್ಕರಿಸಿದ ತಂತ್ರಜ್ಞಾನ ಎಲ್ಲರಿಗೂ ತಿಳಿಯಬೇಕು:**

ಕೃಷಿ ವಿಜ್ಞಾನಕ್ಕೆ ಸಾಕ್ಷರತೆಯ ರೂಪ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಆವಿಷ್ಕರಿಸಿದ ತಂತ್ರಜ್ಞಾನ ರೈತರಿಗಷ್ಟೇ ಅಲ್ಲದೇ ಎಲ್ಲ ವರ್ಗದ ಜನರ ಕೈ ತಲುಪುವಂತಾಗಬೇಕು ಎಂದು ಸಿದ್ಧಾರೂಢ ಸಾವಯವ ಕೃಷಿಕರ ಬಳಗದ ಮಾರ್ಗದರ್ಶಕ ಶಿವರಾಜ ಹುನಿಗುಂದ ಹೇಳುತ್ತಾರೆ. ಕೃಷಿ ಪದವಿ ಪಡೆದವರೆಲ್ಲರೂ ತಿಳಿವಳಿಕೆ ಹೊಂದಿರುವುದಿಲ್ಲ. ಆದರೆ ಯಾವುದೇ ಪದವಿಯಿಲ್ಲದ ರೈತರು ಅಪಾರ ಜ್ಞಾನ ಸಂಪಾದಿಸಿಕೊಂಡಿರುತ್ತಾರೆ. ಇದನ್ನು ವಿಜ್ಞಾನಿಗಳು ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿದ್ದು, ಅವರಲ್ಲಿರುವ ದೇಶಿ ತಳಿಗಳ ಮಾಲೀಕತ್ವ ಹೊಂದಲು ಸಹಾಯವಾಗುತ್ತದೆ ಎಂದು ಹೇಳುತ್ತಾರೆ.

**ಓದಿದ್ದು ಮೂರನೇ ತರಗತಿ ಸಾಧಿಸಿದ್ದು ಬಹಳ:** ಕೇವಲ ಮೂರನೇ ತರಗತಿವರೆಗೆ ಓದಿರುವ ಶಂಕರ ಲಂಗಟಿ ಸಿದ್ಧಾರೂಢ ಸಾವಯವ ಕೃಷಿಕರ ಬಳಗದ ನಲವತ್ತು ಜನ ಸದಸ್ಯರಲ್ಲಿ ಮುಂಚೂಣಿಯಲ್ಲಿ ಕಾಣುತ್ತಾರೆ.ಕೃಷಿ ಸಾಲದಿಂದ ತಂದೆಯವರ ಸಾವು ಕಂಡಾಗ ಹದಿನಾಲ್ಕರ ವಯಸ್ಸಿನಲ್ಲಿದ್ದ ಶಂಕರ ಲಂಗಟಿ ಅವರಿಗೆ ತಂದೆ ಮಾಡಿದ ಸಾಲವನ್ನು ತೀರಿಸುವುದರ ಜೊತೆಗೆ ಬದುಕನ್ನೂ ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇತ್ತು.

ದೇಶೀಯ ಕೃಷಿಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಲಂಗಟಿ ಭತ್ತದ ನಾಟಿ ತಳಿಗಳ ಸಂಗ್ರಹಣೆಯಲ್ಲಿ ಹೆಚ್ಚು ಪರಿಶ್ರಮಪಟ್ಟರು. ತಮ್ಮ ನಾಲ್ಕು ಎಕರೆ ಹೊಲದಲ್ಲಿ ಈಗ ಆಹಾರ ಬೆಳೆಗಳ ಫಸಲು. ಭತ್ತದ ಜೊತೆಗೆ ತರಕಾರಿ ಹಾಗೂ ತೊಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದೆಲ್ಲದರ ಜೊತೆಗೆ ತಮ್ಮ ಮಕ್ಕಳನ್ನೂ ಕೃಷಿಯಲ್ಲೇ ಮುಂದುವರಿಯುವಂತೆ ಪ್ರೋತ್ಸಾಹಿಸುತ್ತಿದ್ದಾರೆ.



# "ನೀರಿಗಾಗಿ ಅರಣ್ಯ"
## ಸರ್ಕಾರದಿಂದ ವನಮಹೋತ್ಸವ



ಜೀವಸಂಕುಲದ ಆರಂಭವೇ ಕಾಡಿನಿಂದ. ಶಿಲಾಯುಗದಲ್ಲಿ ಮನುಷ್ಯ ಕಾಡಿನಲ್ಲಿ ಕಾಡಿನೊಂದಿಗೆ ಜೀವನ ಕಟ್ಟಿಕೊಂಡು ನಾಗರೀಕತೆ ಹೆಚ್ಚಿದಂತೆಲ್ಲಾ ತಾನು ಬೆಳೆದುಬಂದ ಕಾಡನ್ನೇ ನಾಶ ಮಾಡಲು ನಿಂತಿದ್ದಾನೆ. ಅದಕ್ಕೆ ತಕ್ಕಂತೆ ಪ್ರಕೃತಿಯ ಮುನಿಸನ್ನು ಹೆದುರಿಸುತ್ತಿದ್ದಾನೆ. ಕಾಡು ಉಳಿದರೆ ನಾಡು ಉಳಿದಿತು ಎಂದು ಪಠ್ಯಕ್ರಮದಲ್ಲಿ ಹೇಳಿಕೊಡುತ್ತಿದ್ದ ಗಂಭೀರತೆ ಸತ್ಯ ಇಂದು ನಮ್ಮ ಕಣ್ಣೆದುರೆ ಬಂದು ನಿಂತಿದೆ.

2016–17ರಲ್ಲಿ ಮಳೆ ಕೊರತೆಯಿಂದ ರಾಜ್ಯದ 136 ತಾಲ್ಲೂಕುಗಳು ಬರಪೀಡಿತವಾಗಿದ್ದವು. ಈ ವರ್ಷ ಅದೇ ರೀತಿ ಪರಿಸ್ಥಿತಿ ಮರುಕಳಿಸುವ ಆತಂಕವಿದೆ. ಈಗಾಗಲೇ ಮುಂಗಾರು ಕ್ಷೀಣಿಸಿ ರೈತ ಕಂಗಾಲಾಗಿದ್ದಾನೆ. ಇನ್ನೊಂದು ತಿಂಗಳು ಮಳೆ ಬರದೆ ಇದ್ದರೆ ಬಿತ್ತನೆಯಲ್ಲಿ ಕುಂಠಿತವಾಗಿ ಆಹಾರೋತ್ಪಾದನೆಯಲ್ಲಿ ಇಳಿ ಮುಖವಾಗುವ ಮುನ್ಸೂಚನೆಯಿದೆ.

ಇತ್ತೀಚಿನ ವರ್ಷಗಳಲ್ಲಿ ಮಳೆಯ ಕೊರತೆಯಿಂದ ಬರಗಾಲ ತೀವ್ರವಾಗುವುದು ಸಾಮಾನ್ಯ ಎಂಬಂತಾಗಿದೆ. ಮಳೆ ಕೊರೆತೆಗೆ

**ಕಾಡು ನಾಶದಿಂದ ಪರಿಸರ ಅಸಮತೋಲನ ಹೆಚ್ಚುತ್ತಿರುವುದಷ್ಟೇ ಅಲ್ಲದೆ, ಜಾಗತಿಕ ತಾಪಮಾನ, ಹವಮಾನ ವೈಪರಿತ್ಯದ ಅಡ್ಡಪರಿಣಾಮಗಳನ್ನು ಹೆದುರಿಸುತ್ತಿದ್ದೇವೆ. ಇವೆಲ್ಲವನ್ನು ಸರಿತೂಗಿಸಬೇಕಾದರೆ ಕಾಡು ಬೆಳೆಸುವುದು ಅನಿವಾರ್ಯವಾಗಿದೆ.**

ಉಮೇಶ್ ಕೋಲಿಗೆರೆ



ಪ್ರಮುಖವಾಗಿ ಕೇಳಿ ಬರುತ್ತಿರುವ ಕಾರಣಗಳಲ್ಲಿ ಕಾಡಿನ ಪ್ರಮಾಣ ಕಡಿಮೆಯಾಗಿರುವುದು. ಕಾಡಿಗೂ ಮಳೆಗೂ ಅವಿನಾಭಾವ ನಂಟಿದೆ ಎಂದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಕಾಡು ನಾಶದಿಂದ ಪರಿಸರ ಅಸಮತೋಲನ ಹೆಚ್ಚುತ್ತಿರುವುದಷ್ಟೇ ಅಲ್ಲದೆ, ಜಾಗತಿಕ ತಾಪಮಾನ, ಹವಮಾನ ವೈಪರಿತ್ಯದ ಅಡ್ಡಪರಿಣಾಮಗಳನ್ನು ಹೆದುರಿಸುತ್ತಿದ್ದೇವೆ. ಇವೆಲ್ಲವನ್ನು ಸರಿತೂಗಿಸಬೇಕಾದರೆ ಕಾಡು ಬೆಳೆಸುವುದು ಅನಿವಾರ್ಯವಾಗಿದೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಪ್ರತಿವರ್ಷ ವನಮಹೋತ್ಸವ ಆಚರಿಸುತ್ತಿದೆ. ಮಳೆಯ ಕೊರತೆಯನ್ನು ಪ್ರಮುಖ ವಸ್ತುವನ್ನಾಗಿಟ್ಟುಕೊಂಡು 2017–18ನೆ ಸಾಲಿನ ವನಮಹೋತ್ಸವಕ್ಕೆ ನೀರಿಗಾಗಿ ಅರಣ್ಯ ಎಂಬ ಘೋಷ ವಾಕ್ಯ ನೀಡಲಾಗಿದೆ. ಈ ಮೂಲಕ ನೀರು ಬೇಕಾದರೆ ಅರಣ್ಯ ಬೆಳೆಸಲು ಸಹಕರಿಸಿ ಎಂದು ಜನಜಾಗೃತಿ ಮೂಡಿಸಲಾಗುತ್ತಿದೆ. ಜುಲೈ 9ರಂದು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯಾದ್ಯಂತ ನಡೆಯುವ ವನ ಮಹೋತ್ಸವಕ್ಕೆ ಬೆಂಗಳೂರಿನ ಸ್ವತಂತ್ರ್ಯ ಉದ್ಯಾನವನದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಿದರು.

ಪರಿಸರ ಸಮತೋಲನ ಹಾಗೂ ಜೀವ ವೈವಿದ್ಯ ರಕ್ಷಣೆಗೆ ಭೌಗೋಳಿಕ ವಿಸ್ತೀರ್ಣದ ಶೇ.33ರಷ್ಟು ಅರಣ್ಯ ಪ್ರದೇಶವಿರಬೇಕು ಎಂಬ ಮಾನದಂಡಗಳಿವೆ. ಭಾರತದಲ್ಲಿ ಭೌಗೋಳಿಕ ವಿಸ್ತೀರ್ಣದ

**2017–18ನೆ ಸಾಲಿನ ವನ ಮಹೋತ್ಸವದಲ್ಲಿ ಕನಿಷ್ಠ ಏಳು ಕೋಟಿ ಗಿಡಗಳನ್ನು ನೆಡುವ ಗುರಿಯಿದೆ. ಇದರಲ್ಲಿ ಶೇ.60ರಷ್ಟು ಗಿಡಗಳನ್ನು ರೈತರಿಗೆ ವಿತರಿಸಲಾಗುತ್ತದೆ. ಬೇಡಿಕೆ ಬಂದರೆ ಇನ್ನಷ್ಟು ಗಿಡಗಳನ್ನು ನೀಡಲು ಸಿದ್ದತೆ ನಡೆಸಲಾಗಿದೆ. ರೈತರಿಗೆ ಗಿಡಗಳನ್ನು ಹಂಚುವ ಜೊತೆಗೆ ಅರಣ್ಯ ಇಲಾಖೆ ತಾನೇ ನೇರವಾಗಿ ರಸ್ತೆ ಬದಿಗಳಲ್ಲಿ, ಖಾಲಿ ಜಾಗಗಳಲ್ಲಿ, ಖರಾಬು ಭೂಮಿಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ಸಸಿಗಳನ್ನು ನೆಡಲಿದೆ.**

ಶೇ.22ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಆಶಾದಾಯಕ ಸಂಗತಿ ಎಂದರೆ ಕರ್ನಾಟಕದಲ್ಲಿ ಇತ್ತೀಚೆಗೆ ಅರಣ್ಯ ಪ್ರದೇಶ ಗಣನೀಯವಾಗಿ ವಿಸ್ತರಣೆಯಾಗುತ್ತಿದೆ.

ಅದಕ್ಕೆ ಕಾರಣ ಅರಣ್ಯ ಇಲಾಖೆ ವನ ಮಹೋತ್ಸವದಲ್ಲಿ ಪ್ರತಿ ವರ್ಷ ಐದರಿಂದ ಆರು ಕೋಟಿ ಗಿಡ ನೆಡುತ್ತಿರುವುದು. ವನಮಹೋತ್ಸಹವಕ್ಕೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ರೈತರ, ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ



ಗಿಡ ನೆಡುವ ಕೆಲಸವನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ರಾಜಧಾನಿಯಲ್ಲಿ ವನಮಹೋತ್ಸವಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಿದ ಬೆನ್ನಲ್ಲೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲೂ ವನಮಹೋತ್ಸವ ಆಚರಿಸಲಾಗುತ್ತಿದೆ.

ಸನ್ಮಾನ್ಯ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಮೇಲೆ ಅರಣ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಮುಖ್ಯಮಂತ್ರಿಯವರ ಆಶಯಕ್ಕೆ ಹೆಗಲಾಗಿ ಅರಣ್ಯ ಇಲಾಖೆಯ ಸಚಿವ ರಮಾನಾಥ ರೈ ಅವರು ಕೂಡ ದುಡಿಯುತ್ತಿದ್ದಾರೆ.

ರಾಜ್ಯ ಸರ್ಕಾರದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಅರಣ್ಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅರಣ್ಯ ಇಲಾಖೆ ರಿಯಾಯಿತಿ ದರದಲ್ಲಿ ನೀಡುವ ಗಿಡಗಳನ್ನು ಪಡೆದು ರೈತ ತನ್ನ ಜಮೀನಿನಲ್ಲಿ ನೆಟ್ಟು ಬೆಳೆಸುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಹೆಚ್ಚು ಆಕರ್ಷಣೀಯವಾಗಿದೆ. ತನ್ನ ಜಮೀನಿನಲ್ಲಿ ಗಿಡ ನೆಟ್ಟು ಬೆಳೆಸಿದರೆ ಅದಕ್ಕೆ ಪ್ರೋತ್ಸಾಹಕವಾಗಿ ಸರ್ಕಾರ ಮೂರು ವರ್ಷಗಳವರೆಗೂ ಆರ್ಥಿಕ ನೆರವು ನೀಡಲಿದೆ. ಒಂದು ಗಿಡ ನೆಟ್ಟು ಅದನ್ನು ಉಳಿಸಿ ಬೆಳೆಸಿದರೆ ಮೊದಲ ಮತ್ತು ಎರಡನೆ ವರ್ಷ ತಲಾ 30 ರೂ.ನಂತೆ ಮೂರನೆ ವರ್ಷ 40 ರೂ.ನಂತೆ ಒಟ್ಟು 100 ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ. ಪ್ರತಿಯೊಬ್ಬ ರೈತನೂ 500 ರಿಂದ 2 ಸಾವಿರದ ವರೆಗೂ ಗಿಡಗಳನ್ನು ಪಡೆದು ಬೆಳಸಬಹುದು. ಯಾವುದೇ ಬಗೆಯ ಗಿಡಗಳನ್ನು ಕೇಳಿದರು ನೀಡಲು ಅರಣ್ಯ ಇಲಾಖೆ ಸಿದ್ಧವಿದೆ. ಒಂದು ಗಿಡ ಬೆಳೆಸಲು ಕನಿಷ್ಠವೆಂದರೂ 8.50 ರೂ. ವೆಚ್ಚ ತಗುಲಲಿದೆ, ಆದರೆ ರೈತರ ಅನುಕೂಲಕ್ಕಾಗಿ 1, 3, 5 ರೂ. ರಿಯಾಯಿತಿ ದರದಲ್ಲಿ ಗಿಡಗಳನ್ನು ಪೂರೈಸಲಾಗುತ್ತಿದೆ ಎನ್ನುತ್ತಾರೆ ಅರಣ್ಯ ಇಲಾಖೆಯ ಅಭಿವೃದ್ಧಿ ಅಧಿಕಾರಿ ಕಾಂತರಾಜು.

ಗಿಡ ಬೆಳೆಸುವ ರೈತನಿಗೆ ಪ್ರೋತ್ಸಾಹ ಧನ ನೀಡಿದಂತೆ ಗಿಡ ನೆಡಲು ಪ್ರೇರೆಪಣೆ ನೀಡುವ ವ್ಯಕ್ತಿಗಳು, ಸಂಘ ಸಂಸ್ಥೆಗಳಿಗೂ ಅರಣ್ಯ ಇಲಾಖೆ ಪ್ರೋತ್ಸಾಹ ಧನ ನೀಡುತ್ತಿದೆ. ಅರಣ್ಯಾಭಿವೃದ್ಧಿಗೆ





ನೆರವಾದವರಿಗೆ ಮೊದಲ ವರ್ಷ ಗಿಡವೊಂದಕ್ಕೆ 2 ರೂ., ಅನಂತರ ಮೂರರಿಂದ ಐದು ವರ್ಷಗಳವರೆಗೆ ತಲಾ 1 ರೂ.ನಂತೆ ಒಟ್ಟು 5 ರೂ.ಗಳನ್ನು ಸರ್ಕಾರ ನೀಡುತ್ತಿದೆ.

2017–18ನೆ ಸಾಲಿನ ವನ ಮಹೋತ್ಸವದಲ್ಲಿ ಕನಿಷ್ಠ ಏಳು ಕೋಟಿ ಗಿಡಗಳನ್ನು ನೆಡುವ ಗುರಿಯಿದೆ. ಇದರಲ್ಲಿ ಶೇ.60ರಷ್ಟು ಗಿಡಗಳನ್ನು ರೈತರಿಗೆ ವಿತರಿಸಲಾಗುತ್ತದೆ. ಬೇಡಿಕೆ ಬಂದರೆ ಇನ್ನಷ್ಟು ಗಿಡಗಳನ್ನು ನೀಡಲು ಸಿದ್ದತೆ ನಡೆಸಲಾಗಿದೆ. ರೈತರಿಗೆ ಗಿಡಗಳನ್ನು ಹಂಚುವ ಜೊತೆಗೆ ಅರಣ್ಯ ಇಲಾಖೆ ತಾನೇ ನೇರವಾಗಿ ರಸ್ತೆ ಬದಿಗಳಲ್ಲಿ, ಖಾಲಿ ಜಾಗಗಳಲ್ಲಿ, ಖರಾಬು ಭೂಮಿಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ಸಸಿಗಳನ್ನು ನೆಡಲಿದೆ. ಶಾಲಾ ಕಾಲೇಜುಗಳ ಸಹಕಾರದಲ್ಲೂ ವನ ಮಹೋತ್ಸಹ ನಡೆಸಲಾಗುತ್ತಿದೆ. ಈ ವರ್ಷ ಬೀಜದುಂಡೆಗಳನ್ನು ವಿತರಿಸುವ ಕಾರ್ಯಕ್ರಮವನ್ನು ಪರಿಣಾಕಾರಿಯಾಗಿ ಜಾರಿಗೊಳಿಸಲು ಇಲಾಖೆ ಪಣ ತೊಟ್ಟಿದೆ. ಹಿಂದೆಲ್ಲಾ ಅಲಂಕಾರಿಕ ಗಿಡಗಳ ಬೀಜದುಂಡೆಗಳನ್ನು ಸಿದ್ದಪಡಿಸಿ ಹಂಚಿಕೆ ಮಾಡಲಾಗುತ್ತಿತ್ತು. ಅದಕ್ಕೆ ನಗರ ಪ್ರದೇಶದಲ್ಲಷ್ಟೇ ಬೇಡಿಕೆ ಬಂದಿತ್ತು. ಈ ವರ್ಷ ಗ್ರಾಮೀಣ ಭಾಗಕ್ಕೆ ಬೇಕಾಗುವ ಅರಣ್ಯ ಮರಗಳ ಲಕ್ಷಾಂತರ ಬೀಜದುಂಡೆಗಳನ್ನು ಸಿದ್ದ ಪಡಿಸಲಾಗಿದೆ.

ಕಳೆದ ವರ್ಷ ವನಮಹೋತ್ಸವದಲ್ಲಿ 6 ಕೋಟಿ ಗಿಡ ನೆಡಲಾಗಿದೆ. ಅದರಲ್ಲಿ ಶೇ.60ರಷ್ಟು ಉಳಿದುಕೊಂಡು ಬೆಳೆಯುತ್ತಿವೆ ಎಂಬ ಅಂದಾಜಿದೆ. ಮಳೆ ಕೊರತೆ ಅರಣ್ಯಾಭಿವೃದ್ಧಿಗೆ ಪ್ರಮುಖ ಸವಾಲಾಗಿದೆ. ಸತತವಾಗಿ ನಾಲ್ಕು ವರ್ಷಗಳಿಂದ ಮಳೆಯಿಲ್ಲದೆ ಬರದ ಛಾಯೆ ಆವರಿಸಿದೆ. ನೆಟ್ಟ ಗಿಡಗಳಲ್ಲಿ ಬಹುತೇಕ ಒಣಗಿ ಹೋಗುತ್ತಿವೆ. ಸಾಧ್ಯವಿರುವ ಕಡೆ ಅರಣ್ಯ ಸಿಬ್ಬಂದಿಗಳು ನೀರು ಒತ್ತೋಯ್ದು ಗಿಡಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಪ್ರಕೃತಿಯ ಮುನಿಸಿನ ನಡುವೆ ಕಾಡಿನ ಪ್ರಮಾಣ ಹೆಚ್ಚಿಸುವ ಪ್ರಯತ್ನವನ್ನು ಅರಣ್ಯ ಇಲಾಖೆ ನಿರಂತರವಾಗಿ ಕೈಗೆತ್ತಿಕೊಳ್ಳುತ್ತಲೆ ಇದೆ. ಈ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿದೆ ಎಂದು ಹೇಳಲಾಗದಿದ್ದರೂ, ಗರಿಷ್ಠ ಮಟ್ಟದ ಫಲ ನೀಡಿದೆ ಎಂಬುದಂತು ನಿಜ. ಇತ್ತೀಚೆಗೆ ಫಾರೆಸ್ಟ್ ಸರ್ವೇ ಆಫ್ ಇಂಡಿಯಾ ಬಿಡುಗಡೆ ಮಾಡಿದ ಅಂಕಿ ಅಂಶಗಳು

ಕರ್ನಾಟಕದಲ್ಲಿ ಅರಣ್ಯ ಪ್ರದೇಶ ಹೆಚ್ಚುಗುತ್ತಿರುವುದನ್ನು ಸ್ಪಷ್ಟ ಪಡಿಸಿವೆ.

ಡೆಹರಾಡೂನ್‌ನ ಫಾರೆಸ್ಟ್ ಸರ್ವೇ ಆಫ್ ಇಂಡಿಯಾ 2013ರಲ್ಲಿ ಬಿಡುಗಡೆ ಮಾಡಿದ ಸಮೀಕ್ಷಾ ವರದಿಯ ಪ್ರಕಾರ ರಾಜ್ಯದಲ್ಲಿ 36,132 ಚದುರ ಕಿಲೋ ಮೀಟರ್ ಅರಣ್ಯ ಪ್ರದೇಶವಿತ್ತು. ಇತ್ತೀಚೆಗೆ ಅದು 43 ಸಾವಿರ ಚ.ಕಿ.ಮೀ.ಗೆ ಹೆಚ್ಚಾಗಿದೆ. ಸರಿ ಸುಮಾರು ಆರು ಸಾವಿರ ಚ.ಕಿ.ಮೀ ಅರಣ್ಯ ಪ್ರದೇಶ ವಿಸ್ತರಣೆಯಾಗಿ ಶೇ.3ರಷ್ಟು ಬೆಳವಣಿಗೆಯ ದರ ಏರಿಕೆಯಾಗಿದೆ.

ರಾಜ್ಯದ ಭೌಗೋಳಿಕ ವಿಸ್ತೀರ್ಣ 1,91,791 ಚ.ಕಿ.ಮಿ. 2013ರ ಅಧ್ಯಯನ ವರದಿಯಂತೆ ಭೌಗೋಳಿಕ ವಿಸ್ತೀರ್ಣದ ಶೇ.18.84ರಷ್ಟು ಅರಣ್ಯ ಪ್ರದೇಶ ಕರ್ನಾಟಕದಲ್ಲಿತ್ತು. ಇತ್ತೀಚಿನ ಅಂಕಿ ಸಂಖ್ಯೆಗಳ ಪ್ರಕಾರ 29,688.37 ಚ.ಕಿ.ಮೀ. ಕಾಯ್ದಿಟ್ಟ ಅರಣ್ಯ ಪ್ರದೇಶ ಹಾಗೂ 13,668.10 ಚ.ಕಿ.ಮೀ ಸಂರಕ್ಷಿತ ಅರಣ್ಯ ಪ್ರದೇಶ ಸೇರಿ ಒಟ್ಟು 43,356.47 ಚ.ಕಿ.ಮೀ ಅರಣ್ಯ ಪ್ರದೇಶವನ್ನು ಕರ್ನಾಟಕ ಹೊಂದಿದೆ. ಅಂದರೆ ಭೌಗೋಳಿಕ ವಿಸ್ತೀರ್ಣದ ಶೇ.22.60ರಷ್ಟು ರಾಜ್ಯದಲ್ಲಿ ಅರಣ್ಯವಿದೆ.

ಅಂತರಾಷ್ಟ್ರೀಯ ಮಾನದಂಡಗಳ ಪ್ರಕಾರ ಭೂ ವಿಸ್ತೀರ್ಣದ ಶೇ.33ರಷ್ಟು ಅರಣ್ಯ ಪ್ರದೇಶ ಇರಬೇಕು ಎಂದಾದರೆ ರಾಜ್ಯದಲ್ಲಿ 63,930 ಚ.ಕಿ.ಮೀ. ಅರಣ್ಯ ಇರಲೇ ಬೇಕಿತ್ತು. ಸತತ ಪ್ರಯತ್ನದ ನಡುವೆಯೂ ಶೇ.11ರಷ್ಟು ಅರಣ್ಯದ ಕೊರತೆಯನ್ನು ಕರ್ನಾಟಕ ಎದುರಿಸುತ್ತಿದೆ.

ಈ ಮಧ್ಯೆ ಸಂತೋಷದ ವಿಷಯವೆಂದರೆ ವನ್ಯಜೀವಿಗಳ ರಕ್ಷಣೆಯಲ್ಲಿ ಕರ್ನಾಟಕ ದೇಶದ ಗಮನ ಸೆಳೆದಿದೆ. ಭಾರತದಲ್ಲೇ ಅತಿ ಹೆಚ್ಚು ಹುಲಿ, ಆನೆ, ಕರಡಿಗಳನ್ನು ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ಜೊತೆಗೆ ಸಿಂಗಲೀಕ, ನವಿಲು, ಚಿರತೆಯಂತಹ ವನ್ಯ ಸಂಕುಲದ ಸಂತತಿಯೂ ಹೆಚ್ಚುತ್ತಿದೆ.

ವನ್ಯಜೀವಿಗಳ ಸಂತತಿ ಏರಿಕೆಗೆ ಅನುಗುಣವಾಗಿ ಲೆಕ್ಕ ಹಾಕಿದರೆ ರಾಜ್ಯದಲ್ಲಿ ಕನಿಷ್ಠ ಶೇ.40ರಷ್ಟು ಅರಣ್ಯ ಪ್ರದೇಶ ಇರಬೇಕಿದೆ. ಕಾಡಿನಲ್ಲಿ ವನ್ಯಜೀವಿಗಳಿಗೆ ಅಗತ್ಯವಾದ ಆಹಾರ, ನೀರು ದೊರೆಯುವಂತೆ ಮಾಡಬೇಕಿದೆ. ಮಳೆಯ ಕೊರತೆಯಿಂದ ಕಾಡುಗಳು ಒಣಗಿ ಹೋಗುತ್ತಿವೆ, ಅಲ್ಲಿ ನೀರು, ಆಹಾರ ಸಿಗದೆ ಪ್ರಾಣಿಗಳು ನಾಡಿಗೆ ನುಗ್ಗುತ್ತಿವೆ. ವನ್ಯ ಜೀವಿ–ಮಾನವ ಸಂಘರ್ಷ ಹೆಚ್ಚುತ್ತಿದೆ. ಕಾಡಂಚಿನ ಕೃಷಿ ಭೂಮಿಗಳ ಮೇಲೆ ಆನೆ, ಜಿಂಕೆಗಳಂತಹ ವನ್ಯಜೀವಿಗಳ ದಾಳಿಯಿಂದ ರೈತರು ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಆನೆ, ಹುಲಿ, ಚಿರತೆ, ಸಿಂಹಗಳ ದಾಳಿಯಿಂದ ನೂರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ.

ಕಾಡುನ್ನು ನಾಶ ಮಾಡಿದರೆ ಪರಿಸರ ಅಸಮತೋಲನವಷ್ಟೇ ಅಲ್ಲ, ವನ್ಯಜೀವಿ–ಮಾನವ ಸಂಘರ್ಷವೂ ಹೆಚ್ಚಾಗಲಿದೆ ಎಂಬ ಪಾಠವನ್ನು ಸಮಾಜ ಇತ್ತೀಚೆಗೆ ಮನವರಿಕೆ ಮಾಡಿಕೊಂಡಿದೆ. ವನ್ಯಜೀವಿಗಳು ಕಾಡು ಬಿಟ್ಟು ಹೊರ ಬರದಂತೆ ಮಾಡಲು ಅರಣ್ಯ ಇಲಾಖೆ ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿದೆ. ಆದರೂ ಕೈ ಮೀರಿ ಕೆಲವು ವನ್ಯ ಜೀವಿಗಳು ನಾಡಿಗೆ ಲಗ್ಗೆಯಿಡುತ್ತಿವೆ.

ಕಾಡನ್ನು ಬೆಳೆಸುವುದು ಒಂದು ಸವಾಲಾದರೆ ಇರುವ ಅರಣ್ಯವನ್ನು ಉಳಿಸಿಕೊಳ್ಳುವುದು ಮತ್ತೊಂದು ಸವಾಲಾಗಿದೆ. ಅರಣ್ಯ ರಕ್ಷಣೆಗೆ "ಕರ್ನಾಟಕ ಫಾರೆಸ್ಟ್ ಆಕ್ಟ್ 1963" "ಇಂಡಿಯನ್ ಫಾರೆಸ್ಟ್ ಆಕ್ಟ್ 1917" "ವನ್ಯಜೀವಿ ಸಂರಕ್ಷಣಾ ಕಾಯ್ದೆ" ಸೇರಿದಂತೆ ಹಲವಾರು ಕಾನೂನುಗಳು ಜಾರಿಯಲ್ಲಿವೆ. ಇವುಗಳಿಗೆ ಕಾಲ ಕಾಲಕ್ಕೆ ತಿದ್ದುಪಡಿ ತಂದು ಪರಿಸ್ಥಿತಿಗೆ ಪೂರಕವಾಗಿ ಬದಲಾವಣೆ ಮಾಡಿಕೊಳ್ಳಲಾಗಿದೆ.

ನಾಗರಿಕತೆ ಬೆಳೆದಂತೆಲ್ಲಾ ಕಾಡಿನ ಮೇಲೆ ಒತ್ತಡ ಹೆಚ್ಚುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ಭಾಗದ ಒತ್ತುವರಿ ನಿರಂತರವಾಗಿ ನಡೆಯುತ್ತಿದೆ. ಈವರೆಗೂ ಸುಮಾರು 25 ಸಾವಿರ ಹೆಕ್ಟೇರ್ ಅರಣ್ಯ ಭೂಮಿ ಅಭಿವೃದ್ಧಿ ಕಾರ್ಯಗಳಿಗೆ ಅಧಿಕೃತವಾಗಿಯೇ ಬಳಕೆಯಾಗಿದೆ, ಇನ್ನೂ ರಸ್ತೆ ಅಗಲೀಕರಣದ ಉದ್ದೇಶದಿಂದ ತೆರವುಗೊಳಿಸಿದ ಮರಗಳ ಬದಲಿಗೆ ಪರ್ಯಾಯವಾಗಿ ಅರಣ್ಯ ಇಲಾಖೆ 28900 ಎಕರೆಯಲ್ಲಿ ಅರಣ್ಯ ಬೆಳೆಸಿದೆ.

ನಿರ್ಮಾಣ ಕಾರ್ಯಗಳಿಗೆ ಮರಗಳ ಬಳಕೆ ಹೆಚ್ಚುತ್ತಿದೆ. ಇನ್ನೊಂದು ಕಡೆ ಉರುವಲಿಗಾಗಿ ಮರಗಳನ್ನು ಕಡಿಯಲಾಗುತ್ತಿತ್ತು. ಅದನ್ನು ತಪ್ಪಿಸಲು ಅರಣ್ಯದಂಚಿನ 2 ಲಕ್ಷ ಕುಟುಂಬಗಳಿಗೆ ಅನಿಲ ಸಂಪರ್ಕಗಳನ್ನು ನೀಡಲಾಗಿದೆ. ಸೌರಶಕ್ತಿ ಸೇರಿ ನೈಸರ್ಗಿಕ ಶಕ್ತಿಗಳ ಬಳಕೆಗೆ ಶೇ.50ಕ್ಕಿಂತ ಹೆಚ್ಚು ರಿಯಾಯಿತಿಯನ್ನು ನೀಡಲಾಗಿದೆ.

ಪ್ರತಿವರ್ಷ 800 ರಿಂದ 1000 ಹೆಕ್ಟೇರ್ ಅರಣ್ಯ ಬೆಳೆಸುವ ಗುರಿಯೊಂದಿಗೆ ಅರಣ್ಯ ಇಲಾಖೆ ವನಮಹೋತ್ಸವಗಳನ್ನು ಆಚರಿಸುತ್ತಲೇ ಬಂದಿದೆ. 35 ಬಗೆಯ ಕಾಡುಗಳನ್ನು ಅಧಿಸೂಚಿಸಲಾಗಿದ್ದರು, ರಾಜ್ಯದಲ್ಲಿ 17 ಬಗೆಯ ಕಾಡುಗಳು ಅಸ್ತಿತ್ವದಲ್ಲಿವೆ. ರಾಷ್ಟ್ರೀಯ ಉದ್ಯಾನವನಗಳು, ವನ್ಯಜೀವಿ ಧಾಮಗಳು, ಗುಂಡುತೋಪು, ನೆಡುತೋಪು, ಅಭಯಾರಣ್ಯ ಸೇರಿದಂತೆ ಹಲವು ವಿವಿಧದ ಕಾಡುಗಳಿವೆ.

ಭಾರತದಲ್ಲಿ ಲಕ್ಷದೀಪ್, ಅಂಡಮಾನ್ ನಿಕೋಬಾರ್ ಕೇಂದ್ರಾಡಳಿತ ಪ್ರದೇಶಗಳು ಶೇ.80ಕ್ಕಿಂತ ಹೆಚ್ಚಿನ ಕಾಡನ್ನು ಹೊಂದಿವೆ. ಕರ್ನಾಟಕದ ನೆರೆಯ ರಾಜ್ಯಗಳಾದ ಗೋವಾ ಶೇ.60, ಕೇರಳ ಶೇ.46 ರಷ್ಟು ಅರಣ್ಯವನ್ನು ಹೊಂದಿದ್ದರೆ, ತಮಿಳುನಾಡು, ಅವಿಭಜಿತ ಆಂಧ್ರ ಪ್ರದೇಶ, ಮಹಾರಾಷ್ಟ್ರದಲ್ಲಿ ಶೇ.20ಷ್ಟನ್ನು ದಾಟಿಲ್ಲ.

ದೇಶದಲ್ಲೇ ರಾಜಸ್ಥಾನ ಹೊರತು ಪಡಿಸಿದರೆ ಅತಿ ಹೆಚ್ಚು ಬರಡು ಭೂಮಿಯನ್ನು ಹೊಂದಿರುವ ರಾಜ್ಯ ಕರ್ನಾಟಕ. ಈ ಆತಂಕದಿಂದ ಕಾಡಿನ ಬೆಳವಣಿಗೆಯ ದರವನ್ನು ಇನ್ನಷ್ಟು ತೀವ್ರಗೊಳಿಸಬೇಕಿದೆ. ಕಾಡುನಾಶದಿಂದ ಈಗಾಗಲೇ ಸಾಕಷ್ಟು ಪೆಟ್ಟು ತಿಂದಿದ್ದೇವೆ. ನಿತ್ಯಹರಿದ್ವರ್ಣ ಕಾಡುಗಳ ಭಾಗದಲ್ಲೂ ಮಳೆಯ ಕೊರತೆ ಸಾಮಾನ್ಯವಾಗಿದೆ. ಮಲೆನಾಡು, ಕರಾವಳಿ ಭಾಗದ ಜಿಲ್ಲೆಗಳಲ್ಲಿ ಬರ ಪೀಡಿತ ತಾಲ್ಲೂಕುಗಳನ್ನು ಘೋಷಿಸುವ ಪರಿಸ್ಥಿತಿ ಬಂದೊದಗಿದೆ. ಈಗಲಾದರೂ ಎಚ್ಚೆತ್ತುಕೊಂಡು ಅರಣ್ಯಾಭಿವೃದ್ಧಿಗೆ ಸರ್ಕಾರದ ಜೊತೆ ಕೈ ಜೊಡಿಸದಿದ್ದರೆ, ಮುಂದಿನ ಪೀಳಿಗೆಗೆ ನಾವು ಯಾವ ಪ್ರಾಕೃತಿಕ ಸಂಪತ್ತನ್ನು ಉಳಿಸಿರುವುದಿಲ್ಲ. ಕೆಲವೇ ದಶಕಗಳಲ್ಲಿ ಉಸಿರಾಟಕ್ಕೂ ಗಾಳಿಯನ್ನು ಖರೀದಿಸುವ ಪರಿಸ್ಥಿತಿಯನ್ನು ಹೆದುರಿಸಬೇಕಾಗಬಹುದು.



# ಅರಣ್ಯ ಹಕ್ಕು ಇನ್ನೂ ಸಾಫ್ಟ್

## ಅರಣ್ಯ ಹಕ್ಕು ಕಾಯಿದೆ ಅನುಷ್ಠಾನಕ್ಕೆ ಹೊಸ ತಂತ್ರಾಂಶ ನೀಡಿ ಮಾದರಿಯಾದ ಉತ್ತರ ಕನ್ನಡ ಜಿಲ್ಲೆ


**ಹಿಮಂತರಾಜು ಜಿ.**
ಸಹಾಯಕ ನಿರ್ದೇಶಕರು, ಕಾರವಾರ

'ಉಳುವವನೇ ಹೊಲದೊಡೆಯ' ಎಂದು ಸಾರಿದ ಸಮಾಜವಾದಿ ಚಿಂತನೆಯ ನೆಲ ನಮ್ಮದು. ಆದರೆ ತಲಾ ತಲಾಂತರಗಳಿಂದ ಭೂಮಿ ಹಕ್ಕು ಪಡೆಯದೇ ಇದ್ದ ಕಾಡಂಚಿನ ಅನುಸೂಚಿತ ಬುಡಕಟ್ಟು ಹಾಗೂ ಪಾರಂಪರಿಕ ಅರಣ್ಯ ವಾಸಿಗಳಿಗೆ ಸರ್ಕಾರ ಭೂಮಿಯ ಹಕ್ಕು ಕೊಡುವ ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿದ್ದು ಮಹತ್ವದ ಮೈಲಿಗಲ್ಲು.

ಆರಂಭದಲ್ಲಿ ಕಾಯಿದೆಯಲ್ಲಿನ ಕೆಲವು ಗೊಂದಲಗಳು ಕಾಯಿದೆ ಅನುಷ್ಠಾನಕ್ಕೆ ಸ್ವಲ್ಪ ಮಟ್ಟಿನ ಕುಂಟಿತವಾದರೂ 2012ರ ತಿದ್ದುಪಡಿ ಕಾಯಿದೆ ಅನುಷ್ಠಾನ ನಂತರ ವೇಗ ಪಡೆಯಿತು. ಆದರೂ ಪಾರಂಪರಿಕ ಅರಣ್ಯವಾಸಿಗಳು ತಮ್ಮ ಹಕ್ಕು ಪಡೆಯಲು ದಾಖಲೆಗಳೊಂದಿಗೆ ಸಲ್ಲಿಸಿದ ಅರ್ಜಿಗಳು ಒಂದೊಂದು ಹಂತದಲ್ಲೂ ಏನು ಆಗುತ್ತಿದೆ ಎಂಬುದು ಅರ್ಜಿದಾರರಿಗೆ ತಿಳಿಯದೆ ಅಥವಾ ಅರ್ಜಿದಾರರು ಸಲ್ಲಿಸಿದ ದಾಖಲೆ ಸಮಿತಿಯ ಮುಂದೆ ಸರಿಯಾಗಿ ಪರಿಶೀಲನೆಗೊಳ್ಳದೆಯೇ, ಹೀಗೆ ನಾನಾ ಕಾರಣಗಳಿಂದ ಮತ್ತಷ್ಟು ವಿಳಂಬಕ್ಕೆ ಕಾರಣವಾಗುತ್ತಿತ್ತು.

ಇದನ್ನು ಗಮನಿಸಿದ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಎಸ್.ಎಸ್.ನಕುಲ್ ಅವರು, ಅರ್ಜಿದಾರರ ದಾಖಲೆಗಳನ್ನು ಗಣಕೀರಣ ಮಾಡುವುದರಿಂದ ಈ





ವಿಳಂಬವನ್ನು ತಪ್ಪಿಸಬಹುದು ಮತ್ತು ಅರ್ಜಿದಾರರಿಗೆ ಹಕ್ಕು ದೊರಕಿಸಿ ಶೀಘ್ರ ನ್ಯಾಯ ಒದಗಿಸಬಹುದೆಂದು ಮನಗಂಡು ಅರಣ್ಯ ಹಕ್ಕು ಕಾಯಿದೆಗೇ ಪ್ರತ್ಯೇಕ ತಂತ್ರಾಂಶವೊಂದನ್ನು ಎನ್‌ಐಸಿ ಸಹಕಾರದಲ್ಲಿ ರೂಪಿಸಿದ್ದಾರೆ. ಅದೇ 'ಫಾರೆಸ್ಟ್ ರೈಟ್ಸ್ ಮಾನಿಟರಿಂಗ್ ಸಿಸ್ಟಂ'. ಕಾಯ್ದೆ ಅನುಷ್ಠಾನದಲ್ಲಿ ವೇಗ ಮತ್ತು ಸ್ಪಷ್ಟತೆ ಹಾಗೂ ಅರ್ಜಿದಾರರಿಗೆ ನಿಖರತೆ ಒದಗಿಸುವುದು ಈ ತಂತ್ರಾಂಶದ ಬಹುಮುಖ್ಯ ಲಕ್ಷಣ. ಈ ತಂತ್ರಾಂಶದ ಮೂಲಕ ಅರಣ್ಯ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಪ್ರತ್ಯೇಕ ತಂತ್ರಾಂಶ ಅಳವಡಿಸಿ ಉತ್ತರ ಕನ್ನಡ ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಿದೆ.

ಗ್ರಾಮ ಅರಣ್ಯ ಹಕ್ಕು ಸಮಿತಿಯಲ್ಲಿ ಬಂದ ಅರ್ಜಿಗಳನ್ನು ಗ್ರಾಮಸಭೆಯಲ್ಲಿ ಪರಿಶೀಲಿಸಿ ಅಲ್ಲಿಂದ ನೇರವಾಗಿ ವಿಭಾಗ ಮಟ್ಟದ ಕಚೇರಿಗೆ ಕಳಿಸಿ ಅಲ್ಲಿರುವ ಡಾಟಾ ಎಂಟ್ರಿ ಆಪರೇಟರ್ ಮೂಲಕ ಅರ್ಜಿದಾರರ ಸಂಪೂರ್ಣ ದಾಖಲೆಗಳು ಗಣಕೀಕರಣಗೊಳಿಸಲಾಗುತ್ತದೆ. ವಿಭಾಗ ಮಟ್ಟದಲ್ಲಿಯೇ ಕಾರ್ಯದರ್ಶಿಯಾಗಿರುವ ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಆ ಅರ್ಜಿಯನ್ನು ಪರಿಶೀಲಿಸಿ ಅರ್ಜಿದಾರರಿಗೆ ಒಂದು ವಿಶಿಷ್ಟ ಸಂಖ್ಯೆಯ ನಂಬರನ್ನು ಹಿಂಬರಹವಾಗಿ ನೀಡುತ್ತಾರೆ. ನಂತರ ವಿಭಾಗ ಮಟ್ಟದಲ್ಲಿ ಅನುಮೋದನೆಗೆ ಕಳುಹಿಸಲಾಗುತ್ತದೆ. ವಿಭಾಗ ಮಟ್ಟದಲ್ಲಿ ಅನುಮೋದನೆಗೊಂಡ ಅರ್ಜಿ ನೇರವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅನುಮೊದನೆ ಪಡೆದು ನೇರವಾಗಿ ಭೂಮಿ ತಂತ್ರಾಂಶಕ್ಕೆ ಕಳುಹಿಸಲಾಗುತ್ತದೆ. ಅಲ್ಲಿ ಅರ್ಜಿದಾರರಿಗೆ ತಮ್ಮ ಭೂಮಿಯ ಪಟ್ಟಾ ಮತ್ತು ಪಹಣಿ ಮುದ್ರಿತ ಪ್ರತಿ ಸಿಗುತ್ತದೆ.

ಈ ಎಲ್ಲ ಪ್ರಕ್ರಿಯೆಯನ್ನು ಅರ್ಜಿದಾರರು ತಮ್ಮ ಅರ್ಜಿ ಯಾವ ಹಂತದಲ್ಲಿದೆ ಎಂಬುದನ್ನು ತಾಲೂಕು ಮಟ್ಟದಲ್ಲಿ ತಮಗೆ ನೀಡಲಾಗುವ ವಿಶಿಷ್ಠ ಸಂಖ್ಯೆಯಿಂದ ಎಲ್ಲಿಂದಲೂ ನೋಡಲು ಅವಕಾಶವಿದೆ ಮತ್ತು ತಮ್ಮ ಅರ್ಜಿಯ ಎಲ್ಲ ದಾಖಲೆಗಳೂ ಗಣಕೀರಣಗೊಳ್ಳುವುದರಿಂದ ಮುಂದಿನ ಹಂತದಲ್ಲಿ ತಮ್ಮ ದಾಖಲೆಗಳು ಕೈತಪ್ಪುತ್ತವೆ ಎಂಬ ಆತಂಕವೂ ಇರುವುದಿಲ್ಲ. ಹೀಗೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಎಸ್.ಎಸ್.ನಕುಲ್ ಅವರ ಪರಿಕಲ್ಪನೆ ಸಾಕಾರಗೊಂಡಿದೆ.

2016 ಅಕ್ಟೋಬರ್ 31ಕ್ಕೆ ಅರ್ಜಿ ಸಲ್ಲಿಸಲು ನೀಡಲಾಗಿದ್ದ ವಾಯಿದೆ ಮುಗಿದಿದ್ದು ಇದೀಗ ರಾಜ್ಯಾದ್ಯಂತ ಅರ್ಜಿಗಳ ಪರಿಶೀಲನೆ ಹಂತ ನಡೆಯುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ 1176 ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದ್ದು, ನಗರ ಮತ್ತು ಪಟ್ಟಣ ಪ್ರದೇಶದಲ್ಲಿ 213 ವಾರ್ಡ್ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ. ಈವರೆಗೆ ಜಿಲ್ಲೆಯಲ್ಲಿ ಒಟ್ಟು 88,727 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಇತರೆ ಸರ್ವೆ ನಂಬರ್‌ನಲ್ಲಿ 10,516 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈವೆರೆಗೆ 31,511 ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, 57,216 ಅರ್ಜಿಗಳು ವಿವಿಧ ಕಾರಣಗಳಿಗಾಗಿ ಬಾಕಿ ಇವೆ. ಅಲ್ಲದೆ ಇದುವರೆಗೂ ಜಿಲ್ಲಾ ಮಟ್ಟದಲ್ಲಿ 2673 ಅರ್ಜಿಗಳನ್ನು ಮಾನ್ಯ ಮಾಡಿ ಶೇಕಡಾವಾರು ಹೆಚ್ಚು ಅರಣ್ಯ ಹಕ್ಕು ಪತ್ರಗಳನ್ನು ವಿತರಿಸುವ ಮೂಲಕ ಉತ್ತರ ಕನ್ನಡ ಜಿಲ್ಲೆ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ ಎಂಬುದು ಹೆಮ್ಮೆಯ ಸಂಗತಿ.





## ಅಲ್ಪ ನೀರಿನ ಸದ್ಬಳಕೆ :

# ಬರದಲ್ಲೂ ಬೃಹತ್ ಗೊನೆಯ ಭರ್ಜರಿ ಬಾಳೆ

ತುಕಾರಾಂರಾವ್ ಬಿ ಬಿ
ಸಹಾಯಕ ನಿರ್ದೇಶಕರು, ಕೊಪ್ಪಳ

ಲಭ್ಯವಿರುವ ಅಲ್ಪ ನೀರಿನಲ್ಲಿ ತೋಟಗಾರಿಕೆ ಇಲಾಖೆಯ ನೆರವಿನಲ್ಲಿ ಹೊಸ ತಂತ್ರಜ್ಞಾನ ಬಳಸಿ, ಬರದಲ್ಲೂ ಬೃಹತ್ ಗೊನೆಯ ಭರ್ಜರಿ ಬಾಳೆ ಬೆಳೆಯುವ ಮೂಲಕ ಕೊಪ್ಪಳ ತಾಲೂಕು ಕಾತರಕಿ–ಗುಡ್ಲಾನೂರ ಗ್ರಾಮದ ರೈತರು ಇತರೆ ರೈತರಿಗೆ ಮಾದರಿಯಾಗಿದ್ದಾರೆ.

ಈ ಕುರಿತಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪತ್ರಕರ್ತರಿಗೆ ಜುಲೈ 10 ರಂದು ವಿಶೇಷ ಮಾಧ್ಯಮ ಅಧ್ಯಯನ ಪ್ರವಾಸ ಏರ್ಪಡಿಸಲಾಗಿತ್ತು.

ಕೊಪ್ಪಳ ಜಿಲ್ಲೆ ತೋಟಗಾರಿಕೆಯಲ್ಲಿ ಹೆಸರು ಮಾಡಿದೆ. ಇಲ್ಲಿನ ಮಣ್ಣು ಮತ್ತು ವಾತಾವರಣ ತೋಟಗಾರಿಕೆ ಬೆಳೆಗಳಿಗೆ ಅತ್ಯಂತ ಸೂಕ್ತವಾಗಿದ್ದು, ತೋಟಗಾರಿಕೆ ಬೆಳೆಗಳಿಗೆ ಹೇಳಿ ಮಾಡಿಸಿದಂತಿದೆ. ಇಲಾಖೆಯ ಅನೇಕ ಯೋಜನೆಗಳು ಈ ಭಾಗದ ರೈತರಿಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಹಕಾರಿಯಾಗಿವೆ. ಅಧಿಕಾರಿಗಳ ಸತತ ಪರಿಶ್ರಮದಿಂದಾಗಿ ಹೆಚ್ಚು ಹೆಚ್ಚು ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆದು ಆರ್ಥಿಕ ಸುಸ್ಥಿರತೆ ಹಾಗೂ ಸ್ವಾವಲಂಬನೆಯ ಬದುಕು ಸಾಗಿಸುವಂತಾಗಿದೆ.

ಕೊಪ್ಪಳ ತಾಲೂಕು ಕಾತರಕಿ–ಗುಡ್ಲಾನೂರ ಗ್ರಾಮದ ರೈತರು ತಮ್ಮ ಜಮೀನಿನಲ್ಲಿ ಮೆಕ್ಕೆ ಜೋಳ, ಮೆಣಸಿನಕಾಯಿ, ಈರುಳ್ಳಿ ಮುಂತಾದ ಬೆಳೆಯುತ್ತಾ ಬಂದಿದ್ದರೂ ಕೃಷಿ ಅಷ್ಟೊಂದು ಲಾಭದಾಯಕ ಅನಿಸಿರಲಿಲ್ಲ. ಇದರೆ ಜೊತೆಗೆ ಮಳೆಯ ಕೊರತೆಯಿಂದ ಕಾಡುತ್ತಿದ್ದ ಬರ ರೈತರನ್ನು ಕಂಗಾಲಾಗಿಸಿದೆ. ಕೊಳವೆಬಾವಿ ಕೊರೆಯಿಸಿದ್ದರೂ, ಬರ ಪರಿಸ್ಥಿತಿಯಿಂದ ಅಂತರ್ಜಲ ಕುಸಿತ ಕಂಡಿದ್ದು, ಕೇವಲ ಒಂದರಿಂದ ಒಂದೂವರೆ ಇಂಚು ನೀರು ಮಾತ್ರ ಬರುತ್ತಿದೆ. ಇಂತಹ ದುಸ್ಥಿತಿಯಲ್ಲಿ ತೋಟಗಾರಿಕೆ ಇಲಾಖೆಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ರೈತರ ನೆರವಿಗೆ ಬಂದಿದೆ. ಈ ಯೋಜನೆಯ



ಸವಲತ್ತು ಪಡೆದು, ಲಭ್ಯವಿರುವ ಅಲ್ಪ ನೀರಿನಲ್ಲಿ ಬಂಪರ್ ಬಾಳೆ ಬೆಳೆದು, ಇಲ್ಲಿನ ರೈತರು ಲಕ್ಷಗಟ್ಟಲೆ ಆದಾಯ ಎಣಿಸುತ್ತಿದ್ದಾರೆ. ಮಳೆ ಹಿನ್ನಡೆಯ ನಡುವೆಯೂ ಅಂಗಾಂಶ ಬಾಳೆ ಕೃಷಿ ಮಾಡಿ ಕಾತರಕಿ–ಗುಡ್ಲಾನೂರ, ಬೇಳೂರು, ಮತ್ತೂರು ಗ್ರಾಮಗಳ ಸುಮಾರು 20 ಕ್ಕೂ ಹೆಚ್ಚು ರೈತರು ಯಶಸ್ವಿಯಾಗಿದ್ದಾರೆ. ಒಬ್ಬೊಬ್ಬರದು ಎರಡರಿಂದ ಮೂರು ಎಕರೆ ಎಂದು ಲೆಕ್ಕಹಾಕಿದರೂ ಬಾಳೆ ಕೃಷಿ ಸುಮಾರು 50 ಎಕರೆ ಮೀರುತ್ತದೆ.



ಬಾಳೆ ತೋಟಗಳಲ್ಲಿ ಸುಮಾರು ನಾಲ್ಕು ಅಡಿಯಷ್ಟು ಉದ್ದದ 45ರಿಂದ 50 ಕೆಜಿ ತೂಕದ ಗೊನೆಗಳು ನೇತಾಡುತ್ತಿವೆ. ಸೋಮವಾರದಂದು ಬಾಳೆ ತೋಟದ ಸಮೀಪವೇ ಕಾಯಿಗಳನ್ನು ಕತ್ತರಿಸಿ ಸ್ವಚ್ಛಗೊಳಿಸಿ ಟ್ರಕ್‌ಗೆ ತುಂಬಲಾಗುತ್ತಿತ್ತು. ರೈತರಿಗೆ ಬೆಳೆಗೆ ಸರಿಯಾದ ಬೆಲೆಯಲ್ಲಿ ಸಕಾಲದಲ್ಲಿ ಮಾರುಕಟ್ಟೆಗೆ ಹೋಗುತ್ತಿರುವುದು ಒಂದು ಖುಷಿಯಾದರೆ, ಗೊನೆ ಕೊಯ್ಯುವವರಿಗೆ ಬಿಡುವಿಲ್ಲದ ಕೆಲಸ. ಬೃಹತ್ ಗಾತ್ರದ ಬಾಳೆ ಗೊನೆಗಳಿಂದ ತುಂಬಿದ ತೋಟ ನೋಡಲು ಬರುವವರು ಹತ್ತಾರು ಮಂದಿ.

**ಯಶಸ್ಸಿನ ಹಾದಿ :** ಇಲ್ಲಿನ ರೈತರು ಪ್ರತಿ ಹೆಕ್ಟೇರ್‌ಗೆ 3 ಸಾವಿರ ಸಸಿಗಳಂತೆ ನೆಟ್ಟಿದ್ದು, ಕಡಿಮೆ ಅಂತರದಲ್ಲಿ ಹೆಚ್ಚಿನ ಸಾಂದ್ರತೆ ವ್ಯವಸ್ಥೆ ಬಳಸಲಾಗಿದೆ. ಅಂಗಾಂಶ ಕೃಷಿ ಬಾಳೆ 'ಜಿ–ನೇನ್' ತಳಿಯನ್ನು ಬಳಸಲಾಗಿದೆ. ಗಿಡಗಳಿಗೆ ಉತ್ತಮ ಕೊಟ್ಟಿಗೆ ಗೊಬ್ಬರ, ಕಾಲಕಾಲಕ್ಕೆ ಕಾಂಪೋಸ್ಟ್, ಪೊಟ್ಯಾಷ್, ಕಾಂಪ್ಲೆಕ್ಸ್, ಗೊಬ್ಬರವನ್ನೂ ನೀಡಿದ್ದು, ಹನಿ–ನೀರಾವರಿ ಅಳವಡಿಸಿಕೊಂಡಿದ್ದಾರೆ. ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿರುವ 'ಬನಾನಾ ಸ್ಪೆಷಲ್' ಲಘು ಪೋಷಕಾಂಶಗಳ ಪುಡಿಯನ್ನು ತಿಂಗಳಿಗೆ ಒಂದರಂತೆ ಆರು ಬಾರಿ ಕಾಂಡ ಮತ್ತು ಗೊನೆಗೆ ಸಿಂಪಡಿಸಿದ್ದು, ಉತ್ತಮ ಇಳುವರಿಗೆ ಸಹಕಾರಿಯಾಗಿದೆ. ಇದರಿಂದಾಗಿ ಲಘು ಪೋಷಕಾಂಶಗಳ ಕೊರತೆ ನೀಗಿ, ಉತ್ತಮ ಇಳುವರಿ ಬಂದಿದ್ದು, ಗಿಡಗಳಿಗೆ ರೋಗ ನಿರೋಧಕ ಶಕ್ತಿ ವೃದ್ಧಿಯಾಗಿದೆ. ಹನಿ ನೀರಾವರಿ ಪದ್ಧತಿಯನ್ನು ಅನುಸರಿಸಿ, ನೀರಿನಲ್ಲಿ ಕರಗುವ ಗೊಬ್ಬರವನ್ನು ಗಿಡಗಳಿಗೆ ಸಮೃದ್ಧಿಯಾಗಿ ನೀಡಲಾಗಿದೆ. ಪ್ರತಿ ಹೆಕ್ಟೇರ್‌ಗೆ ರೈತರು ಸುಮಾರು 1.5 ಲಕ್ಷ ರೂ. ವೆಚ್ಚ ಮಾಡಿದ್ದರೆ, ತೋಟಗಾರಿಕೆ ಇಲಾಖೆಯು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಪ್ರತಿ ಹೆಕ್ಟೇರ್‌ಗೆ 1.10 ಲಕ್ಷ ರೂ. ಸಬ್ಸಿಡಿ ನೀಡಿದೆ. ಅಲ್ಲದೆ ಹನಿ ನೀರಾವರಿಗಾಗಿ ಶೇ. 90 ರಷ್ಟು ಸಬ್ಸಿಡಿಯನ್ನು ಫಲಾನುಭವಿ ರೈತರಿಗೆ ಒದಗಿಸಿದೆ. ಗಿಡ ನೆಟ್ಟ 06 ತಿಂಗಳಿಗೆ ಗೊನೆಗಳು ಬಂದಿದ್ದು, 9–10 ತಿಂಗಳ ನಂತರ ಬಾಳೆ ಗೊನೆ ಕಟಾವಿಗೆ ಸಿದ್ಧವಾಗಿವೆ.

**ಲಕ್ಷಗಟ್ಟಲೆ ಆದಾಯ :** ಪ್ರತಿ ಬಾಳೆ ಗೊನೆ 25 ರಿಂದ 30 ಕೆ.ಜಿ.ಯಷ್ಟು ಬರುವುದು ಸಾಮಾನ್ಯ. ಆದರೆ ತೋಟಗಾರಿಕೆ ಇಲಾಖೆ ನೀಡಿದ ಸಲಹೆಗಳನ್ನು ಆಸಕ್ತಿಯಿಂದ ರೈತರು ಪಾಲಿಸಿದ ಪರಿಣಾಮವಾಗಿ, ಇಲ್ಲಿನ ಬಾಳೆ ತೋಟದಲ್ಲಿ ಪ್ರತಿಯೊಂದು ಗೊನೆ 40 ರಿಂದ 50 ಕೆ.ಜಿ. ತೂಗುತ್ತಿವೆ. ಸದ್ಯ ಪ್ರತಿ ಕೆ.ಜಿ. ಬಾಳೆಗೆ ಸರಾಸರಿ 12 ರಿಂದ 16 ರೂ. ದೊರೆಯುತ್ತಿದ್ದು, ಪ್ರತಿ ಹೆಕ್ಟೇರ್‌ಗೆ ರೈತರು 9 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಉತ್ತಮ ಗುಣಮಟ್ಟದ ಈ ಬಾಳೆ ಖರೀದಿಸಲು ಹಣ್ಣು ಖರೀದಿ ಗುತ್ತಿಗೆದಾರರು ಪೈಪೋಟಿಗೆ ಇಳಿದಿದ್ದಾರೆ. ಬಾಳೆ ಬೆಳೆದಿರುವ ರೈತರಿಗೆ ಇದು ಮೊದಲ ವರ್ಷದ ಬೆಳೆಯಾಗಿದ್ದು, ಮುಂದಿನ ಎರಡು ವರ್ಷ ಬಾಳೆ ತೋಟದ ವೆಚ್ಚ ಶೇ. 70 ರಷ್ಟು ಕಡಿಮೆ ಆಗಲಿದೆ. ಮುಂದಿನ ಎರಡೂ ವರ್ಷ ಇಲ್ಲಿನ ರೈತರಿಗೆ ಭರಪೂರ ಆದಾಯ ಬರುವುದಂತೂ ನಿಶ್ಚಿತ.

ಇಲ್ಲಿನ ರೈತ ಸುಭಾಷ್ ಭೈರಣ್ಣವರ್ ಅವರು ಪ್ರತಿಕ್ರಿಯೆ ನೀಡಿದ್ದು ಹೀಗೆ. ನಮ್ಮ ಹೊಲದಲ್ಲಿ ಈ ಮೊದಲು ಮೆಕ್ಕೆಜೋಳ, ಮೆಣಸಿನಕಾಯಿ, ಈರುಳ್ಳಿ ಮುಂತಾದ ಬೆಳೆಯನ್ನು ಹಾಕಿದ್ದೇವೆ. ಆದರೆ ಇದ್ಯಾವುದೂ ಅಷ್ಟೊಂದು ಆದಾಯ ತಂದಿರಲಿಲ್ಲ. ತೋಟಗಾರಿಕೆ ಇಲಾಖೆಯವರ ಸಲಹೆ ಹಾಗೂ ಮಾರ್ಗದರ್ಶನದಂತೆ ಇದೇ ಮೊದಲ ಬಾರಿಗೆ ಬಾಳೆ ಬೆಳೆಯಲು ಮುಂದಾದೆವು. ಇಲಾಖೆಯು ಯೋಜನೆಯಡಿ ನೀಡಿದ ಸವಲತ್ತು ಬಳಸಿಕೊಂಡು ಹನಿ ನೀರಾವರಿ ವ್ಯವಸ್ಥೆ ಅಳವಡಿಸಿದ್ದೇವೆ. ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಕೃಷ್ಣ ಉಕ್ಕುಂದ, ವಿಷಯ ತಜ್ಞ ವಾಮನ ಮೂರ್ತಿ, ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕ ನಜೀರ್ ಅಹ್ಮದ್, ಸಹಾಯಕ ತೋಟಗಾರಿಕೆ ಅಧಿಕಾರಿ ವಿಜಯ ಮಹಾಂತೇಶ್, ತೋಟಗಾರಿಕೆ ಸಹಾಯಕ ಬಸವರಾಜ ರಾಂಪೂರ ಹೀಗೆ ಹಲವರು ಮಾರ್ಗದರ್ಶನ ನೀಡಿದ್ದಾರೆ, ಹೀಗಾಗಿ ನಮ್ಮ ಬಾಳೆ ತೋಟದಲ್ಲಿ ಉತ್ತಮ ಇಳುವರಿ ಬಂದಿದೆ ಎಂದರು. ಪ್ರಗತಿ ಪರ ರೈತರಾದ ವೆಂಕನಗೌಡ್ರ ಹಿರೇಗೌಡರ್, ಶಂಕರಗೌಡರ ಹಿರೇಗೌಡರ್, ಅವರು ಪ್ರತಿಕ್ರಿಯಿಸಿ, ನಮ್ಮ ಭಾಗದ ರೈತರು ಇಲಾಖೆಯ ಮಾರ್ಗದರ್ಶನ ಪಡೆದು, ಯಶಸ್ವಿ ರೈತರಾಗುತ್ತಿದ್ದಾರೆ. ತೋಟಗಾರಿಕೆ ಇಲಾಖೆ ರೈತರಿಗೆ ಮಾರ್ಗದರ್ಶನ ನೀಡಿ, ಪ್ರೋತ್ಸಾಹ ನೀಡುತ್ತಿರುವುದು ಸಂತಸ ತಂದಿದೆ. ಇದರಿಂದಾಗಿ ಇತರೆ ರೈತರು ಸಹ ಬಾಳೆ ಬೆಳೆಯಲು ಮುಂದಾಗುತ್ತಿದ್ದಾರೆ ಎಂದರು.





**ಯಶಸ್ವಿಯಾದ ರೈತರು :** ಕಾತರಕಿ–ಗುಡ್ಲಾನೂರ, ಬೇಳೂರು, ಮತ್ತೂರು ಸುತ್ತಮುತ್ತಲ ಗ್ರಾಮಗಳ ಅನೇಕ ರೈತರು ತೋಟಗಾರಿಕೆ ಇಲಾಖೆಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಸವಲತ್ತು ಪಡೆದು, ತಮ್ಮ ಹೊಲಗಳಲ್ಲಿ ಇದೇ ಮಾದರಿಯಲ್ಲಿ ಬಾಳೆ ಬೆಳೆದು ಯಶಸ್ಸು ಕಂಡಿದ್ದಾರೆ. ಅಲ್ಲದೆ ಪ್ರದೇಶದಲ್ಲಿ ಈ ಮಾದರಿಯಲ್ಲೇ ಬಾಳೆ ಬೆಳೆದು ಶ್ರೀನಿವಾಸ ಹೊಳಿಯಪ್ಪನವರ್, ಕೊಟ್ರಯ್ಯ ಅಬ್ಬಿಗೇರಿಮಠ, ನಿಂಗಪ್ಪ ಹ್ಯಾಟಿ, ಪರಶನಗೌಡ ಹಿರೇಗೌಡರ್, ಈಶ್ವರಗೌಡ ಹಿರೇಗೌಡರ್, ಶಿವಲಿಂಗಮ್ಮ, ವಿರೂಪಣ್ಣ ಅಗಡಿ, ನಾಗರಾಜ್ ಹುರಕಡ್ಲಿ, ಶಿವಾನಂದಯ್ಯ ಅಬ್ಬಿಗೇರಿಮಠ, ಅಕ್ಷತಾ ಸಿದ್ದಲಿಂಗಪ್ಪ ಉಳ್ಳಾಗಡ್ಡಿ ಯಶಸ್ವಿಯಾಗಿದ್ದಾರೆ.

**ಹೆಚ್ಚಿನ ಮಾಹಿತಿಗಾಗಿ ಕೊಟ್ರಯ್ಯ ಅಬ್ಬಿಗೇರಿಮಠ–** 9731742939, ಸುಭಾಷ್ ಭೈರಣ್ಣವರ್– 9731048488 ಅಥವಾ ತೋಟಗಾರಿಕೆ ವಿಷಯ ತಜ್ಞರು–9482672039, ಇವರನ್ನು ಸಂಪರ್ಕಿಸ ಬಹುದು.



# ವೀಳೆದೆಲೆ ಬೆಳೆದ ರೈತ ತಾನೂ ಬೆಳೆದ

**ಅಶೋಕ್‌ಕುಮಾರ್.ಡಿ**
ಹಿರಿಯ ಸಹಾಯಕ ನಿದೇಶಕರು, ದಾವಣಗೆರೆ

**ವೀಳೆದೆಲೆ ಬೆಳೆದ ರೈತರು ವೀಳೆದೆಲೆ ಬಳ್ಳಿಯಂತೆ ತಾವೂ ಆರ್ಥಿಕವಾಗಿ ಸದೃಢರಾದ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ 'ಸಾವಯವ ಭಾಗ್ಯ' ಯೋಜನೆ. ಕೃಷಿ ಇಲಾಖೆಯಿಂದ 2016–17 ರಲ್ಲಿ ನೀಡಲಾದ ಯೋಜನೆಯಲ್ಲಿ ಹರಿಹರ ತಾಲ್ಲೂಕಿನ ಶಂಷಿಪುರದ 54 ಕುಟುಂಬಗಳು 250 ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದು ಜೀವನ ಕಟ್ಟಿಕೊಂಡು ಸಾವಯವ ಕೃಷಿಯೊಂದಿಗೆ ಆರೋಗ್ಯದ ಜೀವನ ನಡೆಸುತ್ತಿರುವ ಸಾಹಸ ಗಾಥೆ.**

ಹರಿಹರ ತಾಲ್ಲೂಕಿನ ಕಸಬ ಹೋಬಳಿಯಲ್ಲಿರುವ ಶಂಷಿಪುರ ಗ್ರಾಮವನ್ನು ಈ ಯೋಜನೆಗೆ ಆಯ್ಕೆ ಮಾಡಿ ಅಲ್ಲಿನ ಆಸಕ್ತ ರೈತರನ್ನು ಗುಂಪುಗೂಡಿಸಿ ಜ್ಞಾನ ಜ್ಯೋತಿ ವಿದ್ಯಾಸಂಸ್ಥೆ ಎಂಬ ಸಂಸ್ಥೆಯ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಿತು. ಈ ಗ್ರಾಮವನ್ನು ಆಯ್ಕೆ ಮಾಡುವ ಮುನ್ನ ಅಗತ್ಯ ಮಾನದಂಡಗಳಾದ ಸಾವಯವ ವಸ್ತುಗಳ ಲಭ್ಯತೆ, ಕಚ್ಚಾವಸ್ತುಗಳ ದೊರೆಯುವಿಕೆ, ರೈತರ ಸಹಭಾಗಿತ್ವ, ಸಹಕಾರ ಈ ಮಾನದಂಡಗಳಡಿ ಗ್ರಾಮವನ್ನು ಆಯ್ಕೆಮಾಡಿತು. ಆ ರೀತಿ ಆಯ್ಕೆ ಮಾಡಿದ ಗ್ರಾಮವಿಂದು ಸಾವಯವ ಗ್ರಾಮವಾಗಿ ರಾಸಾಯನಿಕ ಗೊಬ್ಬರ ಮುಕ್ತವಾಗುವುದರೊಂದಿಗೆ, ಎರೆಹುಳು ಗೊಬ್ಬರವನ್ನು ಉತ್ಪಾದಿಸಿ ತಮ್ಮ ಜಮೀನುಗಳಿಗೆ ಉಪಯೋಗಿಸುವುದರೊಂದಿಗೆ ಎರೆಹುಳುಗಳನ್ನು ಆಸಕ್ತ ರೈತರಿಗೆ ಕೆ.ಜಿ ಗೆ 300 ರೂನಂತೆ ಮಾರಾಟ ಮಾಡುತ್ತಿದ್ದಾರೆ.

ಈ ಯೋಜನೆಯಡಿ ಸಾವಯವ ಪದ್ಧತಿಯಲ್ಲಿ ಸಾವಯವ ಗೊಬ್ಬರ ಹಾಗೂ ಜೀವಾಮೃತ ಘಟಕಗಳನ್ನು ಸರ್ಕಾರದ ಸಹಾಯಧನದಿಂದ ಆರಂಭಿಸಿದ ರೈತರು ಇಂದು ಆರ್ಥಿಕವಾಗಿ ಮುಂದುವರೆದಿದ್ದಾರೆ. ಗ್ರಾಮದ ರೈತ ಶಂಕರ್ ಅವರು 15 ಗುಂಟೆಯಲ್ಲಿ ವೀಳೆದೆಲೆ ತೋಟ ಬೆಳೆಸಿ ತಿಂಗಳಿಗೆ 60 ರಿಂದ 65 ಸಾವಿರ ಆದಾಯ ಪಡೆಯುತ್ತಿದ್ದಾರೆ. ಎಲ್ಲ ಕಾರ್ಯಗಳನ್ನು ಮನೆಯವರೇ ನಿರ್ವಹಿಸುವುದರಿಂದ ವ್ಯವಸಾಯದ ಖರ್ಚು ಕಡಿಮೆ. ಗ್ರಾಮದಿಂದ ಹೆದ್ದಾರಿ ಬೈಪಾಸ್ ಹತ್ತಿರವಿದ್ದು ಅಲ್ಲಿ ಎಲೆ ಮಾರಾಟ ಮಾಡಲಾಗುತ್ತದೆ. ಹೆಚ್ಚು ವೀಳೆದೆಲೆ ಬಂದಾಗ ಧಾರವಾಡಕ್ಕೆ ಒಯ್ಯುತ್ತಾರೆ. 15 ಗುಂಟೆಯಲ್ಲಿ ತಿಂಗಳಿಗೆ 120 ಕಟ್ಟು ಎಲೆಗಳಿರುವ 12 ಪೆಂಡಿ ಎಲೆಗಳು ಸಿಗುತ್ತವೆ. ಇದರಿಂದ ಏನಿಲ್ಲವೆಂದರೂ ಖರ್ಚು ಕಳೆದು 50 ರಿಂದ 55 ಸಾವಿರ ಉಳಿತಾಯವಾಗಲಿದೆ ಅವರಿಗೆ.



**ಜೀವಾಮೃತ ಘಟಕ:** ಸಿಮೆಂಟ್ ಬಳೆಗಳಿಂದ ನಿರ್ಮಿಸಲಾಗಿರುವ 3 ಮೀ ಅಳತೆಯ ಒಂದು ಘಟಕದಲ್ಲಿ 300 ಲೀಟರ್ ಜೀವಾಮೃತ ಸಿದ್ಧವಾಗುತ್ತದೆ. ಅದನ್ನು ಸಿದ್ಧಪಡಿಸಲು 5 ಕೆ.ಜಿ ಬೆಲ್ಲಾ, 25 ಕೆ.ಜಿ ಸಗಣಿ, 5 ಕೆ.ಜಿ ಕಡ್ಲೆಹಿಟ್ಟು, ಹೊಲದ ಯಾವುದಾದರೂ ಭಾಗದ ಹೊಸ ಮಣ್ಣು, ಸ್ವಲ್ಪ ನೀರು ಒಂದು ತಿಂಗಳು ಹಾಗೇ ಬಿಟ್ಟರೆ ಜೀವಾಮೃತ ಸಿದ್ಧ. ಅದನ್ನು ವೀಳೆದೆಲೆ ತೋಟಕ್ಕೆ ನೀರು ಹಾಯಿಸುವಾಗ ನೀರಿನ ಜೊತೆಯಲ್ಲಿ ಮಿಶ್ರಣವಾಗುವಂತೆ ಜೀವಾಮೃತವನ್ನು ಸೇರಿಸುತ್ತಾರೆ. ಇದರಿಂದ ಹುಲುಸಾದ ಬೆಳೆ ಬಂದಿದೆ. ರಾಸಾಯನಿಕ ಗೊಬ್ಬರಕ್ಕೆ ಸುರಿಯುತ್ತಿದ್ದ ಸಾವಿರಾರು ರೂಪಾಯಿ ಉಳಿತಾಯವಾಗಲಿದೆ ಎನ್ನುತ್ತಾರೆ ಹರ್ಷಗೊಂಡಿರುವ ರೈತರು.

ಈ ಘಟಕ ನಿರ್ಮಿಸಲು ಸರ್ಕಾರದಿಂದ 2 ಸಾವಿರ ಸಹಾಯ ಧನ ನೀಡಲಾಗಿದ್ದು ರೈತ ತನ್ನ ಪಾಲಿನ 2 ಸಾವಿರ ಭರಿಸಿದರೆ ಒಂದು ಜೀವಾಮೃತ ಘಟಕ ರೆಡಿಯಾಗುವುದರಿಂದ ಸಣ್ಣ ರೈತರೂ ಕೂಡ ಜೀವಾಮೃತ ಘಟಕಗಳನ್ನು ಮಾಡಿಕೊಳ್ಳಬಹುದು.

**ಎರೆಹುಳು ಗೊಬ್ಬರ ತೊಟ್ಟಿ:** ಸಾವಯವ ಭಾಗ್ಯ ಯೋಜನೆಯಡಿ ಎರೆಹುಳು ತೊಟ್ಟಿಗಳನ್ನು ರೈತರಿಗೆ ನೀಡಲಾಗಿದೆ. ಸರ್ಕಾರ ನೀಡುವ 8 ಸಾವಿರ ಐನೂರರೊಂದಿಗೆ ರೈತರ ವಂತಿಗೆ 8 ಸಾವಿರದ ಐದನೂರು ರೂಗಳು ಸೇರಿದರೆ 15 ಅಡಿ ಉದ್ದ 8 ಅಡಿ ಅಗಲ ಹಾಗೂ 2.5 ಅಡಿ ಎತ್ತರದ ತೊಟ್ಟಿ ರೆಡಿಯಾಗುತ್ತದೆ. ಕೇವಲ 1 ಕೆ.ಜಿ ಹುಳು ಬಿಟ್ಟರೆ 3 ತಿಂಗಳಲ್ಲಿ ಎರೆಹುಳು ಗೊಬ್ಬರ ರೆಡಿಯಾಗುತ್ತದೆ. 3 ತಿಂಗಳಿಗೆ 3 ಟನ್‌ನಂತೆ ವರ್ಷಕ್ಕೆ 12 ಟನ್‌ಗಳಷ್ಟು ಗೊಬ್ಬರ ದೊರೆತಿದೆ.

ಫಲಾನುಭವಿ ಚಂದ್ರಶೇಖರಯ್ಯ ತಮ್ಮ ಹೊಲದಲ್ಲಿ ಇಂತಹ ಒಂದು ತೊಟ್ಟಿ ನಿರ್ಮಿಸಿಕೊಂಡಿದ್ದಾರೆ. ಅವರೇ ಹೇಳುವಂತೆ ರೈತರು ತಮ್ಮ ಪರಿಸರದಲ್ಲಿ ಸಿಗುವ ವ್ಯರ್ಥ ಪದಾರ್ಥಗಳನ್ನು ಬಳಸಿಕೊಂಡು ಈ ಗೊಬ್ಬರ ತಯಾರಿಸಬಹುದು. ಮನೆಯಲ್ಲಿ ಉಳಿಯುವ ವ್ಯರ್ಥ ಪಧಾರ್ಥಗಳು ಹಸಿರು ಸೊಪ್ಪು, ಸಗಣಿ, ಗಂಜಲ, ಕಬ್ಬಿನ ಸಿಪ್ಪೆ, ಜೋಳದ ದಿಂಡು ಇವುಗಳನ್ನು ಸಣ್ಣ ಚೂರುಗಳಾಗಿ ಕತ್ತರಿಸಿ ಪದರುಗಳಾಗಿ ಹರಡಿ ಅದರೊಳಗೆ ಎರೆಹುಳು ಬಿಟ್ಟು ತೇವಾಂಶ ಕಾಪಾಡಿಕೊಂಡರೆ ಸಮೃದ್ಧವಾದ ಎರೆಹುಳು ಗೊಬ್ಬರ ತಯಾರಿಸಬಹುದೆಂಬುದು ರೈತರ ಮಾತು.

ಸಹಾಯಕ ಕೃಷಿ ಅಧಿಕಾರಿ ಎಂ ಎಂ ಹುಣಸಿನಕಟ್ಟಿಯವರು ಕಳೆದ 3 ವರ್ಷಗಳ ಹಿಂದೆ ಈ ಗ್ರಾಮವನ್ನು ಸಾವಯವ ಭಾಗ್ಯ ಯೋಜನೆಯಡಿ ಆಯ್ಕೆ ಮಾಡಲಾಗಿದ್ದು ಇಲ್ಲಿ ಎಲ್ಲಾ ಕುಟುಂಬಗಳು ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ಸರ್ಕಾರದ ಯೋಜನೆಯ ಫಲ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎನ್ನುತ್ತಾರೆ. ■



### ವಿದ್ಯಾರ್ಥಿಗಳ ಶಿಸ್ತಿನ, ಕಲಿಕೆಯ ತಾಣ

# ಬಿಡನಾಳ ಶಾಲೆ

**ಮಂಜುನಾಥ ಡಿ.ಡೊಳ್ಳಿನ**
ಹಿರಿಯ ಸಹಾಯಕ ನಿರ್ದೇಶಕರು, ಹುಬ್ಬಳ್ಳಿ

**ಖಾ**ಸಗಿ , ಇಂಗ್ಲೀಷ್ ಮಾಧ್ಯಮದ ಶಾಲೆಗಳ ಆಕರ್ಷಣೆಗೆ ವಿದ್ಯಾರ್ಥಿಗಳು , ಪಾಲಕರು ಒಳಗಾಗಿರುವ ಕಾಲಘಟ್ಟವಿದು. ಸರ್ಕಾರಿ ಶಾಲೆಗಳಲ್ಲಿ ಅರ್ಹ ತರಬೇತಿ , ಪದವಿಗಳಿಸಿದ ಪ್ರತಿಭಾವಂತ ಶಿಕ್ಷಕರಿದ್ದಾಗ್ಯೂ ಸಹ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪ್ರವೇಶ ಬಯಸಿ ಬರುವವರ ಸಂಖ್ಯೆ ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಈ ಬೆಳವಣಿಗೆಗೆ ಅಪವಾದವೆಂಬಂತೆ ದಿನೇ ದಿನೇ ತನ್ನ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತ, ವಿದ್ಯಾರ್ಥಿಗಳ ಕಲಿಕೆಯ ನೆಚ್ಚಿನ ತಾಣವಾಗಿ ಅಭಿವೃದ್ಧಿ ಹೊಂದುತ್ತಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದು ಹುಬ್ಬಳ್ಳಿ ನಗರದ ಬಿಡ್ನಾಳದಲ್ಲಿದೆ.

ಇಲ್ಲಿನ 10 ನೇ ನಂಬರ್ ಸರ್ಕಾರಿ ಹಿರಿಯ ಪಾಥಮಿಕ ಶಾಲೆಗೆ ಪ್ರವೇಶ ಬಯಸಿ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತ ಸಾಗುತ್ತಿದೆ. 6 ಮತ್ತು 7 ನೇ ತರಗತಿಗಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಕೆಯನ್ನೂ ಸಹ ನಿರ್ವಹಿಸುತ್ತಿರುವ ಇಲ್ಲಿನ ಶಿಕ್ಷಕರು ಆಧುನಿಕ ತಂತ್ರಜ್ಞಾನಗಳನ್ನು ಅಳವಳಡಿಸಿಕೊಂಡಿರುವ ಸ್ಮಾರ್ಟ್ ಬೋರ್ಡಗಳ ಮೂಲಕ ಪರಿಣಾಮಕಾರಿ ಪಾಠಗಳನ್ನು ಮಾಡುವ ಸಾಮರ್ಥ್ಯ ಗಳಿಸಿಕೊಂಡಿದ್ದಾರೆ. 1 ನೇ ತರಗತಿಯಿಂದಲೇ ಇಂಗ್ಲೀಷನ್ನು ಒಂದು ಭಾಷೆಯನ್ನಾಗಿ ಬೋಧಿಸುತ್ತಿರುವುದು ಹಾಗೂ ಪೂರ್ವ ಪ್ರಾಥಮಿಕ ತರಗತಿಗಳನ್ನೂ ಸಹ ಶಾಲೆಯಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ನಡೆಸುತ್ತಿರುವದರಿಂದ ಶಾಲೆಗೆ ಪ್ರವೇಶ ಬಯಸಿ ಬರುವವರ ಸಂಖ್ಯೆ ಏರಿಕೆಯಾಗುತ್ತಿದೆ.

1913 ರಲ್ಲಿ ಸ್ಥಾಪನೆಯಾಗಿರುವ ಬಿಡನಾಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಶತಮಾನವನ್ನು ಪೂರೈಸಿ ಈಗ 105 ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಸುಮಾರು ಒಂದು ಎಕರೆಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಶಾಲೆಯು 16 ಕೊಠಡಿಗಳನ್ನು ಹೊಂದಿದೆ. ತನ್ನ ಶಿಸ್ತು ಹಾಗೂ ಕಲಿಕಾ ಗುಣಮಟ್ಟದಿಂದ ಹೆಸರುಗಳಿಸಿರುವ ಈ ಶಾಲೆಯಲ್ಲಿ 2016–17 ನೇ ಸಾಲಿನಲ್ಲಿ 650 ವಿದ್ಯಾರ್ಥಿಗಳಿದ್ದರು. ಪ್ರಸಕ್ತ 2017–18 ನೇ ಸಾಲಿನಲ್ಲಿ ಈ ಸಂಖ್ಯೆ 710 ಕ್ಕೆ ಏರಿದೆ.



**ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತೆ ಬಿಡ್ನಾಳದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಬೆಳೆಯುತ್ತಿದ್ದಾರೆ. ಕ್ಷೀರಭಾಗ್ಯ ಯೋಜನೆಯಡಿ ಒದಗಿಸುವ ಹಾಲು ಹಾಗೂ ಅಕ್ಷರದಾಸೋಹ ಯೋಜನೆಯಡಿ ಪೂರೈಸುವ ಮಧ್ಯಾಹ್ನ ಬಿಸಿಯೂಟವನ್ನು ಮಕ್ಕಳು ಶಿಸ್ತಾಗಿ ಸರದಿಯಲ್ಲಿ ನಿಂತು ಸ್ವೀಕರಿಸುವದನ್ನು ನೋಡುವದೇ ಆನಂದ ತರುತ್ತದೆ. ಈ ಯೋಜನೆಗಳಿಂದ ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಾಗಿ, ಅವರಲ್ಲಿ ಕಲಿಕೆಯ ಉತ್ಸಾಹ ಚೈತನ್ಯಗಳು ಜಾಗೃತವಾಗಿರುವದನ್ನು ಕಾಣಲು ನೀವು ಒಮ್ಮೆ ಈ ಶಾಲೆಗೆ ಭೇಟಿ ನೀಡಬೇಕು.**



ಬಿಡನಾಳ ಶಾಲೆಯ ವ್ಯಾಪ್ತಿಯ ಬೀಡಿ ಕಾರ್ಮಿಕ ನಗರ, ಸೋನಿಯಾಗಾಂಧಿ ನಗರ ಸೇರಿದಂತೆ ಸುತ್ತಲಿನ ನಿವಾಸಿಗಳಿಗೆ ಈ ಸರ್ಕಾರಿ ಶಾಲೆಯು ವರದಾನವಾಗಿದೆ.

ಸ್ಥಳೀಯರೂ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳು ಆಗಿರುವ ಮೋಹನ ಅಸುಂಡಿ , ಗಂಗಾಧರ ಅಸುಂಡಿ , ಶರೀಫಸಾಬ ನದಾಫ್ ಮತ್ತಿತರರು ಆಸಕ್ತಿ ವಹಿಸಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮೂಲಕ ಸಮರ್ಪಕ ಕಟ್ಟಡ , ಸ್ಮಾರ್ಟ್ ಬೋರ್ಡುಗಳು , ಕುಡಿಯುವ ನೀರು , ಶೌಚಾಲಯ , ಫ್ಯಾನುಗಳು ಹಾಗೂ ವಿದ್ಯುತ್ ಸಂಪರ್ಕ ಮೊದಲಾದ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಸಹಕರಿಸುತ್ತಿದ್ದಾರೆ. ಶಾಲೆಯಲ್ಲಿನ 19 ಜನ ಶಿಕ್ಷಕರ ಸಹಕಾರ ಮತ್ತು ಆಸ್ತಕಿಯಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಭೋಧನೆಯೂ ನಡೆಯುತ್ತಿರುವದರಿಂದ ಬಿಡ್ನಾಳ ಶಾಲೆ ಮಾದರಿಯಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ಮುಖ್ಯೋಪಾಧ್ಯಾಯರಾದ ಎಂ. ಎಚ್.ಜಂಗಳಿ ಹೇಳುತ್ತಾರೆ.



ಭಾಷಾ ನೀತಿ ಪ್ರಕಾರ 1 ರಿಂದ 5 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಬೋಧಿಸಲಾಗುತ್ತಿದೆ. ಜೊತೆಗೆ ಇಂಗ್ಲೀಷ್‌ನ್ನು ಒಂದು ಭಾಷೆಯಾಗಿ 1 ನೇ ತರಗತಿಯಿಂದಲೇ ಕಲಿಸಲಾಗುತ್ತಿದೆ. ಪಾಲಕರು ಹಾಗೂ ವಿದ್ಯಾರ್ಥಿಗಳು ಬಯಸಿದರೆ 6 ಮತ್ತು 7 ನೇ ತರಗತಿಗಳಿಗೆ ಒಂದು ವಿಭಾಗದಲ್ಲಿ ಸಂಪೂರ್ಣವಾಗಿ ಆಂಗ್ಲ ಮಾಧ್ಯಮದಲ್ಲಿಯೇ ಬೋಧಿಸಲು ಅವಕಾಶವಿದೆ. ಪೂರ್ವ ಪ್ರಾಥಮಿಕ ತರಗತಿಗಳನ್ನೂ ಸಹ ಇಲ್ಲಿ ಆರಂಭಿಸಿರುವದರಿಂದ 1 ನೇ ತರಗತಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಕೊರತೆಯಾಗುತ್ತಿಲ್ಲ. ಹುಬ್ಬಳ್ಳಿ ಶಹರದ ಈಗಾಗಲೇ 13 ಶಾಲೆಗಳಲ್ಲಿ ಸ್ಮಾರ್ಟ್ ಬೋರ್ಡಗಳನ್ನು ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಒದಗಿಸಲಾಗಿದೆ. ಈಗ ಇನ್ನೂ 12 ಶಾಲೆಗಳಿಗೆ ಈ ಸೌಲಭ್ಯ ವಿಸ್ತರಿಸಲು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಉತ್ತಮ ಹುದ್ದೆಗಳಲ್ಲಿರುವವರ ಸಂಖ್ಯೆ ದೊಡ್ಡದಿದೆ. ಅವರನ್ನು ಸೇರಿಸಿಕೊಂಡು ಹಳೆಯ ವಿದ್ಯಾರ್ಥಿಗಳ ಸಂಘ ರಚಿಸಿ ,ಅಭಿವೃದ್ಧಿ ಕಾರ್ಯಗಳನ್ನು ಚುರುಕುಗೊಳಿಸಲು ಶ್ರಮಿಸಲಾಗುತ್ತಿದೆ ಎಂದು ಹುಬ್ಬಳ್ಳಿ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಉಮೇಶ ಬೊಮ್ಮಕನವರ ಹೇಳುತ್ತಾರೆ.

ಏಳು ಸಿ.ಸಿ ಕ್ಯಾಮೆರಾಗಳು ಹಾಗೂ ಸಿ.ಸಿ.ಟಿವಿ ಅಳವಡಿಸಿರುವದರಿಂದ ಶಿಕ್ಷಕರು ಹಾಗೂ ಮಕ್ಕಳಲ್ಲಿ ಹೆಚ್ಚಿನ ಶಿಸ್ತನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿರುವದು ಬಿಡನಾಳ ಶಾಲೆಯ ವಿಶೇಷತೆಯಾಗಿದೆ. ಯಾವುದೇ ಖಾಸಗಿ ಶಾಲೆಗಳಿಗೂ ಕಡಿಮೆ ಇಲ್ಲದಂತೆ ಮುನ್ನಡೆಯುತ್ತಿರುವ ಈ ಶಾಲೆ ಇತರ ಸರ್ಕಾರಿ ಶಾಲೆಗಳಿಗೆ ಮಾದರಿಯಾಗಿದೆ.

# ಮುಂಡಿಗೆ ವನದಲ್ಲಿ
# ಬೆಳ್ಳಕ್ಕಿಗಳ ಬಾಣಂತಣ





ಗಣಪತಿ ಹಾಸ್ಪುರ

ಅದೊಂದು ಸುಂದರ ಪರಿಸರ. ಸುತ್ತಮುತ್ತಲೆಲ್ಲಾ ನೈಸರ್ಗಿಕವಾಗಿ ಬೆಳೆದು ನಿಂತಿರುವ ವೈವಿಧ್ಯಮಯವಾದ ಗಿಡ–ಮರಗಳು, ಕೃಷಿಕರು ಬೆವರು ಸುರಿಸಿ ಬೆಳೆಸಿದ ಅಡಿಕೆ–ತೆಂಗಿನ ಮರಗಳ ಮಧ್ಯೆ ದೊಡ್ಡ ಕೆರೆಯಿದೆ. ಅದೀಗ 'ಪಕ್ಷಿಧಾಮ'ವಾಗಿಯೇ ಗುರುತಿಸಿಕೊಂಡಿದೆ. ಸ್ಥಳೀಯವಾಗಿ ಅದು ಪ್ರಸಿದ್ಧವಾಗಿದ್ದರೂ.... ಅದರ ವಿಶೇಷತೆ, ವೈಶಿಷ್ಟ್ಯ ಜನ ಸಾಮಾನ್ಯರಿಗೂ ತಿಳಿದಿಲ್ಲ.

**ಪಕ್ಷಿಧಾಮ ಎಲ್ಲಿದೆ?**

ಈ ಪಕ್ಷಿಧಾಮವು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನಲ್ಲಿದೆ. ತಾಲೂಕು ಕೇಂದ್ರದಿಂದ ಸುಮಾರು 20 ಕಿ. ಮೀ. ದೂರದಲ್ಲಿದೆ. ಇಲ್ಲಿಗೆ ತೆರಳಲು ಎರಡು ಮಾರ್ಗವಿದೆ. ಶಿರಸಿಯಿಂದ ಹುಲೇಕಲ್ ತಲುಪಿ.... ಕಮಾಟಗೇರಿ (ವಾದಿರಾಜ ಮಠದ ಸಮೀಪ) ಮೂಲಕವೂ ಬರಬಹುದು. ಇನ್ನು ಭೈರುಂಬೆ–ಸೋಂದಾ ಕ್ರಾಸ್ ಮೂಲಕ ಕಮಾಟಗೇರಿಗೆ ಬಂದು ಅಲ್ಲಿಂದ ಸುಮಾರು ಎರಡು ಕಿ. ಮೀ. ಅಂತರದಲ್ಲಿ ಪಕ್ಷಿಧಾಮವಿದೆ.

**ಏನಿದರ ವಿಶೇಷ?**

ಬಾಡ್ಲಕೊಪ್ಪದಲ್ಲಿ ರಾಜರ ಆಳ್ವಿಕೆಯಲ್ಲಿಯೇ ನೀರಾವರಿಗಾಗಿ ದೊಡ್ಡ ಕೆರೆ ನಿರ್ಮಿಸಲಾಗಿತ್ತು. ಸುಮಾರು 4 ಎಕರೆ 14 ಗುಂಟೆ ವ್ಯಾಪ್ತಿಯಲ್ಲಿ ಈ ಕೆರೆಯಿದೆ. ಇಲ್ಲಿನ ನೀರು ಕೃಷಿ ಭೂಮಿಗೆ



ಸದ್ಬಳಕೆ ಆಗುತ್ತಿತ್ತು. ಅದು ವ್ಯವಸ್ಥಿವಾಗಿ ಆಗಬೇಕು. ಎನ್ನುವ ಉದ್ದೇಶದಿಂದಲೇ ಈ ಕೆರೆಗೆ ಅಂದಿನ ರಾಜರು 'ಒನಕೆ ತೂಬು' ಅಳವಡಿಸಿದ್ದರು. ಅದರ ಬಳಕೆ ಈಗಿಲ್ಲದಿದ್ದರೂ ಆಗಿನವರ ತಂತ್ರಜ್ಞಾನದ ಕೌಶಲ್ಯವನ್ನು ಈಗಲೂ ಕಾಣಬಹುದು. ಇನ್ನು ಈ ಕೆರೆಯ ಬಹುತೇಕ ಭಾಗ ಮುಂಡಿಗೆ ಗಿಡಗಳೇ ತುಂಬಿಕೊಂಡಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೇದಿಗೆ (ಮುಂಡಿಗೆ – Pandanus u nipillatas) ಸಸ್ಯ ಬೆಳೆದುಕೊಂಡಿರುವ ಕೆರೆ ಮತ್ತೆಲ್ಲಿಯೂ ಸಿಗಲಿಕ್ಕಿಲ್ಲ. ಇದೊಂದು ನೈಸರ್ಗಿಕವಾದ ಪಕ್ಷಿಧಾಮ! ಮುಂಡಿಗೆ ಗಿಡಕ್ಕೆ ಗೂಡುಕಟ್ಟಿ.... ಅಲ್ಲಿಯೇ ವಾಸ ಮಾಡಿ, ಬಾಣಂತನವನ್ನು ವ್ಯವಸ್ಥಿತವಾಗಿ ಮುಗಿಸುವ ಬೆಳ್ಳಕ್ಕಿಗಳ ಏಕೈಕ ಉತ್ತರ ಕನ್ನಡ ಜಿಲ್ಲೆಯ ತಾಣವೆಂದರೂ ಅತಿಶಯೋಕ್ತಿ ಆಗಲಾರದು.

ಇಷ್ಟೊಂದು ವೈವಿಧ್ಯ, ವೈಶಿಷ್ಟ್ಯವನ್ನು ಹೊಂದಿರುವ ಈ ಮುಂಡಿಗೆಕೆರೆಗೆ ಭಿನ್ನ ಭಿನ್ನವಾದ ಬೆಳ್ಳಕ್ಕಿಗಳು ಬರುತ್ತವೆ. ಇಲ್ಲಿ ಸಣ್ಣ ಬೆಳ್ಳಕ್ಕಿ (Small Egret), ಮಧ್ಯಮ ಬೆಳ್ಳಕ್ಕಿ (Medium Egret), ಸಣ್ಣ ನೀರು ಕಾಗೆ (Little Cormorant).... ಇತ್ಯಾದಿಗಳು ಗೂಡುಕಟ್ಟಿ ವೃಂಶಾಭಿವೃದ್ಧಿ ಮಾಡುತ್ತವೆ. ಅಲ್ಲದೇ, ಕೊಳದ ಬಕ (White Breasted Waterthen), ಸಾಮಾನ್ಯ ಮೈನಾ (Common Myna), ಬಿಳಿ ತಲೆ ಮೈನಾ, ಕಪ್ಪು ತಲೆ ಮೈನಾ (Black Headed Myna).... ಮುಂತಾದವು ರಾತ್ರಿ ವಾಸ ಮಾಡುತ್ತವೆ ಎಂಬುದು ಪಕ್ಷಿ ತಜ್ಞರ ಅಭಿಮತ. ಜತೆಗೆ ಈ ಪಕ್ಷಿಧಾಮದ ಸುತ್ತಲಿನ ನೈಸರ್ಗಿಕ ಪರಿಸರದಲ್ಲಿ 75–80 ಬಗೆಯ ತರತರದ ಪಕ್ಷಿಗಳನ್ನು ವೀಕ್ಷಿಸಬಹುದು ಎಂದು ಹೇಳಲಾಗುತ್ತಿದೆ.

**ಬೆಳಕಿಗೆ ಬಂದಿದ್ದು ಹೇಗೆ?**

1980 ರಲ್ಲಿ ಮೊಟ್ಟ ಮೊದಲ ಬಾರಿಗೆ ಪಿ. ಡಿ. ಸುದರ್ಶನ್ (ಶಿರಸಿ ಮಣ್ಣು ಸಂಶೋಧನಾಲಯ ನೌಕರರಾಗಿದ್ದರು). ಅವರು ಮುಂಡಿಗೆಕೆರೆಯಲ್ಲಿ 8–10 ಜಾತಿಯ ಪಕ್ಷಿಗಳಿವೆ ಎಂದು ದಾಖಲಿಸಿದ್ದಾರೆ. ಅದಕ್ಕೂ ಪೂರ್ವವೇ ಸುದರ್ಶನ್ ಅವರು ಈ ಮುಂಡಿಗೆಕೆರೆಗೆ ಆಗಾಗ ಭೇಟಿ ನೀಡಿ ಬೆಳ್ಳಕ್ಕಿಗಳು ಗೂಡು ಕಟ್ಟುವುದನ್ನು ಸೂಕ್ಷ್ಮವಾಗಿ ಗ್ರಹಿಸಿಯೇ.... ಇದೊಂದು ಬೆಳ್ಳಕ್ಕಿಗಳ ಬಾಣಂತಿ ಕೋಣೆ ಎಂಬುದನ್ನು ಖಚಿತ ಪಡಿಸಿಕೊಂಡಿದ್ದರು. ಆ ನಂತರವೇ ಬಾಡ್ಲಕೊಪ್ಪದ ಮುಂಡಿಗೆಕೆರೆ ಪಕ್ಷಿಧಾಮವಾಗಿ ಪ್ರಸಿದ್ಧಿ ಆಗತೊಡಗಿತು. ಇಲ್ಲಿಗೆ ಬರುವ ಪಕ್ಷಿ ಮತ್ತು ಸಂಕುಲಗಳ ರಕ್ಷಣೆ, ಅವುಗಳನ್ನು ದಾಖಲಿಸುವ ಕಾರಣಕ್ಕಾಗಿಯೇ 1995 ರಲ್ಲಿ ಸೋಂದಾ–ಸ್ವರ್ಣವಲ್ಲೀಯ ಶ್ರೀಗಳ ಗೌರವಾಧ್ಯಕ್ಷತೆಯಲ್ಲಿ 'ಜಾಗೃತ ವೇದಿಕೆ'ಯನ್ನು ಸ್ಥಾಪಿಸಲಾಗಿದೆ. 1997 ರಲ್ಲಿ ಹುಲೇಕಲ್‌ನ ಶ್ರೀದೇವಿ ಶಿಕ್ಷಣ ಸಂಸ್ಥೆಯು ಎಸ್. ಎಸ್. ಎಲ್. ಸಿ. ಮಕ್ಕಳಿಗೆ ಪಕ್ಷಿ ವೀಕ್ಷಣೆಯ ತರಬೇತಿಯನ್ನು ಈ ಮುಂಡಿಗೆಕೆರೆ ಪ್ರದೇಶದಲ್ಲಿ ನೀಡಿದ್ದು ಶ್ಲಾಘನೀಯ. 1998 ರಲ್ಲಿ ಸ್ವರ್ಣವಲ್ಲೀಯ ಶ್ರೀಗಳು ಇಲ್ಲಿಗೆ ಭೇಟಿ ನೀಡಿ ಪಕ್ಷಿಗಳನ್ನು ವೀಕ್ಷಿಸಿದ್ದರು. ಅವರು ಅಲ್ಲಿನ ಪರಿಸರ, ಹಕ್ಕಿಗಳ ಕಲರವವನ್ನು ಕಂಡು "ಇದು ಪಕ್ಷಿಗಳ ಸಾಮ್ರಾಜ್ಯ" ಎಂದು ಕೊಂಡಾಡಿದ್ದಾರೆ.

ಜಾಗೃತ ವೇದಿಕೆ ಶುರುವಾದ ಮೇಲೆ ಈ ಪಕ್ಷಿಧಾಮ ಹಲವು ದೃಷ್ಟಿಯಿಂದ ಪ್ರಸಿದ್ಧವಾಗಿದೆ. ಅದನ್ನು ಉಳಿಸಿಕೊಳ್ಳುವಲ್ಲಿಯೂ ಈ ವೇದಿಕೆ ನಿರಂತರ ಪ್ರಯತ್ನಿಸುತ್ತಿದೆ. ಪ್ರತೀ ವರುಷವೂ ಸಂತಾನಾಭಿವೃದ್ಧಿಗೆ ಬರುವ ಬೆಳ್ಳಕ್ಕಿಗಳ ಸಂಖ್ಯೆಯನ್ನು ದಾಖಲಿಸುತ್ತಿದೆ. 2002 ರಲ್ಲಿ ಇಲ್ಲಿ ಬೆಳ್ಳಕ್ಕಿಗಳ



**ನೆನಪಿಡಿ....**

**ಈ ಬೆಳ್ಳಕ್ಕಿಗಳ ಬಾಣಂತಿ ಕೋಣೆಯಂತಿರುವ ಪಕ್ಷಿಧಾಮವನ್ನು ವೀಕ್ಷಿಸಲು ಮಳೆಗಾಲವೇ ಸೂಕ್ತ. ಜೂನ್‌ನಿಂದ ಅಕ್ಟೋಬರ್‌ವರೆಗೆ ಬೆಳ್ಳಕ್ಕಿಗಳ ಹಾರಾಟ, ಧ್ಯಾನ–ಗಾನದ ಸಂಭ್ರಮ, ಗೂಡಿನಲ್ಲಿದ್ದ ಮರಿಗಳ ಕಿರುಚಾಟ, ಬೆಳ್ಳಕ್ಕಿಗಳು ವಾಸ ಮಾಡುವ ಗೂಡು.... ಇತ್ಯಾದಿ ವೈಭವವನ್ನು ಕಣ್‌ತುಂಬಿಕೊಳ್ಳಬಹುದು. ಅಲ್ಲದೇ, ಕೆರೆಗೆ ರಕ್ಷಣಾ ಕವಚದಂತಿರುವ ಮುಂಡಿಗೆ ವನ, ಹಸಿರಿನಿಂದ ಕಂಗೊಳಿಸುವ ಪರಿಸರ, ಅದೆಲ್ಲದರ ಸಂಭ್ರಮವನ್ನು ಸವಿಯಲು ಸಾಧ್ಯವಿದೆ. ಹಾಗಂತ ಬೆಳ್ಳಕ್ಕಿಗಳನ್ನು ಗೂಡಿನಿಂದ ಎಬ್ಬಿಸಲು ಕಲ್ಲು–ಬಡಿಗೆಯನ್ನು ಎಸೆಯಬೇಡಿ. ಕೆರೆಯ ಆಳವನ್ನು ನೋಡಲು ಹೋಗಬೇಡಿ. ಮುಂಡಿಗೆ ಗಿಡವನ್ನು ಕಡಿಯಲು ಮನಸ್ಸು ಮಾಡಬೇಡಿ. ಈ ಪಕ್ಷಿಧಾಮಕ್ಕೆ ಶಿಸ್ತಿನಿಂದ ಹೋಗಿ.... ಬೆಳ್ಳಕ್ಕಿಗಳ ಚಲನವಲನವನ್ನು ಆಸ್ವಾದಿಸಿ, ಅಲ್ಲಿನ ವೈಭವವನ್ನು ಕಣ್ತುಂಬಿಕೊಳ್ಳಿ.... ಎಂಬುದೇ ಜಾಗೃತ ವೇದಿಕೆಯ ಆಶಯ.**

**ಪ್ರವಾಸಿಗರು ಆಗಸ್ಟ್ ಮತ್ತು ಸೆಪ್ಟಂಬರ್ ಮಾಹೆಯಲ್ಲಿ ಇಲ್ಲಿಗೆ ಪ್ರವಾಸವನ್ನು ಹಮ್ಮಿಕೊಳ್ಳುವುದು ಸೂಕ್ತವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ರತ್ನಾಕರ ಹೆಗಡೆ ಅವರನ್ನು ಈ ದೂರವಾಣಿ ಮೂಲಕ ಸಂಪರ್ಕಿಸಬಹುದು: 8762655024 / 08384 279443**

ಮಾರಣ ಹೋಮ ಸಹಾ ಆಗಿತ್ತು. ಆಮೇಲೆ ಪ್ರತೀ ವರ್ಷ ಜೂನ್‌ನಿಂದ ಅಕ್ಟೋಬರ್‌ವರೆಗೆ ಇಲ್ಲಿ ಕಾವಲುಗಾರನಿಟ್ಟು ಕಾಯಿಸಲಾಗುತ್ತಿದೆ. ಅರಣ್ಯ ಇಲಾಖೆಯೇ ಕಾವಲುಗಾರನನ್ನು ನೇಮಿಸಿ, ವ್ಯವಸ್ಥಿತವಾಗಿ ಮುಂಡಿಗೆಕೆರೆಯನ್ನು ಸಂರಕ್ಷಿಸುತ್ತಿದೆ. ಸ್ಥಳೀಯರಿಗೆ, ಪ್ರವಾಸಿಗರಿಗೆ ಮುಂಡಿಗೆ ವನದಲ್ಲಿರುವ ಬೆಳ್ಳಕ್ಕಿಗಳನ್ನು ವೀಕ್ಷಿಸಲು 2012 ರಲ್ಲಿ ಪಕ್ಷಿ ವೀಕ್ಷಣಾ ಗೋಪುರವನ್ನು ನಿರ್ಮಿಸಲಾಗಿದೆ. ಅದೇ ವರ್ಷ ಪಿ. ಡಿ. ಸುದರ್ಶನ ಅವರು ಸುಮಾರು 80 ಮಕ್ಕಳಿಗೆ ಇದೇ ಸ್ಥಳದಲ್ಲಿ 'ಪಕ್ಷಿ ಸಂರಕ್ಷಣೆಯಲ್ಲಿ ಮಕ್ಕಳ ಪಾತ್ರ'ದ ಕುರಿತು ಉಪನ್ಯಾಸ ಸಹಾ ಮಾಡಿದ್ದರು.

ಬಾಡ್ಲಕೊಪ್ಪದ ಬೆಳ್ಳಕ್ಕಿ ಪಕ್ಷಿಧಾಮವು ಸ್ಥಳೀಯರಿಗಿಂತ ಹೊರಗಿನವರಿಗೆ ಅದರ ಸ್ಥೂಲ ಪರಿಚಯ ಇದ್ದಂತಿದೆ. ಏಕೆಂದರೆ 1992 ರಲ್ಲಿ ಅಂತರಾಷ್ಟ್ರೀಯ ಜಲಚರ ಗಣತಿಯಲ್ಲಿ (I. W. R. B.) ಈ ಮುಂಡಿಗೆ ಕೆರೆ ಸೇರ್ಪಡೆ ಆಗಿರುವುದು ಉಲ್ಲೇಖನೀಯ. ಇಲ್ಲಿನ ಜೀವ ವೈವಿಧ್ಯವನ್ನು ಸಹಾ ದಾಖಲಿಸಲಾಗಿದೆ. ಜಾಗೃತ ವೇದಿಕೆಯೂ ಇಲ್ಲಿನ ಮುಂಡಿಗೆ ವನ ಹಾಗೂ ಬೆಳ್ಳಕ್ಕಿಗಳ ಬಾಣಂತಿ ಕೋಣೆಯಂತಿರುವ ಕೆರೆಯನ್ನು ಉಳಿಸಿಕೊಂಡು, ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಪಣ ತೊಟ್ಟುಕೊಂಡಿದೆ.

ಈ ಪಕ್ಷಿಧಾಮವು ಮುಂಗಾರು ಮಳೆ ಸೂಚಿಸುವ ಕೇಂದ್ರವು ಹೌದು. ಜಾಗೃತ ವೇದಿಕೆಯಲ್ಲಿ ಒಬ್ಬರಾದ ರತ್ನಾಕರ ಹೆಗಡೆ ಬಾಡ್ಲಕೊಪ್ಪ ಅವರ ದಾಖಲೆ ಪ್ರಕಾರ ಇದು ಸತ್ಯ. ಇಲ್ಲಿ ಬೆಳ್ಳಿಕ್ಕಿಗಳು ಮುಂಡಿಗೆ ಗಿಡದ ಮೇಲೆ ಕುಳಿತ 7–8 ದಿನಗಳಲ್ಲಿ ಮಳೆ ಶುರುವಾಗುವುದು ಗ್ಯಾರಂಟಿ. ಬೆಳ್ಳಕ್ಕಿಗಳು ಕುಳಿತುಕೊಳ್ಳದೇ ಮೇಲೆ ಹಾರಾಡುತ್ತಲೇ ಇದ್ದರೆ ಮುಂಗಾರು ಮಳೆ ಆರಂಭವಾಗಲು ಇನ್ನಷ್ಟು ಸಮಯ ಬೇಕು ಎಂದು ಅರ್ಥವೆಂದು ಅವರು ಹೇಳುತ್ತಾರೆ. ಈ ವರ್ಷ (2017 ರಲ್ಲಿ) ಜೂನ್ 09 ಕ್ಕೆ ಬೆಳ್ಳ ಕ್ಕಿಗಳು ಕುಳಿತಿವೆ. ತಿಂಗಳ ಅಂತ್ಯಕ್ಕೆ ಸುಮಾರು 200 ಬೆಳ್ಳಕ್ಕಿಗಳು ಗೂಡು ಕಟ್ಟಲು ಆರಂಭಿಸಿವೆ ಎಂದು ರತ್ನಾಕರ ಹೆಗಡೆ ಹೇಳುತ್ತಾರೆ. ಪಕ್ಷಿಗಳು ಸಹಾ ಮಳೆಯ ಮುನ್ಸೂಚನೆಯನ್ನು ಹೆಳಬಲ್ಲವು ಎಂಬುದು ಅವರ ದಾಖಲೆಯಿಂದ ಅರ್ಥೈಸಿಕೊಳ್ಳಬಹುದು.

ಜಾಗೃತ ವೇದಿಕೆಯು ಪ್ರತಿ ವರ್ಷ ಮಕ್ಕಳಿಗಾಗಿ ಪಕ್ಷಿ ವೀಕ್ಷಣೆ ಮತ್ತು ತರಬೇತಿಯನ್ನು ಪಕ್ಷಿ ತಜ್ಞನ ಸಮ್ಮುಖದಲ್ಲಿಯೇ ನೀಡುತ್ತಿದೆ. ಗುಬ್ಬಚ್ಚಿ ದಿನಾಚರಣೆಯನ್ನು ಸಹಾ ತಪ್ಪದೇ ಆಚರಿಸುತ್ತಾ ಬಂದಿದೆ. ಈ ಪಕ್ಷಿಧಾಮದ ಸಮೀಪ ಶಾಲಾ ಮಕ್ಕಳಿಗೆ ತರಬೇತಿ ನೀಡಲು ಸರ್ವ ಋತುವಿನಲ್ಲಿಯೂ ಅನುಕೂಲವಾಗುವ ಟ್ರೇನಿಂಗ್ ಸೆಂಟರ್ ಆಗಬೇಕೆಂಬ ಕೂಗು ಕೇಳಿಬರುತ್ತಿದೆ. ಪ್ರವಾಸೋದ್ಯಮ ದೃಷ್ಠಿಯಿಂದ ನೋಡಿದರೇ ತರಬೇತಿ ಕೇಂದ್ರ ಅತ್ಯವಶ್ಯಕ.ಕನ್ನಡ ಸಾಂಸ್ಕೃತಿಕ, ಸಾಹಿತ್ಯಿಕ ಲೋಕಕ್ಕೆ ಜಿ.ಬಿ. ಯವರು ಅವರ ಸಾಹಿತ್ಯಿಕ ಕೃಷಿ ಅವರೇ ಕಟ್ಟಿ ಬೆಳೆಸಿದ ಕನ್ನಡದ ಪ್ರಕಾಶನ ಸಂಸ್ಥೆ ಮನೋಹರಗ್ರಂಥಮಾಲೆ ಕನ್ನಡಿಗರು ಮರೆಯುವಂತಿಲ್ಲ.





# ನಮ್ಮ ಶಾಲೆ.. ಮಕ್ಕಳ ಸರ್ಕಾರ..

**ಪರಮೇಶ್ವರಯ್ಯ ಸೊಪ್ಪಿಮಠ**

**ಜಾ**ಗತಿಕ ಮಟ್ಟದಲ್ಲಿ ಉನ್ನತವಾದ ಮಹತ್ವ ಹೊಂದಿರುವ ಸಂಸತ್ತಿನ ಪರಿಕಲ್ಪನೆ ಅನೇಕ ಕಡೆಗಳಲ್ಲಿ ಸಮರ್ಪಕವಾಗಿ ಜಾರಿಗೆ ಬಂದಿದೆ. ಸ್ವಾತಂತ್ರ ನಂತರ ನಮ್ಮ ಭಾರತದ ದೇಶದಲ್ಲಿಯೂ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಿದೆ. ಪ್ರಜೆಗಳಿಂದ. . .ಪ್ರಜೆಗಳಿಗಾಗಿ . . .ಪ್ರಜೆಗಳಿಗೋಸ್ಕರ ಇರುವ ಸರ್ಕಾರವನ್ನು ಪ್ರಜಾಪ್ರಭುತ್ವ ಸರಕಾರ ಎನ್ನಲಾಗುತ್ತದೆ. ಪ್ರಜೆಗಳೇ ಪ್ರಭುಗಳಾಗುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಹಾಗೂ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುವ ದಿಸೆಯಲ್ಲಿ ಶಾಲಾ ಸಂಸತ್ತಿನ ರಚನೆಯನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರಲಾಗಿದೆ. ಈ ಪ್ರಕ್ರಿಯೆಯಿಂದ ಭವಿಷ್ಯದ ನಾಯಕರನ್ನು ಶಾಲಾ ಹಂತದಲ್ಲಿಯೇ ತರಬೇತಿ ಗೊಳಿಸುವ ಆಶಯ ಹೊಂದಲಾಗಿದೆ.

ಶಾಲಾಹಂತದಲ್ಲಿ ಇದರ ಅವಶ್ಯಕತೆ ಇತ್ತೇ? ಎಂದು ಮೂಗು ಮುರಿವವರೂ ಇದ್ದಾರೆ. ಆದರೆ ಅವರು ಶಾಲಾ ಸಂಸತ್ತು ರಚನೆಯ ಹಿಂದಿರುವ ಉದ್ದೇಶಗಳನ್ನು ಸರಿಯಾಗಿ ಅರಿಯಬೇಕು. ಶಾಲಾ ಸಂಸತ್ತು ಅಥವಾ ಸರಕಾರ ರಚನೆಯಿಂದ ಆ ಮಕ್ಕಳಲ್ಲಿ ಸಂವಿಧಾನದ ರಚನೆ, ಆಶಯ ಮತ್ತು ಆದರ್ಶಗಳು ಅರಿವಿಗೆ ಬರುತ್ತವೆ. ವಿದ್ಯಾರ್ಥಿಗಳಲ್ಲಿ ಉತ್ತಮ ನಾಯಕತ್ವ ಗುಣ ಅಂದರೆ ವಿಭಿನ್ನ ಸ್ವಾಭಾವದ ವ್ಯಕ್ತಿಗಳನ್ನು ಒಂದುಗೂಡಿಸುವ ಕೌಶಲ ಬೆಳೆಸುವುದರ ಜೊತೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಅರಿವು ಮತ್ತು ಅಭಿಮಾನವನ್ನು





ಮೂಡಿಸುತ್ತದೆ. ದೇಶದ ಕುರಿತು ಚಿಂತನೆ ಮಾಡುವ ಗುಣವನ್ನು ಇಮ್ಮಡಿ ಗೊಳಿಸುತ್ತದೆ. ಸಹಕಾರ ಮತ್ತು ಒಗ್ಗಟ್ಟಿನ ಮಹತ್ವವನ್ನು ತಿಳಿಸುತ್ತಾ ರಾಜಕೀಯ ಮೌಲ್ಯಗಳನ್ನು ಬೆಳೆಸುತ್ತದೆ. ನೈತಿಕ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಮೂಡಿಸಲು ಸಹಕಾರಿಯಾಗಿದೆ. ಭವಿಷ್ಯದ ಪ್ರಜೆಗಳಾದ ಮಕ್ಕಳು, ಹೊಣೆಗಾರಿಕೆ ಅರಿತು ನಾಳಿನ ಉತ್ತಮ ಬದುಕಿಗಾಗಿ ಉತ್ತಮ ಕೆಲಸಗಳನ್ನು ಮಾಡುವ ಮತ್ತು ಶಿಸ್ತಿನ ಗುಣಗಳಿಗೆ ಶಾಲಾ ಸಂಸತ್ತು ಪ್ರೇರಣೆ ನೀಡುತ್ತದೆ.

ಬಹಳ ಮುಖ್ಯವಾಗಿ ಪ್ರಜಾಪ್ರಭುತ್ವದ ತತ್ವಗಳನ್ನು ತಿಳಿಸುತ್ತಾ, ಸರಕಾರ ಮತ್ತು ಪ್ರಜೆಗಳ ನಡುವಿನ ಸಂಬಂಧವನ್ನು ಪರಿಚಯಿಸುವ ಕಲ್ಪನೆಯನ್ನು ಶಾಲಾ ಸಂಸತ್ತು ಹೊಂದಿದೆ. ಮಕ್ಕಳಲ್ಲಿ ಸಂಸದೀಯ ವ್ಯವಸ್ಥೆಯ ಬಗೆಗೆ ಈಗಿನಿಂದಲೇ ತಿಳಿವಳಿಕೆ ನೀಡುವ ಭಾಗವಾಗಿ ಇದು ಕೆಲಸ ಮಾಡುತ್ತದೆ. ಶಾಲಾ ಸಂಸತ್ತಿನಲ್ಲಿ ಮಕ್ಕಳು ಒಂದು ತಂಡವಾಗಿ ಕೆಲಸ ಮಾಡಲು ಪ್ರಾರಂಭಿಸುತ್ತಾರೆ. ಅದರಿಂದ ತಂಡದ ಸದಸ್ಯರ ನಡುವೆ ಬೆಸೆಯುವ ಬಂಧ ಮತ್ತು ಸಾಂಘಿಕ ಪ್ರಯತ್ನಕ್ಕೆ ಅಣಿಗೊಳಿಸುತ್ತದೆ. ಒಬ್ಬರ ದೌರ್ಬಲ್ಯವನ್ನು ಇನ್ನೊಬ್ಬರ ಬಲ ಮರೆಸುತ್ತದೆ. ಗುಂಪಾಗಿ ಕೆಲಸ ಮಾಡುತ್ತಾ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳಿಗೆ ತಕ್ಕಂತೆ ಕೆಲಸ ನಿರ್ವಹಿಸುವ ಗುಣ ಮೈಗೂಡಿಸಿಕೊಳ್ಳುತ್ತಾರೆ. ಮಕ್ಕಳಲ್ಲಿನ ವಿಶೇಷ ಗುಣ ಅಥವಾ ಪ್ರತಿಭೆಗಳ ಗುರುತಿಸುವಿಕೆ ಮತ್ತು ಹೆಚ್ಚಿಸುವಿಕೆ ಇದರಿಂದ ಸಾಧ್ಯವಾಗುತ್ತದೆ. ನಾನು ನಿನಗೆ.. ನೀನು ನನಗೆ ಎನ್ನುತ್ತಾ ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬ ತತ್ವವನ್ನು ಮಕ್ಕಳಿಗೆ ಇದು ಮನವರಿಕೆ ಮಾಡಿಕೊಡುತ್ತದೆ.

ಇಂತಹ ಮಹತ್ತರ ಆಶಯವನ್ನು ಹೊಂದಿರುವ ಶಾಲಾ ಸಂಸತ್ತನ್ನು ಕಾಟಾಚಾರಕ್ಕೆ ರಚನೆ ಮಾಡುವುದರಿಂದ ಏನೂ ಲಾಭವಿಲ್ಲ. ಶಾಲಾ ಹಂತದಲ್ಲಿ ಮಕ್ಕಳೆದರು ಅಕ್ಷರಶಃ ಪ್ರಜಾಪ್ರಭುತ್ವ ಮಾದರಿಯಲ್ಲಿಯೇ ರಚನೆ ಮಾಡುವುದು ಸೂಕ್ತ. ಅಂದರೆ ಪ್ರಜಾ ಪ್ರಭುತ್ವದ ಪರಿಕಲ್ಪನೆ, ಚುನಾವಣಾ ಪದ್ಧತಿ, ಮತದಾನ ಮಾಡುವ ಅಧಿಕಾರ, ಚುನಾಯಿತ ಪ್ರತಿನಿಧಿಗಳ ಜವಾಬ್ದಾರಿ ಕುರಿತು ಮಕ್ಕಳಿಗೆ ಮನನ ಮಾಡಿಸಿದರೆ ಹೆಚ್ಚು ಪರಿಣಾಮ ಕಾಣಬಹುದಾಗಿದೆ.

**ಚುನಾವಣಾ ಪ್ರಕ್ರಿಯೆ:** ಚುನಾವಣೆ ಅಧಿಸೂಚನೆ ಹೊರಡಿಸುವುದರೊಂದಿಗೆ ಶಾಲಾ ಸಂಸತ್ತಿನ ಚುನಾವಣೆ ಪ್ರಕ್ರಿಯೆ ಆರಂಭವಾಗುತ್ತದೆ. ನಾಮಪತ್ರ ಸಲ್ಲಿಕೆ, ನಾಮಪತ್ರ ಪರಿಶೀಲನೆ, ನಾಮಪತ್ರ ವಾಪಸ್ ಪಡೆಯುವುದು, ಪ್ರಚಾರ ಕಾರ್ಯ, ಚುನಾವಣೆ ದಿನಾಂಕ, ಮತ ಎಣಿಕೆ, ಫಲಿತಾಂಶ ಘೋಷಣೆ, ಪ್ರಮಾಣ ವಿತರಣೆ, ಪ್ರಮಾಣ ವಚನ ಸ್ವೀಕಾರ ಹೀಗೆ ಎಲ್ಲವೂ ಸಂಸತ್ತಿನ ಮಾದರಿಯಲ್ಲಿಯೇ ಶಾಲಾ ಹಂತದಲ್ಲಿ ನಡೆಯಬೇಕು ಎಂಬ ಆಶಯವಿದೆ. ಇದಕ್ಕೆ ಪೂರಕವಾಗಿ ಶಿಕ್ಷಕರು ಒಂದಷ್ಟು ಶ್ರಮ ಹಾಕಿದರೆ ಸಾಕು. ಈ ಪ್ರಕ್ರಿಯೆ ಶಾಲೆಯಲ್ಲಿ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ.

ಶಾಲಾ ಹಂತದಲ್ಲಿ ಅಗತ್ಯಕ್ಕೆ ತಕ್ಕನಾಗಿ ಅಂದರೆ ಪ್ರಧಾನ ಮಂತ್ರಿ, ಗ್ರಂಥಾಲಯ ಸಚಿವ, ಶಿಕ್ಷಣ ಸಚಿವ, ಕ್ರೀಡಾ ಸಚಿವ, ಸಾಂಸ್ಕೃತಿಕ ಹಾಗೂ ಪ್ರವಾಸ ಸಚಿವ, ಆಹಾರ ಸಚಿವ, ಸ್ವಚ್ಛತಾ ಸಚಿವ, ಆರೋಗ್ಯ ಸಚಿವ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ.... ಸಚಿವ/ಸಚಿವೆ ಸ್ಥಾನಗಳಿಗೆ ಚುನಾವಣೆ ನಡೆಸ ಬಹುದಾಗಿದೆ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸಚಿವ ಸ್ಥಾನಗಳಿಗೆ ಸ್ವಲ್ಪ ಹಣವನ್ನು ಠೇವಣಿಯಾಗಿ ಇಡಬೇಕು. ಮತದಾರರಿಗೆ ಆಸೆ–ಆಮಿಷಗಳನ್ನು ಒಡ್ಡಬಾರದು. ಬೆದರಿಕೆ ಹಾಕಬಾರದು. ಪರಸ್ಪರ ಟೀಕೆ ಮಾಡಿಕೊಳ್ಳಬಾರದು. ಸ್ಪರ್ಧೆ ಚುನಾವಣೆಗಷ್ಟೇ ಸಿಮಿತವಾಗಬೇಕು ಎಂಬ ನಿಯಮಗಳನ್ನು ಮಕ್ಕಳಿಗೆ ತಿಳಿಸಿ ಹೇಳುವುದನ್ನು ಮರೆಯಬಾರದು.

ಶಾಲೆಯ ಚುನಾವಣಾ ಪ್ರಕ್ರಿಯೆ ಮುಗಿದ ಮೇಲೆ, ಶಾಲಾ ಸಂಸತ್ತಿನ ಉದ್ಘಾಟನಾ ಕಾರ್ಯಕ್ರಮವನ್ನು





ಅಯೋಜಿಸಬಹುದು. ಅದರಲ್ಲಿ ಸ್ಥಳೀಯ ಮುಖಂಡರಿಂದ ಪ್ರತಿಜ್ಞಾ ವಿಧಿಯನ್ನು ಬೋಧಿಸಿದಲ್ಲಿ ನೂತನ ಪ್ರತಿನಿಧಿಗಳ ಸಂತಸ ನೋಡುವುದೇ ಒಂದು ಸೊಬಗು. ಆಯ್ಕೆಯಾದವರಿಗೆ ವಿವಿಧ ಖಾತೆಗಳನ್ನು ಹಂಚಿ ಸಚಿವ ಸಂಪುಟದ ರಚನೆ ಮಾಡುತ್ತಾ, ಅಗತ್ಯವಿದ್ದರೆ ಕೆಲವು ಸದಸ್ಯರ ನಾಮ ನಿರ್ದೇಶನವನ್ನೂ ಮಾಡಬಹುದು. ಅಲ್ಲಿಗೆ ಆಯ್ಕೆ ಪ್ರಕಿಯೆ ಮುಗಿಯುತ್ತದೆ.

ಶಾಲಾ ಸಂಸತ್ತು ಪ್ರತಿ ತಿಂಗಳು ಒಂದು ನಿಗಧಿಯಾದ ದಿನದಂದು, ಶಾಲೆಯ ಗ್ರಂಥಾಲಯ ಅಥವಾ ಸಭಾಂಗಣದಲ್ಲಿ, ಮುಖ್ಯಗುರುಗಳ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ, ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಸಭೆ ನಡೆಸುವುದು ಸೂಕ್ತ. ಸಭೆಯಲ್ಲಿ ಮಕ್ಕಳ ಮತ್ತು ಶಾಲಾ ಸಮಸ್ಯೆಗಳ ಬಗೆಗೆ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಆಯಾ ಇಲಾಖೆ ಸಚಿವರು ತಮ್ಮ ಪ್ರಗತಿ ತಿಳಿಸುತ್ತಾರೆ. ಆಗಬೇಕಾದ ಅಭಿವೃದ್ಧಿ ಕೆಲಸಗಳ ಕುರಿತು ಚರ್ಚೆ ನಡೆಸಿದಲ್ಲಿ ಆ ಶಾಲೆಯು ಅಭಿವೃದ್ಧಿ ಚಿತ್ರಣ ಬದಲಾಗುತ್ತದೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ.

ಶಾಲೆಯಲ್ಲಿ ನಡೆವ ಕಾರ್ಯಕ್ರಮಗಳ ಜವಾಬ್ದಾರಿ, ರಾಷ್ಟ್ರೀಯ ಹಬ್ಬಗಳಲ್ಲಿ ಮುಂದಾಳತ್ವ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗಳನ್ನು ವಿದ್ಯಾರ್ಥಿಗಳೇ ನಿರ್ವಹಿಸುವಂತಾಗುತ್ತಾರೆ. ಪ್ರಾರ್ಥನಾ ಸಭೆ ನಿರ್ವಹಣೆ, ಸ್ವಚ್ಛತೆ, ಶಿಸ್ತು ಕಾಪಾಡುವಿಕೆ, ಪರಿಸರ ಸಂರಕ್ಷಣೆ, ಶಾಲಾ ಕೈತೋಟವನ್ನೂ ಮಕ್ಕಳೆ ಸ್ವತಂತ್ರವಾಗಿ ನಿರ್ವಹಣೆ ಮಾಡುವಷ್ಟು ಪ್ರಬುದ್ಧತೆ ಅವರಲ್ಲಿ ಖಂಡಿತವಾಗಿ ಬೆಳೆಯುವುದರಲ್ಲಿ ಅನುಮಾನವಿಲ್ಲ. ಇಂದಿನ ಮಕ್ಕಳ ಚಿಕ್ಕ ಚಿಕ್ಕ ಯಶಸ್ಸುಗಳೇ ಮುಂದಿನ ದೊಡ್ಡ ಸಾಧನೆಗೆ ಭದ್ರ ಬುನಾದಿ ಒದಗಿಸುತ್ತವೆ ಎಂಬ ಮಾತಿಗೆ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ. . . .ವಿದ್ಯಾರ್ಥಿಗಳಿಗಾಗಿ... ವಿದ್ಯಾರ್ಥಿಗಳಿಗೋಸ್ಕರ ಇರುವ ಸರಕಾರ ಶಾಲಾ ಸಂಸತ್ತು ಉತ್ತಮ ಮಾದರಿಯಾಗಿದೆ.

ವ್ಯಕ್ತಿಯು ವಯಕ್ತಿಕವಾಗಿ ಸಾಧನೆ ಮಾಡಲಾರದ್ದನ್ನು ಸಂಘದ ಮೂಲಕ ಸಾಧಿಸಿ ತೋರಿಸಬಹುದು. ಅದಕ್ಕೆ ನಾವು ದಿನನಿತ್ಯ ಹಲವಾರು ನಿದರ್ಶನಗಳನ್ನು ನೋಡುತ್ತಿದ್ದೇವೆ. "ಒಗ್ಗಟ್ಟಿನಲ್ಲಿ ಬಲವಿದೆ"ಎಂಬ ಮಾತು ಸಂಘದ ಚಟುವಟಿಕೆಗೆ ಪ್ರೇರಣೆ. ಶಾಲೆಯ ವಿವಿಧ ಸಂಘಗಳ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ನಾಯಕತ್ವಗುಣ, ಸಹಕಾರ ಮನೋಭಾವ ಮತ್ತು ಸಾಮಾಜಿಕ ಮೌಲ್ಯಗಳು ಮಗುವಿನ ಹೃದಯದಲ್ಲಿ ಅರಳುತ್ತವೆ.

ಶಾಲೆಗಳಲ್ಲಿ ಶಾಲಾ ಮಂತ್ರಿಮಂಡಲ ಜೊತೆಗೆ ವಿಜ್ಞಾನ ಸಂಘ, ಗಣಿತ ಸಂಘ, ಸಾಹಿತ್ಯ ಸಂಘ, ಮೀನಾ, ಕಲಾ ಸಂಘ, ಸಾಹಸ ಸಂಘ, ಇಕೋ ಕ್ಲಬ್, ಗ್ರಾಹಕ ಕ್ಲಬ್, ಶಾಲಾ ಬ್ಯಾಂಕ್, ರೆಡ್ ರಿಬ್ಬನ್ ಕ್ಲಬ್, ಕ್ರೀಡಾ ಸಂಘ, ಮಕ್ಕಳ ಹಕ್ಕುಗಳ ಕ್ಲಬ್, .ಹೀಗೆ ವಿವಿಧ ಸಂಘಗಳನ್ನು ರಚಿಸುವುದರಿಂದ ಮಕ್ಕಳಲ್ಲಿ ಚಿಂತನೆ, ಆಲೋಚನೆ, ಸಂಶೋಧನಾ ಮತ್ತು ಸೃಜನಶೀಲ ಮನೋಭಾವ ಬೆಳವಣಿಗೆಗೆ ಅವಕಾಶ ನೀಡಿದಂತಾಗುತ್ತದೆ. ■




# ಭಾರತ ಸಂವಿಧಾನ
# ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050